**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತಾರನೆಯ ಅಧಿವೇಶನ**

# ಕರ್ನಾಟಕ ನಿರಪರಾಧೀಕರಣ (ಉಪಬಂಧಗಳ ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–59)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಅಪರಾಧಗಳನ್ನು ನಿರಪರಾಧೀಕರಿಸಲು ಮತ್ತು ತರ್ಕಬದ್ಧಗೊಳಿಸುವುದಕ್ಕಾಗಿ ಕೆಲವು ಅಧಿನಿಯಮಗಳನ್ನು ತಿದ್ದುಪಡಿ ಮಾಡಲು ಹಾಗೂ ಬದುಕುವುದು ಮತ್ತು ವ್ಯವಹಾರ ನಡೆಸುವುದನ್ನು ಸರಾಗಗೊಳಿಸುವುದಕ್ಕಾಗಿ ನಂಬಿಕೆ-ಆಧಾರಿತ ಆಡಳಿತವನ್ನು ಮತ್ತಷ್ಟು ವೃದ್ಧಿಸಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಪರಾಧಗಳನ್ನು ನಿರಪರಾಧೀಕರಿಸಲು ಮತ್ತು ತರ್ಕಬದ್ಧಗೊಳಿಸುವುದಕ್ಕಾಗಿ ಕೆಲವು ಅಧಿನಿಯಮಗಳನ್ನು ತಿದ್ದುಪಡಿ ಮಾಡಲು ಹಾಗೂ ಬದುಕುವುದು ಮತ್ತು ವ್ಯವಹಾರ ನಡೆಸುವುದನ್ನು ಸರಾಗಗೊಳಿಸುವುದಕ್ಕಾಗಿ ನಂಬಿಕೆ-ಆಧಾರಿತ ಆಡಳಿತವನ್ನು ಮತ್ತಷ್ಟು ವೃದ್ಧಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ.–

1. **ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.**– (1) ಈ ಅಧಿನಿಯಮವನ್ನು ಕರ್ನಾಟಕ ನಿರಪರಾಧೀಕರಣ (ಉಪಬಂಧಗಳ ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಕರ್ನಾಟಕ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಹಾಗೂ ಬೇರೆಬೇರೆ ಅಧಿನಿಯಮಗಳಿಗೆ ಸಂಬಂಧಿಸಿದ ತಿದ್ದುಪಡಿಗಳಿಗಾಗಿ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

(3) ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಯಾವುದೇ ಅಧಿನಿಯಮವು, ಯಾವ ಇತರ ಅಧಿನಿಯಮಗಳಿಗೆ ತಿದ್ದುಪಡಿ ಅಧಿನಿಯಮವನ್ನು ಅನ್ವಯಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಲ್ಲೇಖಿಸಲಾಗಿದೆಯೋ, ಆ ಇತರ ಯಾವುದೇ ಅಧಿನಿಯಮಕ್ಕೆ ಬಾಧಕವಾಗತಕ್ಕದ್ದಲ್ಲ ;

(4) ಈ ಅಧಿನಿಯಮವು ಈಗಾಗಲೇ ಮಾಡಿದ ಅಥವಾ ಮಾಡಲು ಎಡೆಮಾಡಿಕೊಟ್ಟ ಯಾವುದೇ ಕಾರ್ಯದ, ಅಥವಾ ಈಗಾಗಲೇ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಸ್ವಾಮ್ಯ, ಹೊಣೆ ಅಥವಾ ದಾಯಿತ್ವದ, ಅಥವಾ ಅದರ ಸಂಬಂಧದಲ್ಲಿ ಯಾವುದೇ ಪರಿಹಾರ ಅಥವಾ ವ್ಯವಹರಣೆಯ, ಅಥವಾ ಯಾವುದೇ ಋಣ, ದಂಡನೆ, ಹೊಣೆ, ದಾಯಿತ್ವ, ಕ್ಲೇಮು ಅಥವಾ ಕೋರಿಕೆಯ ಅಥವಾ ಅದರಿಂದ ಯಾವುದೇ ಬಿಡುಗಡೆ ಅಥವಾ ವಿಮೋಚನೆಯ, ಅಥವಾ ಈಗಾಗಲೇ ನೀಡಿರುವ ನಷ್ಟಭರ್ತಿಯ, ಅಥವಾ ಯಾವುದೇ ಹಿಂದಿನ ಕೃತ್ಯ ಅಥವಾ ಕಾರ್ಯದ ರುಜುವಾತಿನ ಮಾನ್ಯತೆ, ಅಮಾನ್ಯತೆ, ಪ್ರಭಾವ ಅಥವಾ ತತ್ಪರಿಣಾಮಗಳಿಗೆ ಬಾಧಕವಾಗತಕ್ಕದ್ದಲ್ಲ ;

(5) ಈ ಅಧಿನಿಯಮವು ಕಾನೂನಿನ ಯಾವುದೇ ಸೂತ್ರವನ್ನು ಅಥವಾ ನಿಯಮವನ್ನು, ಅಥವಾ ಸುಸ್ಥಾಪಿತವಾದ ಅಧಿಕಾರ ವ್ಯಾಪ್ತಿಯನ್ನು, ವಾದದ, ರೂಢಿಯ ಅಥವಾ ಕಾರ್ಯವಿಧಾನದ ಸ್ವರೂಪ ಅಥವಾ ಕ್ರಮವನ್ನು, ಅಥವಾ ಈಗ ಇರುವ ಪದ್ಧತಿ, ಆಚರಣೆ, ವಿಶೇಷಾಧಿಕಾರ, ನಿರ್ಬಂಧ ವಿನಾಯಿತಿ, ಹುದ್ದೆ ಅಥವಾ ನೇಮಕವನ್ನು ಈ ಮೂಲಕ ತಿದ್ದುಪಡಿಯಾದ ಯಾವುದೇ ಅಧಿನಿಯಮದ ಮೂಲಕ, ಅದರಲ್ಲಿ ಅಥವಾ ಇದರಿಂದ ಯಾವುದೇ ರೀತಿಯಲ್ಲಿ ಇವುಗಳನ್ನು ಅನುಕ್ರಮವಾಗಿ ಸ್ಥಿರೀಕರಿಸಿರಬಹುದಾಗಿದ್ದರೂ ಅಥವಾ ಮಾನ್ಯ ಮಾಡಿರಬಹುದಾಗಿದ್ದರೂ ಅಥವಾ ಪಡೆದಿರಬಹುದಾಗಿದ್ದರೂ ಸಹ ಬಾಧಿಸತಕ್ಕದ್ದಲ್ಲ;

(6) ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಯಾವುದೇ ಅಧಿನಿಯಮವು, ಈಗ ಅಸ್ತಿತ್ವದಲ್ಲಿಲ್ಲದ ಅಥವಾ ಜಾರಿಯಲ್ಲಿಲ್ಲದ ಯಾವುದೇ ಹುದ್ದೆ, ರೂಢಿ, ದಾಯಿತ್ವ, ಹಕ್ಕು, ಸ್ವಾಮ್ಯ,

ವಿಶೇಷಾಧಿಕಾರ, ನಿರ್ಬಂಧ, ವಿನಾಯಿತಿ, ಆಚರಣೆ, ಪದ್ಧತಿ, ಕಾರ್ಯವಿಧಾನ, ವಿಲೀನ ಅಥವಾ ಇತರ ವಿಷಯವನ್ನು ಅಥವಾ ಕಾರ್ಯವನ್ನು ಪುನಃ ಜಾರಿಗೊಳಿಸತಕ್ಕದ್ದಲ್ಲ ಅಥವಾ ಪೂರ್ವಸ್ಥಿತಿಗೆ ತರತಕ್ಕದ್ದಲ್ಲ.

**2. 1964ರ ಕರ್ನಾಟಕ ಅಧಿನಿಯಮ 36ರ ತಿದ್ದುಪಡಿ.-** ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 36)ರಲ್ಲಿ,-

(1) 62ನೇ ಪ್ರಕರಣದಲ್ಲಿ,-

(ಎ) ಖಂಡ (ಬಿ) ಯಲ್ಲಿ ''ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಅಥವಾ '' ಎಂಬ ಪದಗಳನ್ನು ತೆಗೆದುಹಾಕತಕ್ಕದ್ದು ;

(ಬಿ) ಖಂಡ (i)ರಲ್ಲಿ,-

(i) ''ಜುಲ್ಮಾನೆಯಿಂದ '' ಎಂಬ ಪದದ ಬದಲಿಗೆ ''ದಂಡದಿಂದ'' ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು ; ಮತ್ತು

(ii) ''ಅಥವಾ ಎರಡರಿಂದಲೂ '' ಎಂಬ ಪದಗಳನ್ನು ತೆಗೆದುಹಾಕತಕ್ಕದ್ದು ;

(ಸಿ) ಕೋಷ್ಟಕ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳ ಬದಲಿಗೆ ಈ ಮುಂದಿನ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

**"ಕೋಷ್ಟಕ**

| **ಅಧಿನಿಯಮದ ಉಪಬಂಧಗಳು** | **ವಿಷಯ** | **ವಿಧಿಸಬಹುದಾದಂಥ ಗರಿಷ್ಠ ದಂಡ** | **ವಿಧಿಸಬಹುದಾದಂಥ ನಿತ್ಯದ ದಂಡ** |
|---|---|---|---|
| **1** | **2** | **3** | **4** |
| ಪ್ರಕರಣ 28 | ನೀರು ಸರಬರಾಜಿಗೆ ಸಂಬಂಧಿಸಿದ ಆವರಣಗಳ ಮೇಲೆ ಅತಿಕ್ರಮಣ ಮಾಡುವುದು | 10,000 | - |
| ಪ್ರಕರಣ 30 | ವಿನಿಮಯಗಳಿಗೆ ಅನುಗುಣವಾಗಿ ಮನೆ ಜೋಡಣೆಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು ಬರುವುದಕ್ಕೆ ತಪ್ಪುವುದು | 10,000 | - |
| ಪ್ರಕರಣ 32 ಉಪಪ್ರಕರಣ (2) | ಸರಿಯಾದ ನೀರು ಸರಬರಾಜು ಇಲ್ಲದ ಮನೆಯನ್ನು ಅಧಿಭೋಗಕ್ಕೆ ತೆಗೆದುಕೊಳ್ಳುವುದು ಅಥವಾ ಅಧಿಭೋಗಕ್ಕೆ ಅವಕಾಶ ಮಾಡಿಕೊಡುವುದು | 10,000 | - |
| ಪ್ರಕರಣ 32 ಉಪಪ್ರಕರಣ (3) | ಮನೆ ಜೋಡಣೆಗಳನ್ನು ಮಾಡುವ ಬಗ್ಗೆ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪುವುದು | 10,000 | 100 |
| ಪ್ರಕರಣ 34 | ಗೃಹ ಉದ್ದೇಶಗಳಿಗಾಗಿ ಸರಬರಾಜು ಮಾಡಿದ | 50,000 | 100 |

| | | | |
|---|---|---|---|
| | ನೀರನ್ನು ಗೃಹೇತರ ಉದ್ದೇಶಗಳಿಗಾಗಿ ಉಪಯೋಗಿಸುವುದು | | |
| ಪ್ರಕರಣ 49 | ನೀರಿನ ಪೋಲು ಅಥವಾ ಅದರ ದುರುಪಯೋಗ | 50,000 | - |
| ಪ್ರಕರಣ 50 | ಪ್ರವೇಶಿಸಲು ಅವಕಾಶ ನೀಡುವುದು ಇತ್ಯಾದಿಗಳನ್ನು ನಿರಾಕರಿಸುವುದು | 10,000 | - |
| ಪ್ರಕರಣ 52 ಉಪಪ್ರಕರಣ (1) | ನೀರಿನ ಕೊಳವೆಗಳು ಮುಂತಾದವುಗಳನ್ನು ಅವುಗಳಿಗೆ ಹಾನಿಯಾಗಬಹುದಾದ ಅಥವಾ ಅದರಲ್ಲಿ ನೀರು ಮಲಿನವಾಗಬಹುದಾದ ಸ್ಥಳದಲ್ಲಿ ಹಾಕುವುದು | 50,000 | 100 |
| ಪ್ರಕರಣ 59 ಉಪಪ್ರಕರಣ (1) | ಲೈಸೆನ್ಸ್ ಪಡೆದ ಕೊಳಾಯಿಗಾರನು ಹೊರತುಪಡಿಸಿ ಯಾವೊಬ್ಬ ಇತರ ವ್ಯಕ್ತಿಯಿಂದ ಕಾಮಗಾರಿಯ ನಿರ್ವಹಣೆ | 20,000 | - |
| ಪ್ರಕರಣ 59 ಉಪಪ್ರಕರಣ (2) | ನಿಯೋಜಿಸಿಕೊಂಡ ಲೈಸೆನ್ಸುಗಳು | 10,000 | - |
| ಪ್ರಕರಣ 59 ಉಪಪ್ರಕರಣ (6) | ಲೈಸೆನ್ಸ್ ಪಡೆದ ಕೊಳಾಯಿಗಾರನು ನಿಯಮಿಸಿದ ಚಾರ್ಜುಗಳಿಗಿಂತ ಹೆಚ್ಚಿನದನ್ನು ತಗಾದೆ ಮಾಡತಕ್ಕದ್ದಲ್ಲ, | 10,000 | - |
| ಪ್ರಕರಣ 59 ಉಪಪ್ರಕರಣ (8) | ಲೈಸೆನ್ಸ್ ಪಡೆದ ಕೊಳಾಯಿಗಾರನು ವಿನಿಮಯಗಳನ್ನು ಉಲ್ಲಂಘಿಸಬಾರದು ಅಥವಾ ಅಜಾಗರೂಕತೆಯಿಂದ ಅಥವಾ ನಿರ್ಲಕ್ಷ್ಯದಿಂದ ಕಾಮಗಾರಿಯನ್ನು ನಿರ್ವಹಿಸಬಾರದು | 10,000 | - |
| ಪ್ರಕರಣ 60 | ನೀರು ಸರಬರಾಜು ಗೃಹಕ್ಕೆ ಸಂಬಂಧಪಟ್ಟಂತೆ ಉದ್ದೇಶಪೂರ್ವಕ | 50,000 | - |

| | | | |
|---|---|---|---|
| | ಅಥವಾ ನಿರ್ಲಕ್ಷ್ಯ ಕಾರ್ಯಗಳ ಬಗ್ಗೆ ನಿಷೇಧ | | |

''

(2) 85ನೇ ಪ್ರಕರಣದಲ್ಲಿ,-

(ಎ) ಖಂಡ (ಬಿ)ಯಲ್ಲಿ ''ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಅಥವಾ '' ಎಂಬ ಪದಗಳನ್ನು ತೆಗೆದುಹಾಕತಕ್ಕದ್ದು;

(i) ಖಂಡ (i)ರಲ್ಲಿ ''ಜುಲ್ಮಾನೆಯಿಂದ '' ಎಂಬ ಪದದ ಬದಲಿಗೆ ''ದಂಡದಿಂದ'' ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು ; ಮತ್ತು

(ii) ''ಅಥವಾ ಎರಡರಿಂದಲೂ '' ಎಂಬ ಪದಗಳನ್ನು ತೆಗೆದುಹಾಕತಕ್ಕದ್ದು ;

(ಬಿ) ಕೋಷ್ಟಕ ಮತ್ತು ನಮೂದುಗಳ ಬದಲಿಗೆ ಈ ಮುಂದಿನ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

**"ಕೋಷ್ಟಕ**

| **ಅಧಿನಿಯಮದ ಉಪಬಂಧಗಳು** | **ವಿಷಯ** | **ವಿಧಿಸಬಹುದಾದಂಥ ಗರಿಷ್ಟ ದಂಡ** | **ವಿಧಿಸಬಹುದಾದಂಥ ದೈನಂದಿನ ದಂಡ** |
|---|---|---|---|
| 1 | 2 | 3 | 4 |
| ಪ್ರಕರಣ 65 | ಮಂಡಳಿಯ ಗ್ರಾಮಸಾರ ಚರಂಡಿಗಳು ಅಥವಾ ಮಂಡಳಿಯ ಗ್ರಾಮಸಾರ ಚರಂಡಿಗಳೊಂದಿಗೆ ಸಂಪರ್ಕವನ್ನು ಹೊಂದಿರುವ ಚರಂಡಿಗಳಲ್ಲಿ ನೀರು ನಿರಾತಂಕವಾಗಿ ಹರಿದು ಹೋಗುವುದಕ್ಕೆ ಹಾನಿ ಅಥವಾ ಅಡ್ಡಿಯನ್ನುಂಟು ಮಾಡುವುದು | 50,000 | 500 |
| ಪ್ರಕರಣ 66 ಉಪ ಪ್ರಕರಣ (2) | ನೋಟೀಸು ಇಲ್ಲದೆ ಮಂಡಳಿಯ ಗ್ರಾಮಸಾರ ಚರಂಡಿಗಳೊಂದಿಗೆ ಖಾಸಗಿ ಚರಂಡಿಯನ್ನು ಕೂಡಿಸತಕ್ಕದ್ದಲ್ಲ | 10,000 | 100 |
| ಪ್ರಕರಣ 67 | ಚರಂಡಿ ವ್ಯವಸ್ಥೆ ಇಲ್ಲದ ಆವರಣಕ್ಕೆ ಚರಂಡಿ ವ್ಯವಸ್ಥೆ ಮಾಡಲು ಕಡ್ಡಾಯ ಕೋರಿಕೆಯನ್ನು ಪಾಲಿಸದಿರುವುದು | 20,000 | 200 |
| ಪ್ರಕರಣ 68 | ಚರಂಡಿಗಳಿಲ್ಲದೆ ಹೊಸ ಆವರಣದ ನಿರ್ಮಾಣ | 50,000 | - |
| ಪ್ರಕರಣ 69 | ಆವರಣಗಳ ಯಾವುದೇ ಗುಂಪು ಅಥವಾ ಬ್ಲಾಕುಗಳಿಗಾಗಿ ಚರಂಡಿ ವ್ಯವಸ್ಥೆಯ ಕಾಮಗಾರಿಗಳ ನಿರ್ವಹಣೆಗಾಗಿ ಮಾಡಿದ ಕೋರಿಕೆಯನ್ನು ಪಾಲಿಸದಿರುವುದು | 50,000 | - |
| ಪ್ರಕರಣ 70 | ಕೆಲವು ಸಂಧರ್ಭಗಳಲ್ಲಿ ಖಾಸಗಿ ಚರಂಡಿಗಳನ್ನು | 50,000 | - |

| | | | |
|---|---|---|---|
| | ಮುಚ್ಚಲು ಅಥವಾ ಅವುಗಳ ಉಪಯೋಗವನ್ನು ಸೀಮಿತಗೊಳಿಸುವ ನಿರ್ದೇಶನವನ್ನು ಪಾಲಿಸದಿರುವುದು | | |
| ಪ್ರಕರಣ 71 | ಚರಂಡಿಯ ಒಡೆಯನಲ್ಲದ ಇತರ ವ್ಯಕ್ತಿಯು ಅದನ್ನು ಉಪಯೋಗಿಸುವುದರ ಬಗ್ಗೆ ನೈರ್ಮಲ್ಯ ಇಂಜಿನಿಯರನ ಆದೇಶಗಳನ್ನು ಪಾಲಿಸದಿರುವುದು | 50,000 | - |
| ಪ್ರಕರಣ 72 | ಗ್ರಾಮಸಾರ ಚರಂಡಿ ವ್ಯವಸ್ಥೆ ಮತ್ತು ಮಳೆಯ ನೀರು ಚರಂಡಿಗಳನ್ನು ಪ್ರತ್ಯೇಕವಾಗಿಡುವುದಕ್ಕಾಗಿ ಮಾಡಿದ ಕೋರಿಕೆಯನ್ನು ಪಾಲಿಸದಿರುವುದು | 50,000 | - |
| ಪ್ರಕರಣ 73 | ಅಂಗಳ ಇತ್ಯಾದಿ ಗಳನ್ನು ನೆಲಗಟ್ಟು ಮಾಡುವುದಕ್ಕಾಗಿ ಮಾಡಿದ ಕೋರಿಕೆಯನ್ನು ಪಾಲಿಸದಿರುವುದು | 10,000 | - |
| ಪ್ರಕರಣ 75 | ಲಿಖಿತ ನಿರ್ಬಂಧ ಇಲ್ಲದೆ ಮಂಡಳಿಯಗ್ರಾಮಸಾರ ಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | 50,000 | 500 |
| ಪ್ರಕರಣ 78 ಉಪ ಪ್ರಕರಣ (4) | ಕೊಳವೆ ಅಥವಾ ಚರಂಡಿಯನ್ನು ಮುಚ್ಚಲು, ತೆಗೆದುಹಾಕಲು ಅಥವಾ ಮಾರ್ಗಪಲ್ಲಟ ಮಾಡುವ ಬಗ್ಗೆ ಮಾಡುವ ಬಗ್ಗೆ ಮಾಡಿದ ಕೋರಿಕೆಯನ್ನು ಪಾಲಿಸದಿರುವುದು | 50,000 | 500 |
| ಪ್ರಕರಣ 82 ಉಪ ಪ್ರಕರಣ (1) | ಲೈಸೆನ್ಸು ಪಡೆದ ಕೊಳಾಯಿಗಾರನನ್ನು ಹೊರತುಪಡಿಸಿ, ಇತರ ವ್ಯಕ್ತಿಯು ಕಾಮಗಾರಿಯನ್ನು ನಿರ್ವಹಿಸುವುದು | 50,000 | - |
| ಪ್ರಕರಣ 82 ಉಪ ಪ್ರಕರಣ (2) ಪ್ರಕರಣ 59 (2) | ನಿಯೋಜಿಸಿಕೊಂಡ ಲೈಸೆನ್ಸು ಪಡೆದ ಕೊಳಾಯಿಗಾರನ ಹೆಸರನ್ನು ಒದಗಿಸಲು ಅಗತ್ಯಪಡಿಸಿದಾಗ | 10,000 | - |

| | | | |
|---|---|---|---|
| ಇದರೊಂದಿಗೆ ಓದಿಕೊಂಡು | ತಪ್ಪುವುದು | | |
| ಪ್ರಕರಣ 82 ಉಪ ಪ್ರಕರಣ (6) ಪ್ರಕರಣ 59 (2) ಇದರೊಂದಿಗೆ ಓದಿಕೊಂಡು | ಲೈಸೆನ್ಸು ಪಡೆದ ಕೊಳಾಯಿಗಾರರು ನಿಯಮಿಸಿದ ಚಾರ್ಜುಗಳಿಗಿಂತ ಹೆಚ್ಚಿಗೆ ತಗಾದೆ ಮಾಡಕೂಡದು | 50,000 | - |
| ಪ್ರಕರಣ 82 ಉಪ ಪ್ರಕರಣ (8) ಪ್ರಕರಣ 59(2) ಇದರೊಂದಿಗೆ ಓದಿಕೊಂಡು | ಲೈಸೆನ್ಸು ಪಡೆದ ಕೊಳಾಯಿಗಾರರು ವಿನಿಯಮಗಳನ್ನು ಉಲ್ಲಂಘಿಸಕೂಡದು ಅಥವಾ ಕಾಮಗಾರಿಯನ್ನು ಅಜಾಗರೂಕತೆ ಅಥವಾ ನಿರ್ಲಕ್ಷ್ಯತೆಯಿಂದ ನಿರ್ವಹಿಸಕೂಡದು, ಇತ್ಯಾದಿ | 50,000 | - |

**3. 1987ರ ಕರ್ನಾಟಕ ಅಧಿನಿಯಮ 34ರ ತಿದ್ದುಪಡಿ.-** ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34)ರಲ್ಲಿ,-

(1) 32ನೇ ಪ್ರಕರಣದ (9)ನೇ ಉಪ-ಪ್ರಕರಣದಲ್ಲಿ "ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ" ಎಂಬ ಪದಗಳ ಬದಲಾಗಿ "ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡನೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(2) 75ನೇ ಪ್ರಕರಣದಲ್ಲಿ "ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತರಾಗತಕ್ಕದ್ದು ಮತ್ತು ಉಲ್ಲಂಘನೆಯು ಮುಂದುವರೆಯುತ್ತಿರುವ ಸಂದರ್ಭದಲ್ಲಿ ಉಲ್ಲಂಘನೆಯು ಮುಂದುವರೆಯುವ ಮೊದಲ ಬಾರಿಯ ತರುವಾಯದ ಪ್ರತಿಯೊಂದು ದಿನಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ದಂಡಿತರಾಗತಕ್ಕದ್ದು ಮತ್ತು ಮುಂದುವರೆಯುತ್ತಿರುವ ಉಲ್ಲಂಘನೆಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 1966ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ.-** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರಲ್ಲಿ,-

(1) 118ನೇ ಪ್ರಕರಣದಲ್ಲಿ "ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳ ಬದಲಾಗಿ "ಮೊದಲ ಅಪರಾಧಕ್ಕಾಗಿ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಎರಡನೇ ಅಪರಾಧಕ್ಕಾಗಿ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತು ಮೂರನೇ ಅಪರಾಧಕ್ಕಾಗಿ ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) 118ಎ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಐದು ಸಾವಿರ ರೂಪಾಯಿಗಳನ್ನು ಮೀರದಂತೆ ಜುಲ್ಮಾನೆಯಿಂದ" ಎಂಬ ಪದಗಳ ಬದಲಿಗೆ "ಮೊದಲ ಅಪರಾಧಕ್ಕಾಗಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಎರಡನೇ ಅಪರಾಧಕ್ಕಾಗಿ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತು ಮೂರನೇ ಅಪರಾಧಕ್ಕಾಗಿ ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಉಪ-ಪ್ರಕರಣ (2)ರಲ್ಲಿ "ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಒಂದು ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಸಂದಾಯ ಮಾಡಬೇಕಾಗಿದ್ದ ಬೆಲೆ ಮೌಲ್ಯದ ಎರಡುಪಟ್ಟು ಜುಲ್ಮಾನೆಯಿಂದ

ದಂಡಿತನಾಗತಕ್ಕದ್ದು ಮತ್ತು ಮೊದಲನೇ ಅಪರಾಧ ನಿರ್ಣಯದ ತರುವಾಯ ಉಲ್ಲಂಘನೆಯು ಮುಂದುವರೆದಲ್ಲಿ ಆ ಉಲ್ಲಂಘನೆಯ ಸಮಯದಲ್ಲಿ ಒಂದು ದಿನಕ್ಕೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳ ಬದಲಿಗೆ "ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಸಂದಾಯ ಮಾಡಬೇಕಾಗಿದ್ದ ಬೆಲೆಯ ಮೌಲ್ಯದ ಎರಡುಪಟ್ಟು ದಂಡದಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಮೊದಲನೇ ಅಪರಾಧ ನಿರ್ಣಯದ ತರುವಾಯ ಉಲ್ಲಂಘನೆಯು ಮುಂದುವರೆದಲ್ಲಿ ಆ ಉಲ್ಲಂಘನೆಯ ಮೊದಲ ಅಪರಾಧಕ್ಕಾಗಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಎರಡನೇ ಅಪರಾಧಕ್ಕಾಗಿ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತು ಮೂರನೇ ಅಪರಾಧಕ್ಕಾಗಿ ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) 121ನೇ ಪ್ರಕರಣದಲ್ಲಿ "ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳ ಬದಲಿಗೆ "ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಮೊದಲ ಅಪರಾಧಕ್ಕಾಗಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಎರಡನೇ ಅಪರಾಧಕ್ಕಾಗಿ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತು ಮೂರನೇ ಅಪರಾಧಕ್ಕಾಗಿ ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(4) 131ಐ ಪ್ರಕರಣದಲ್ಲಿ "ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಸೆರೆವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳ ಬದಲಿಗೆ "ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಮೊದಲ ಅಪರಾಧಕ್ಕಾಗಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಎರಡನೇ ಅಪರಾಧಕ್ಕಾಗಿ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತು ಮೂರನೇ ಅಪರಾಧಕ್ಕಾಗಿ ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 1961ರ ಕರ್ನಾಟಕ ಅಧಿನಿಯಮ 11ರ ತಿದ್ದುಪಡಿ.-** ಕರ್ನಾಟಕ ಉಗ್ರಾಣಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 11)ರ 33ನೇ ಪ್ರಕರಣದಲ್ಲಿನ (ಎ) ಖಂಡದಲ್ಲಿ "ಆರು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದ" ಎಂಬ ಪದಗಳ ಬದಲಿಗೆ "ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. 2015ರ ಕರ್ನಾಟಕ ಅಧಿನಿಯಮ 21ರ ತಿದ್ದುಪಡಿ.-** ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ 21)ರಲ್ಲಿ,-

(1) 8ನೇ ಪ್ರಕರಣದ ಉಪ-ಪ್ರಕರಣ (5)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(5) ಉಪ-ಪ್ರಕರಣ (3)ರ ಅಡಿಯಲ್ಲಿ ಕಡ್ಡಾಯ ನೋಂದಣಿ ಅಥವಾ ಮಾನ್ಯತೆ ಅಗತ್ಯವಿರುವ ಪ್ರವಾಸೋದ್ಯಮ ವ್ಯಾಪಾರದ ವರ್ಗವನ್ನು ನಡೆಸುತ್ತಿರುವ ಅಥವಾ ನಿರ್ವಹಿಸುತ್ತಿರುವ ಯಾರೇ ವ್ಯಕ್ತಿ ಅಥವಾ ಸಂಸ್ಥೆಯು ಅಂತಹ ಸಿಂಧುವಾದ ನೋಂದಣಿ ಇಲ್ಲದೆ, ಮತ್ತು ಉಪ- ಪ್ರಕರಣ (4)ರ ಅಡಿಯಲ್ಲಿ ಅಂಥ ಅನನುಪಾನೆಗಾಗಿ ಪ್ರಾರಂಭಿಕ ದಂಡ ಅಥವಾ ಎಚ್ಚರಿಕೆಗೆ ಒಳಪಟ್ಟು, ಉಪ- ಪ್ರಕರಣ (3)ರ ಉಪಬಂಧಗಳ ಅನನುಪಾನೆಯನ್ನು ಮುಂದುವರಿಸಿದರೆ, ನಿಯಮಿಸಬಹುದಾದಂಥ ಕಾರ್ಯವಿಧಾನದ ಅನುಸಾರವಾಗಿ ನಿಯಮಿಸಲಾದ ಪ್ರಾಧಿಕಾರವು ವಿಧಿಸಬಹುದಾದ ಹೆಚ್ಚಿನ ದಂಡಗಳು ಮತ್ತು ಈ ಮುಂದಿನ ಆಡಳಿತಾತ್ಮಕ ನಿರ್ಬಂಧಗಳಿಗೆ ಹೊಣೆಯಾಗತಕ್ಕದ್ದು,-.

(ಎ) ಅಂಥ ಉಲ್ಲಂಘನೆಯ ಮೊದಲ ಸಲಕ್ಕೆ, ಅಂಥ ವ್ಯಕ್ತಿಯು ನಿಯಮಿಸಬಹುದಾದ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು, ಪ್ರಾಧಿಕಾರವು ಸಂಬಂಧಪಟ್ಟ ಪ್ರವಾಸೋದ್ಯಮ ವ್ಯಾಪಾರಕ್ಕಾಗಿ ಅಂಥ ವ್ಯಕ್ತಿಯು ಸ್ಥಳೀಯ ಪ್ರಾಧಿಕಾರಗಳಿಂದ ಹೊಂದಿರುವ ಅಸ್ತಿತ್ವದಲ್ಲಿರುವ ಯಾವುದೇ ವ್ಯಾಪಾರದ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪ್ರಮಾಣಪತ್ರವನ್ನು (ಎನ್‌ಒಸಿ) ಮೂರು ತಿಂಗಳವರೆಗೆ ಅಮಾನತುಗೊಳಿಸಲು ಆದೇಶಿಸಬಹುದು ಅಥವಾ ಅಂಥ ಪ್ರಾಧಿಕಾರಗಳು ಅದನ್ನು ಅಮಾನತ್ತುಪಡಿಸುವಂತೆ ನಿರ್ದೇಶಿಸಬಹುದು.

(ಬಿ) ಮುಂದುವರಿದ ಉಲ್ಲಂಘನೆಯ ಎರಡನೇ ಸಲಕ್ಕೆ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದಂತೆ, ಮುಂದುವರಿದ ಉಲ್ಲಂಘನೆಯ ಮೊದಲ ಸಲಕ್ಕಿಂತ ಗಮನಾರ್ಹವಾಗಿ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಹೆಚ್ಚುವರಿಯಾಗಿ, ಪ್ರಾಧಿಕಾರವು ಸಂಬಂಧಪಟ್ಟ ಪ್ರವಾಸೋದ್ಯಮ ವ್ಯಾಪಾರಕ್ಕಾಗಿ ಅಂಥ ವ್ಯಕ್ತಿಯು ಸ್ಥಳೀಯ ಪ್ರಾಧಿಕಾರಗಳಿಂದ ಹೊಂದಿರುವ ಅಸ್ತಿತ್ವದಲ್ಲಿರುವ ಯಾವುದೇ

ವ್ಯಾಪಾರದ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪ್ರಮಾಣಪತ್ರವನ್ನು (ಎನ್‌ಒಸಿ) ಆರು ತಿಂಗಳವರೆಗೆ ಅಮಾನತುಗೊಳಿಸಲು ಆದೇಶಿಸಬಹುದು ಅಥವಾ ಅಂಥ ಪ್ರಾಧಿಕಾರಗಳು ಅದನ್ನು ಅಮಾನತ್ತುಪಡಿಸುವಂತೆ ನಿರ್ದೇಶಿಸಬಹುದು.

(ಸಿ) ಮೂರನೇ ಅಥವಾ ನಂತರದ ಯಾವುದೇ ಮುಂದುವರಿದ ಉಲ್ಲಂಘನೆಯ ನಿದರ್ಶನಕ್ಕೆ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದಂತೆ ಎರಡನೇ ಮುಂದುವರಿದ ಉಲ್ಲಂಘನೆಯ ನಿದರ್ಶನಕ್ಕಿಂತ ಗಮನಾರ್ಹವಾಗಿ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಹೆಚ್ಚುವರಿಯಾಗಿ ನಿಯಮಿಸಲಾದ ಪ್ರಾಧಿಕಾರವು ಅಂಥ ಪ್ರವಾಸೋದ್ಯಮ ವ್ಯಾಪಾರಕ್ಕೆ ಸಂಬಂಧಪಟ್ಟ ವ್ಯಕ್ತಿಯ ಅಸ್ತಿತ್ವದಲ್ಲಿರುವ ವ್ಯಾಪಾರದ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪ್ರಮಾಣಪತ್ರವನ್ನು (ಎನ್‌ಒಸಿ) ರದ್ದುಗೊಳಿಸಲು ಅಥವಾ ಮುಕ್ತಾಯಗೊಳಿಸಲು ಆದೇಶಿಸತಕ್ಕದ್ದು ಅಥವಾ ಸ್ಥಳೀಯ ಪ್ರಾಧಿಕಾರಗಳಿಗೆ ರದ್ದುಗೊಳಿಸುವಂತೆ ಅಥವಾ ಮುಕ್ತಾಯಗೊಳಿಸುವಂತೆ ನಿರ್ದೇಶಿಸತಕ್ಕದ್ದು:

ಪರಂತು, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧವನ್ನು ವಿಧಿಸತಕ್ಕದ್ದಲ್ಲ. ಮುಂದುವರಿದ ಮತ್ತು ಪುನರಾವರ್ತಿತ ಅಪರಾಧಗಳನ್ನು ನಿರ್ಧರಿಸುವ ಮಾನದಂಡಗಳನ್ನು ಮತ್ತು ಮೇಲ್ಮನವಿ ಕಾರ್ಯವಿಧಾನವನ್ನು ಸಹ ನಿಯಮಗಳು ನಿಯಮಿಸತಕ್ಕದ್ದು."

(2) 16ನೇ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (8)ರಲ್ಲಿ "ಜುಲ್ಮಾನೆಗಾಗಿ ಆದೇಶಗಳನ್ನು ಹೊರಡಿಸುವ ಮೊದಲು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು ಮತ್ತು ಜುಲ್ಮಾನೆಗೆ ಗುರಿಯಾದ ಯಾರೇ ಆಗಲೀ ಪ್ರವಾಸಿ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುವುದನ್ನು ಪುನರಾವರ್ತಿಸುವ ಅಥವಾ ಮುಂದುವರೆಸುವ ಅಂಥ ಅಪರಾಧಕ್ಕಾಗಿ ಸಬ್-ಇನ್ಸ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆ ಇರದ ಯಾವೊಬ್ಬ ಪೋಲೀಸ್ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡತಕ್ಕದ್ದು" ಎಂಬ ಪದಗಳ ಬದಲಿಗೆ "ದಂಡನೆಗಾಗಿ ಆದೇಶಗಳನ್ನು ಹೊರಡಿಸುವ ಮೊದಲು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಉಪ-ಪ್ರಕರಣ (9)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(9) ಸಿಂಧುವಾದ ಲೈಸೆನ್ಸು ಅಥವಾ ನೋಂದಣಿ ಇಲ್ಲದೆ ಅಥವಾ ಲೈಸೆನ್ಸಿನ ಅಥವಾ ನೋಂದಣಿಯ ಷರತ್ತುಗಳನ್ನು ಉಲ್ಲಂಘಿಸಿ ಪ್ರವಾಸೋದ್ಯಮ ಸಹಾಯಕ ಅಥವಾ ಮಾರ್ಗದರ್ಶಕರಾಗಿ (ಗೈಡ್) ಕಾರ್ಯನಿರ್ವಹಿಸಿದ್ದಕ್ಕಾಗಿ ಉಪ-ಪ್ರಕರಣ (8)ರಡಿ (ಅಥವಾ ಸುಧಾರಿತ ವ್ಯವಸ್ಥೆಯಡಿಯಲ್ಲಿ ಅದಕ್ಕೆ ಸಮಾನವಾದ ಮೇರೆಗೆ) ದಂಡ ವಿಧಿಸಲಾದ ಯಾರೇ ವ್ಯಕ್ತಿಯು, ಹಾಗೆಯೇ ವರ್ತಿಸುವುದನ್ನು ಮುಂದುವರಿಸಿದರೆ ಅಥವಾ ಅಪರಾಧವನ್ನು ಪುನರಾವರ್ತಿಸಿದರೆ, ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ನಿಯಮಿಸಲಾದ ಪ್ರಾಧಿಕಾರವು ವಿಧಿಸುವ ಈ ಮುಂದಿನ ಹೆಚ್ಚುವರಿ ದಂಡಗಳು ಮತ್ತು ಆಡಳಿತಾತ್ಮಕ ನಿರ್ಬಂಧಗಳಿಗೆ ಗುರಿಯಾಗತಕ್ಕದ್ದು.

(ಎ) ಅಂಥ ಮೊದಲ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಿಸಬಹುದಾದ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು ಮತ್ತು ನಿಯಮಿಸಲಾದ ಪ್ರಾಧಿಕಾರವು ಅವರ ಲೈಸೆನ್ಸು ಅಥವಾ ನೋಂದಣಿ ಅಥವಾ ಮಾನ್ಯತೆಯನ್ನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗಾಗಿ ಅಮಾನತುಗೊಳಿಸಲು ಆದೇಶಿಸಬಹುದು (ಯಾವುದಾದರೂ ಹಿಂದಿನಿಂದಲೂ ಇರುವ ಮತ್ತು ದುರ್ಬಳಕೆ ಮಾಡಲಾಗಿದ್ದರೆ ಅಥವಾ ನೋಂದಾಯಿಸದೇ ಇರುವುದಕ್ಕಾಗಿ ದಂಡನೆಯಿದ್ದೂ ಕಾರ್ಯಾಚರಿಸುತ್ತಿದ್ದರೆ)

(ಬಿ) ಅಂಥ ಎರಡನೇ ಪುನರಾವರ್ತಿತ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಿಸಬಹುದಾದ ಮೊದಲ ಪುನರಾವರ್ತಿತ ಅಪರಾಧಕ್ಕಿಂತ ಗಮನಾರ್ಹವಾಗಿ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು ಮತ್ತು ನಿಯಮಿಸಲಾದ ಪ್ರಾಧಿಕಾರವು ಅವರ ಲೈಸೆನ್ಸನ್ನು ರದ್ದುಗೊಳಿಸಬಹುದು ಅಥವಾ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ನೋಂದಣಿ ಅಥವಾ ಮಾನ್ಯತೆಯನ್ನು (ಯಾವುದಾದರೂ ಇದ್ದರೆ) ಅಮಾನತುಗೊಳಿಸಲು ಆದೇಶಿಸಬಹುದು.

(ಸಿ) ಮೂರನೇ ಅಥವಾ ನಂತರದ ಯಾವುದೇ ಪುನರಾವರ್ತಿತ ಅಪರಾಧಕ್ಕಾಗಿ ಅಂಥ ವ್ಯಕ್ತಿಯು ಎರಡನೇ ಬಾರಿ ಪುನರಾವರ್ತಿತ ಅಪರಾಧಕ್ಕೆ ವಿಧಿಸಬಹುದಾದ ದಂಡಕ್ಕಿಂತ ಗಣನೀಯವಾಗಿ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಇದರ ಜೊತೆಗೆ, ನಿಯಮಿಸಲಾದ ಪ್ರಾಧಿಕಾರವು ಅಂಥ ವ್ಯಕ್ತಿ ಹೊಂದಿರುವ ಯಾವುದೇ ಲೈಸೆನ್ಸು ಅಥವಾ ನೋಂದಣಿ ಅಥವಾ ಮಾನ್ಯತೆಯನ್ನು ರದ್ದುಗೊಳಿಸಲು ಅಥವಾ ಶಾಶ್ವತವಾಗಿ ರದ್ದುಪಡಿಸಲು ಆದೇಶಿಸಬಹುದು ಮತ್ತು ನಿರ್ದಿಷ್ಟ ಅವಧಿಗೆ ನೋಂದಣಿಗೆ ಅರ್ಜಿ ಸಲ್ಲಿಸುವುದನ್ನು ನಿಷೇಧಿಸಬಹುದು:

ಪರಂತು, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧವನ್ನು ವಿಧಿಸತಕ್ಕದ್ದಲ್ಲ. ಮುಂದುವರಿದ

ಮತ್ತು ಪುನರಾವರ್ತಿತ ಅಪರಾಧಗಳನ್ನು ನಿರ್ಧರಿಸುವ ಮಾನದಂಡಗಳನ್ನು ಮತ್ತು ಮೇಲ್ಮನವಿ ಕಾರ್ಯವಿಧಾನವನ್ನು ಸಹ ನಿಯಮಗಳು ನಿಯಮಿಸತಕ್ಕದ್ದು."

(3) 19ನೇ ಪ್ರಕರಣದ ಉಪ-ಪ್ರಕರಣ (2) ಮತ್ತು (3)ನ್ನು ಬಿಟ್ಟುಬಿಡತಕ್ಕದ್ದು.

(4) 23ನೇ ಪ್ರಕರಣದಲ್ಲಿ,-

(ಎ) ಉಪ-ಪ್ರಕರಣ (2) ರಲ್ಲಿ,-

(i) ಖಂಡ (ಎ)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಉಪ-ಪ್ರಕರಣ (1)ರ (ಎ) ಖಂಡದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಯಾರೇ ಪ್ರವಾಸಿಗರ ವಿರುದ್ಧ ಯಾವುದೇ ದುರುದ್ದೇಶಪೂರಿತ ಕೃತ್ಯ ಅಥವಾ ದುಷ್ಕೃತ್ಯವನ್ನು ಮಾಡುವ ಮೂಲಕ ಅಥವಾ ಪ್ರವಾಸೋದ್ಯಮವನ್ನು ಯಾವುದೇ ನಿಯಮಗಳು ಅಥವಾ ನಿರ್ದಿಷ್ಟ ಆದೇಶಗಳಿಂದ ನಿಷೇಧಿಸಲ್ಪಟ್ಟಿರುವ ಮಹತ್ವದ ಪ್ರದೇಶ ಅಥವಾ ಸ್ಥಳದಲ್ಲಿ ಭಿಕ್ಷೆ ಬೇಡುವ ಅಥವಾ ಮಾರಾಟ ಮಾಡುವ ವಸ್ತುಗಳನ್ನು ಮಾರಾಟ ಮಾಡುವ ಮೂಲಕ, ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿ ಅಥವಾ ಪ್ರವಾಸಿ ಮಿತ್ರದ ಮೂಲಕ ನಿಯಮಗಳಲ್ಲಿ ನಿಯಮಿಸಲಾದ ಸಣ್ಣ ಆರಂಭಿಕ ಉಲ್ಲಂಘನೆಗಳಿಗಾಗಿ ವಿಧಿಸುವ ದಂಡಗಳು ಮತ್ತು ಆಡಳಿತಾತ್ಮಕ ನಿರ್ಬಂಧಗಳಿಗೆ ಗುರಿಯಾಗತಕ್ಕದ್ದು.

(i) ಅಂಥ ಮೊದಲ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಹೆಚ್ಚುವರಿಯಾಗಿ, ಅಪರಾಧಿಯು ಪ್ರವಾಸೋದ್ಯಮ ವ್ಯಾಪಾರದ ನಿರ್ವಾಹಕರಾಗಿದ್ದರೆ ಅಥವಾ ಯಾವುದೇ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಹೊಂದಿದ್ದರೆ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಅಮಾನತುಗೊಳಿಸಲು ಆದೇಶಿಸತಕ್ಕದ್ದು.

(ii) ಅಂಥ ಎರಡನೇ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದ ಮೊದಲ ಅಪರಾಧದ ಹಿಂದಿನ ದಂಡಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಅದಕ್ಕೆ ಹೆಚ್ಚುವರಿಯಾಗಿ, ಅನ್ವಯವಾಗುವಲ್ಲಿ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಅಮಾನತುಗೊಳಿಸಲು ಆದೇಶಿಸತಕ್ಕದ್ದು.

(iii) ಮೂರನೇ ಅಥವಾ ನಂತರದ ಯಾವುದೇ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದ ಎರಡನೇ ಅಪರಾಧದ ಹಿಂದಿನ ದಂಡಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಹೆಚ್ಚುವರಿಯಾಗಿ, ಅನ್ವಯವಾಗುವಲ್ಲಿ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ರದ್ದುಗೊಳಿಸಲು ಅಥವಾ ಮುಕ್ತಾಯಗೊಳಿಸಲು ಆದೇಶಿಸತಕ್ಕದ್ದು.

ಪರಂತು, ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧಯು (ಪ್ರವಾಸಿ ಮಿತ್ರರಿಂದ ನಿರ್ದಿಷ್ಟ ಸಣ್ಣ ಕೃತ್ಯಗಳಿಗೆ ನಿಯಮಿಸಲಾದ ಸಣ್ಣ ಸ್ಥಳದಲ್ಲೇ (on-the-spot) ವಿಧಿಸುವ ದಂಡಗಳನ್ನು ಮೀರಿ) ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧವನ್ನು ವಿಧಿಸತಕ್ಕದ್ದಲ್ಲ. ಮುಂದುವರಿದ ಮತ್ತು ಪುನರಾವರ್ತಿತ ಅಪರಾಧಗಳನ್ನು ನಿರ್ಧರಿಸುವ ಮಾನದಂಡಗಳನ್ನು ಮತ್ತು ಮೇಲ್ಮನವಿ ಕಾರ್ಯವಿಧಾನವನ್ನು ಸಹ ನಿಯಮಗಳು ನಿಯಮಿಸತಕ್ಕದ್ದು."

(ii) ಖಂಡ (ಬಿ)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) ಯಾರೇ ಪ್ರವಾಸಿಗರ ವಿರುದ್ಧ ಯಾವುದೇ ವಂಚನೆ ಅಥವಾ ದುಷ್ಪ್ರೇರಣೆಯ ಕಾರ್ಯವನ್ನು ಅಥವಾ ಪ್ರವಾಸೋದ್ಯಮ ಮಹತ್ವದ ಯಾವುದೇ ಪ್ರದೇಶ/ಸ್ಥಳದಲ್ಲಿ (ನಿಷೇಧಿತವಾಗಿದ್ದರೆ) ಮಾರಾಟಕ್ಕೆ ವಸ್ತುಗಳನ್ನು ಭಿಕ್ಷೆ ಬೇಡುವ ಅಥವಾ ಮಾರಾಟ ಮಾಡುವ ಕೃತ್ಯವನ್ನು ಪ್ರೋತ್ಸಾಹಿಸುವ ಮೂಲಕ ಉಪ-ಪ್ರಕರಣ (1)ರ ಖಂಡ (ಬಿ)ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಗುಣವಾಗಿ ನಿಯಮಿಸಲಾದ ಪ್ರಾಧಿಕಾರದ ನಿರ್ಣಯಿಸುವ ಅಧಿಕಾರಿಯು ವಿಧಿಸುವ ದಂಡ ಮತ್ತು ಆಡಳಿತಾತ್ಮಕ ನಿರ್ಬಂಧಗಳಿಗೆ ಗುರಿಯಾಗತಕ್ಕದ್ದು.

(i) ಅಂಥ ಮೊದಲ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಹೆಚ್ಚುವರಿಯಾಗಿ, ದುಷ್ಪ್ರೇರಕನು ಪ್ರವಾಸೋದ್ಯಮ

ವ್ಯಾಪಾರದ ನಿರ್ವಾಹಕನಾಗಿದ್ದರೆ ಅಥವಾ ಯಾವುದೇ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಹೊಂದಿದ್ದರೆ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಅಮಾನತುಗೊಳಿಸಲು ಆದೇಶಿಸಬಹುದು.

(ii) ಅಂಥ ಎರಡನೇ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದ ಮೊದಲ ಅಪರಾಧದ ಹಿಂದಿನ ದಂಡಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಅದಕ್ಕೆ ಹೆಚ್ಚುವರಿಯಾಗಿ, ಅನ್ವಯವಾಗುವಲ್ಲಿ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಅಮಾನತುಗೊಳಿಸಲು ಆದೇಶಿಸಬಹುದು.

(iii) ಮೂರನೇ ಅಥವಾ ನಂತರದ ಯಾವುದೇ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದ ಎರಡನೇ ಅಪರಾಧದ ಹಿಂದಿನ ದಂಡಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಹೆಚ್ಚುವರಿಯಾಗಿ, ಅನ್ವಯವಾಗುವಲ್ಲಿ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ (NOC) ಅಥವಾ ನೋಂದಣಿಯನ್ನು ರದ್ದುಗೊಳಿಸಲು ಅಥವಾ ಮುಕ್ತಾಯಗೊಳಿಸಲು ಆದೇಶಿಸತಕ್ಕದ್ದು.

ಪರಂತು, ಅಂಥ ಯಾವುದೇ ಹಣಕಾಸಿನ ದಂಡವನ್ನು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧವನ್ನು ವಿಧಿಸತಕ್ಕದ್ದಲ್ಲ. ಮುಂದುವರಿದ ಮತ್ತು ಪುನರಾವರ್ತಿತ ಅಪರಾಧಗಳನ್ನು ನಿರ್ಧರಿಸುವ ಮಾನದಂಡಗಳನ್ನು ಮತ್ತು ಮೇಲ್ಮನವಿ ಕಾರ್ಯವಿಧಾನವನ್ನು ಸಹ ನಿಯಮಗಳು ನಿಯಮಿಸತಕ್ಕದ್ದು."

(iii) ಖಂಡ (ಸಿ)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಸಿ) ಪ್ರವಾಸೋದ್ಯಮ ಮಹತ್ವದ ಯಾವುದೇ ಪ್ರದೇಶ ಅಥವಾ ಸ್ಥಳದಲ್ಲಿ ಯಾವುದೇ ಪ್ರವಾಸಿಗರ ವಿರುದ್ಧ ಯಾವುದೇ ವಂಚನಾ ಕೃತ್ಯ ಅಥವಾ ದುಷ್ಕೃತ್ಯವನ್ನು ಮಾಡಲು ಪ್ರಯತ್ನಿಸುವ ಮೂಲಕ ಉಪ-ಪ್ರಕರಣ (1)ರ ಖಂಡ (ಸಿ)ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಗುಣವಾಗಿ ವಿಧಿಸಬಹುದಾದ ದಂಡಗಳು ಮತ್ತು ಆಡಳಿತಾತ್ಮಕ ನಿರ್ಬಂಧಗಳಿಗೆ ಗುರಿಯಾಗತಕ್ಕದ್ದು.

(i) ಅಂಥ ಮೊದಲ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಿಸಬಹುದಾದ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು.

(ii) ಅಂಥ ಎರಡನೇ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಎರಡನೇ ಅಪರಾಧದ ಹಿಂದಿನ ದಂಡಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಹೆಚ್ಚುವರಿಯಾಗಿ, ಅಪರಾಧಿಯು ಪ್ರವಾಸೋದ್ಯಮ ವ್ಯಾಪಾರದ ನಿರ್ವಾಹಕರಾಗಿದ್ದರೆ ಅಥವಾ ಯಾವುದೇ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಹೊಂದಿದ್ದರೆ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಅಮಾನತುಗೊಳಿಸಲು ಆದೇಶಿಸಬಹುದು.

(iii) ಮೂರನೇ ಅಥವಾ ನಂತರದ ಯಾವುದೇ ಅಪರಾಧಕ್ಕಾಗಿ, ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದ ಎರಡನೇ ಅಪರಾಧದ ಹಿಂದಿನ ದಂಡಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಹೆಚ್ಚುವರಿಯಾಗಿ, ಅನ್ವಯವಾಗುವಲ್ಲಿ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಅಮಾನತುಗೊಳಿಸಲು ಆದೇಶಿಸಬಹುದು ಅಥವಾ ವಂಚನೆ ಅಥವಾ ಕಿರುಕುಳ ನೀಡುವ ಸ್ಪಷ್ಟ ಉದ್ದೇಶವನ್ನು ಸೂಚಿಸುವ ನಿರಂತರ ಪ್ರಯತ್ನಗಳ ಸಂದರ್ಭದಲ್ಲಿ, ರದ್ದುಪಡಿಸುವಂತೆ ಆದೇಶಿಸಬಹುದು.

ಪರಂತು, ಅಂಥ ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧವನ್ನು ವಿಧಿಸತಕ್ಕದ್ದಲ್ಲ. ಮುಂದುವರಿದ ಮತ್ತು ಪುನರಾವರ್ತಿತ ಅಪರಾಧಗಳನ್ನು ನಿರ್ಧರಿಸುವ

ಮಾನದಂಡಗಳನ್ನು ಮತ್ತು ಮೇಲ್ಮನವಿ ಕಾರ್ಯವಿಧಾನವನ್ನು ಸಹ ನಿಯಮಗಳು ನಿಯಮಿಸತಕ್ಕದ್ದು."

(ಬಿ) ಉಪ-ಪ್ರಕರಣ (6)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(6) ಉಪ-ಪ್ರಕರಣ (3) ಅಥವಾ (4)ರ ಅಡಿಯಲ್ಲಿ ತಮ್ಮನ್ನು ತಾವು ತೆಗೆದುಹಾಕುವಂತೆ ನಿರ್ದೇಶಿತರಾದ ಮತ್ತು ತರುವಾಯ ಉಪ-ಪ್ರಕರಣ (5)ರ ಅಡಿಯಲ್ಲಿ ಮಾರಾಟಕ್ಕೆ ಹಾಕುವ ಸಾಮಗ್ರಿಗಳಲ್ಲಿ (ನಿಷೇಧಿತವಾಗಿದ್ದರೆ) ತೊಡಗಿದ್ದಕ್ಕಾಗಿ ದಂಡ ವಿಧಿಸಲ್ಪಟ್ಟ ಯಾರೇ ಆಗಲಿ, ಪ್ರವಾಸೋದ್ಯಮ ಮಹತ್ವದ ಯಾವುದೇ ಪ್ರದೇಶ ಅಥವಾ ಸ್ಥಳದಲ್ಲಿ ಮಾರಾಟಕ್ಕೆ ಹಾಕುವ ಸಾಮಗ್ರಿಗಳ ಮೇಲಿನ ನಿಷೇಧದ ಯಾವುದೇ ಹೆಚ್ಚಿನ ಉಲ್ಲಂಘನೆಯನ್ನು ಮಾಡಿದರೆ, ನಿಯಮಿಸಲಾದ ಪ್ರಾಧಿಕಾರ ಅಥವಾ ನಿರ್ಣಯಿಸುವ ಅಧಿಕಾರಿಯು, ತಹಶೀಲ್ದಾರ್ ಶ್ರೇಣಿಯ ಅಥವಾ ಅದಕ್ಕಿಂತ ಹೆಚ್ಚಿನ ಅಧಿಕಾರಿಯಾಗಬಹುದಾದ ನಿಯಮಿಸಲಾದ ಪ್ರಾಧಿಕಾರಿ ಅಥವಾ ನಿರ್ಣಯಿಸುವ ಅಧಿಕಾರಿಯು ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಗುಣವಾಗಿ ವಿಧಿಸಲಾಗುವ ಈ ಮುಂದಿನ ಹೆಚ್ಚುವರಿ ದಂಡಗಳು ಮತ್ತು ಆಡಳಿತಾತ್ಮಕ ನಿರ್ಬಂಧಗಳಿಗೆ ಗುರಿಯಾಗತಕ್ಕದ್ದು.

(i) ಮೊದಲ ಅಂಥ ಹೆಚ್ಚುವರಿ ಉಲ್ಲಂಘನೆಗಾಗಿ (ಉಪ-ಪ್ರಕರಣ (5)ರ ಅಡಿಯಲ್ಲಿನ ದಂಡದ ತರುವಾಯ), ಅಂಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದಂತೆ ಗಮನಾರ್ಹ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು, ಜೊತೆಗೆ, ವ್ಯಾಪಾರಿ ಯಾವುದೇ ಚಟುವಟಿಕೆಗೆ ಯಾವುದೇ ರೀತಿಯ ಸ್ಥಳೀಯ ಪರ್ಮಿಟ್ ಅಥವಾ ಲೈಸೆನ್ಸಿನ ಅಡಿಯಲ್ಲಿ ಕಾರ್ಯನಿರ್ವಹಿಸಿದರೆ, ನಿಯಮಿಸಲಾದ ಪ್ರಾಧಿಕಾರಿ ಅಥವಾ ನಿರ್ಣಯಿಸುವ ಅಧಿಕಾರಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಅದನ್ನು ಅಮಾನತುಗೊಳಿಸಲು ಆದೇಶಿಸಬಹುದು.

(ii) ಎರಡನೇ ಅಂತಹ ಹೆಚ್ಚುವರಿ ಉಲ್ಲಂಘನೆಗಾಗಿ, ಅಂಥ ವ್ಯಕ್ತಿಯು ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು, ನಿಯಮಗಳಲ್ಲಿ ನಿಯಮಿಸಬಹುದಾದಂತೆ ಗಮನಾರ್ಹ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು, ಜೊತೆಗೆ, ಅಂಥ ಯಾವುದೇ ಪರ್ಮಿಟ್ ಅಥವಾ ಲೈಸೆನ್ಸನ್ನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಅಮಾನತುಗೊಳಿಸಬಹುದು.

(iii) ಮೂರನೇ ಅಥವಾ ನಂತರದ ಯಾವುದೇ ಹೆಚ್ಚುವರಿ ಉಲ್ಲಂಘನೆಗಾಗಿ, ಅಂ|ಥ ವ್ಯಕ್ತಿಯು ನಿಯಮಗಳಲ್ಲಿ ನಿಯಮಿಸಬಹುದಾದಂತೆ ಗಮನಾರ್ಹ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು, ಜೊತೆಗೆ, ಅಂಥ ಯಾವುದೇ ಪರ್ಮಿಟ್ ಅಥವಾ ಲೈಸೆನ್ಸನ್ನು ರದ್ದುಗೊಳಿಸತಕ್ಕದ್ದು ಅಥವಾ ಕೊನೆಗೊಳಿಸತಕ್ಕದ್ದು ಮತ್ತು ನಿರ್ದಿಷ್ಟ ಅವಧಿಗೆ ನಿರ್ದಿಷ್ಟ ಪ್ರವಾಸಿ ಪ್ರದೇಶಗಳಲ್ಲಿ ವ್ಯಾಪಾರ ಮಾಡುವುದರಿಂದ ಆ ವ್ಯಕ್ತಿಯನ್ನು ನಿಷೇಧಿಸಬಹುದು:

ಪರಂತು, ಅಂಥ ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧವನ್ನು ವಿಧಿಸತಕ್ಕದ್ದಲ್ಲ. ಈ ನಿಯಂತ್ರಣಾ ಉಲ್ಲಂಘನೆಗಾಗಿ ಪೊಲೀಸರ ಮೂಲಕ ದಸ್ತಗಿರಿಯ ಅಂಶವನ್ನು ತೆಗೆದುಹಾಕುವುದು. ಮುಂದುವರಿದ ಮತ್ತು ಪುನರಾವರ್ತಿತ ಅಪರಾಧಗಳನ್ನು ನಿರ್ಧರಿಸುವ ಮಾನದಂಡಗಳನ್ನು ಮತ್ತು ಮೇಲ್ಮನವಿ ಕಾರ್ಯವಿಧಾನವನ್ನು ಸಹ ನಿಯಮಗಳು ನಿಯಮಿಸತಕ್ಕದ್ದು."

(5) ಪ್ರಕರಣ 24ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಸಕ್ಷಮ ಪ್ರಾಧಿಕಾರಿ ಎಂದು ಗೊತ್ತುಪಡಿಸಬಹುದು" ಎಂಬ ಪದಗಳ ತರುವಾಯ "ಸಕ್ಷಮ ಪ್ರಾಧಿಕಾರಿ ಅಥವಾ ಗೊತ್ತುಪಡಿಸಿದ ನಿರ್ಣಯಿಸುವ ಅಧಿಕಾರಿಯು ದಂಡನೆಗಳು ಮತ್ತು ಆಡಳಿತಾತ್ಮಕ ನಿರ್ಬಂಧಗಳನ್ನು ವಿಧಿಸಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಉಪ-ಪ್ರಕರಣ (8)ರಲ್ಲಿ "ಅಪರಾಧ ನಿರ್ಣಯವಾದ ನಂತರ, ಮೂರು ತಿಂಗಳುಗಳಿಗಿಂತ ಕಡಿಮೆ ಇರದ, ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ನಿಯಮಿಸಬಹುದಾದ ದಂಡನೆಗೆ ಗುರಿಯಾಗತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಉಪ ಪ್ರಕರಣ (8)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(9) ಪ್ರವಾಸಿ ಮಿತ್ರರು ಗಮನಿಸಿದ ಸಣ್ಣ ಕೃತ್ಯಗಳಿಗೆ (ಉದಾ. ಕಸ ಹಾಕುವುದು, ಸಣ್ಣ ಉಪದ್ರವ ಉಂಟುಮಾಡುವುದು) ಸ್ಥಳದಲ್ಲೇ ಎಚ್ಚರಿಕೆ ನೀಡಬಹುದು ಅಥವಾ ಅವರು (ಅಥವಾ ಅವರ ವರದಿಯ ಮೇರೆಗೆ ನಿರ್ಣಯಿಸುವ ಅಧಿಕಾರಿಯು) ನಿಯಮಿಸಲಾದಂತೆ ಲಘು ದಂಡನೆಗಳನ್ನು ವಿಧಿಸಬಹುದು.

(10) ಗಮನಾರ್ಹ ಹಾನಿ, ಹಾಳಾಗುವಿಕೆ ಅಥವಾ ಉದ್ದೇಶಪೂರ್ವಕ ಅಡಚಣೆಗಳಿಗೆ ಸಕ್ಷಮ ಪ್ರಾಧಿಕಾರವು ವಿಧಿಸಲಾಗುವ ಹೆಚ್ಚಿನ ಹಣಕಾಸು ದಂಡಗಳಿಗೆ ಕಾರಣವಾಗಬಹುದು.

(11) ಹೆಚ್ಚುವರಿಯಾಗಿ, ಅಪರಾಧಿಯು ಪ್ರವಾಸೋದ್ಯಮ ವ್ಯಾಪಾರದ ನಿರ್ವಾಹಕರಾಗಿದ್ದರೆ ಅಥವಾ ಪ್ರವಾಸೋದ್ಯಮ ಮಹತ್ವದ ಪ್ರದೇಶ ಅಥವಾ ಸ್ಥಳದ ಮೇಲೆ ಪರಿಣಾಮ ಬೀರುವ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಹೊಂದಿದ್ದರೆ, ನಿರ್ಣಯಿಸುವ ಅಧಿಕಾರಿಯು, ವಿಶೇಷವಾಗಿ ಅಪರಾಧವು ಹಾನಿ ಅಥವಾ ಕ್ಷೀಣತೆಗೆ ಕಾರಣವಾಗುವ ನಿರ್ಲಕ್ಷ್ಯವನ್ನು ಒಳಗೊಂಡಿದ್ದಲ್ಲಿ, ಅಂಥ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರ ಅಥವಾ ನೋಂದಣಿಯನ್ನು ಮೂರರಿಂದ ಆರು ತಿಂಗಳವರೆಗೆ ಅಮಾನತುಗೊಳಿಸಲು ಆದೇಶಿಸಬಹುದು.

(12) ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳಲ್ಲಿ ಸ್ಪಷ್ಟ ಪರಿಭಾಷೆಗಳೊಂದಿಗೆ, ಗಣನೀಯವಾಗಿ ಬದಲಾಯಿಸಲಾಗದ ಹಾನಿಯನ್ನುಂಟುಮಾಡುವ ಅಸಾಧಾರಣವಾದ ತೀವ್ರವಾದ, ಉದ್ದೇಶಪೂರ್ವಕ ಅಥವಾ ಪುನರಾವರ್ತಿತ ಕೃತ್ಯಗಳಿಗೆ ಕಾರಾವಾಸದ ಶಿಕ್ಷೆಯನ್ನು ಕೊನೆಯ ಮಾರ್ಗವಾಗಿ ಮಾತ್ರ ಪರಿಗಣಿಸಬಹದು."

(5) ಪ್ರಕರಣ 25ರಲ್ಲಿ,-

(ಎ) ಉಪ-ಪ್ರಕರಣ (1)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಯಾವುದೇ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ನಿಕಾಯವು ಈ ಅಧಿನಿಯಮದಡಿಯಲ್ಲಿ ಕಡ್ಡಾಯ ಮಾನ್ಯತೆಯನ್ನು ಹೊಂದಿರುವ ಅಥವಾ ಅದನ್ನು ನೀಡದ ಸ್ವಯಂಪ್ರೇರಿತ ದರ್ಜೆಯನ್ನು ಹೊಂದಿರುವ ಯಾವುದೇ ಪ್ರವಾಸೋದ್ಯಮ ವ್ಯಾಪಾರವನ್ನು ತಪ್ಪಾಗಿ ಪ್ರತಿನಿಧಿಸಿದರೆ, ನಿಯಮಿಸಲಾದ ಪ್ರಾಧಿಕಾರವು ನಿಯಮಗಳಲ್ಲಿ ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಗುಣವಾಗಿ, ಈ ಮುಂದಿನಂತೆ ದಂಡಗಳು ಮತ್ತು ಆಡಳಿತಾತ್ಮಕ ನಿರ್ಬಂಧಗಳನ್ನು ವಿಧಿಸತಕ್ಕದ್ದು:

(i) ಮೊದಲನೆಯ ಅಂಥ ಅಪರಾಧಕ್ಕಾಗಿ, ಅಂಥ ವ್ಯಕ್ತಿ ಅಥವಾ ಘಟಕವು ನಿಯಮಗಳಲ್ಲಿ ನಿಯಮಿಸಬಹುದಾದ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು.

(ii) ಎರಡನೇ ಅಂಥ ತಪ್ಪು ಪ್ರಾತಿನಿಧ್ಯದ ಅಪರಾಧಕ್ಕಾಗಿ, ಅಂಥ ವ್ಯಕ್ತಿ ಅಥವಾ ಘಟಕವು ನಿಯಮಗಳಲ್ಲಿ ನಿಯಮಿಸಬಹುದಾದ ಮೊದಲ ಅಪರಾಧಕ್ಕಿಂತ ಗಮನಾರ್ಹವಾಗಿ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಇದರ ಜೊತೆಗೆ ನಿಯಮಿಸಲಾದ ಪ್ರಾಧಿಕಾರವು ಸಂಬಂಧಪಟ್ಟ ಪ್ರವಾಸೋದ್ಯಮ ವ್ಯಾಪಾರಕ್ಕಾಗಿ ಅಂಥ ವ್ಯಕ್ತಿ ಅಥವಾ ಘಟಕವು ಹೊಂದಿರುವ ಯಾವುದೇ ಇತರ ವ್ಯಾಪಾರ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರವನ್ನು ಸ್ಥಳೀಯ ಪ್ರಾಧಿಕಾರಗಳಿಂದ ಆರು ತಿಂಗಳವರೆಗೆ ಅಮಾನತುಗೊಳಿಸುವಂತೆ ಆದೇಶಿಸಬಹುದು.

(iii) ಮೂರನೇ ಅಥವಾ ತರುವಾಯದ ಯಾವುದೇ ಸುಳ್ಳು ಪ್ರಾತಿನಿಧ್ಯದ ಅಪರಾಧಕ್ಕಾಗಿ, ಅಂಥ ವ್ಯಕ್ತಿ ಅಥವಾ ಘಟಕವು ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು, ಇದು ಎರಡನೇ ಅಪರಾಧಕ್ಕಿಂತ ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಗಮನಾರ್ಹವಾಗಿ ಹೆಚ್ಚಿರತಕ್ಕದ್ದು, ಇದಕ್ಕೆ ಹೆಚ್ಚುವರಿಯಾಗಿ, ನಿಯಮಿಸಲಾಧ ಪ್ರಾಧಿಕಾರವು ಸಂಬಂಧಪಟ್ಟ ಪ್ರವಾಸೋದ್ಯಮ ವ್ಯಾಪಾರಕ್ಕಾಗಿ ಅಂಥ ವ್ಯಕ್ತಿ ಅಥವಾ ಘಟಕವು ಹೊಂದಿರುವ ಇತರ ವ್ಯಾಪಾರ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರವನ್ನು ಸ್ಥಳೀಯ ಪ್ರಾಧಿಕಾರಗಳಿಂದ ರದ್ದುಗೊಳಿಸುವಂತೆ ಅಥವಾ ಮುಕ್ತಾಯಗೊಳಿಸುವಂತೆ ಆದೇಶಿಸಬಹುದು:

ಪರಂತು, ಅಂಥ ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧವನ್ನು ವಿಧಿಸತಕ್ಕದ್ದಲ್ಲ. ಮುಂದುವರಿದ ಮತ್ತು ಪುನರಾವರ್ತಿತ ಅಪರಾಧಗಳನ್ನು ನಿರ್ಧರಿಸುವ ಮಾನದಂಡಗಳನ್ನು ಮತ್ತು ಮೇಲ್ಮನವಿ ಕಾರ್ಯವಿಧಾನವನ್ನು ಸಹ ನಿಯಮಗಳು ನಿಯಮಿಸತಕ್ಕದ್ದು."

(ಬಿ) ಉಪ-ಪ್ರಕರಣ (2)ನ್ನು ಬಿಟ್ಟುಬಿಡತಕ್ಕದ್ದು

(7) ಪ್ರಕರಣ 26ರಲ್ಲಿ,-

(ಎ) ಉಪ-ಪ್ರಕರಣ (2)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಸರ್ಕಾರಿ ಪ್ರವಾಸೋದ್ಯಮ ಸಂಸ್ಥೆಗಳಿಗೆ ಸೇರಿದ ಯಾವುದೇ ಬ್ರ್ಯಾಂಡ್-ಅನ್ನು ಅನುಮತಿ ಅಥವಾ ಅಧಿಕಾರವಿಲ್ಲದೆ ಬಳಸುವ ಮೂಲಕ ಉಪ-ಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ನಿಕಾಯವು ನಿಯಮಗಳಲ್ಲಿ ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಗುಣವಾಗಿ ನಿಯಮಿಸಲಾದ ಪ್ರಾಧಿಕಾರವು ವಿಧಿಸುವ ಈ ಮುಂದಿನ ದಂಡ ಮತ್ತು ಆಡಳಿತಾತ್ಮಕ ನಿರ್ಬಂಧಗಳಿಗೆ ಗುರಿಯಾಗತಕ್ಕದ್ದು:

(i) ಮೊದಲನೆಯ ಅಂಥ ಅಪರಾಧಕ್ಕಾಗಿ, ಅಂಥ ವ್ಯಕ್ತಿ ಅಥವಾ ಘಟಕವು ನಿಯಮಗಳಲ್ಲಿ ನಿಯಮಿಸಬಹುದಾದ ಹಣಕಾಸಿನ ದಂಡಕ್ಕೆ ಗುರಿಯಾಗಬೇಕಾಗತಕ್ಕದ್ದು.

(ii) ಎರಡನೇ ಅಂಥ ಅನಧಿಕೃತ ಬಳಕೆಯ ಅಪರಾಧ ಕ್ಕಾಗಿ, (ಮೊದಲನೆಯದಕ್ಕೆ ದಂಡ ವಿಧಿಸಿದ ತರುವಾಯ), ಅಂಥ ವ್ಯಕ್ತಿ ಅಥವಾ ಘಟಕವು ನಿಯಮಗಳಲ್ಲಿ ನಿಯಮಿಸಬಹುದಾದ ಮೊದಲ

ಅಪರಾಧಕ್ಕಿಂತ ಗಮನಾರ್ಹವಾಗಿ ಹೆಚ್ಚಿನ ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು. ಅದಕ್ಕೆ ಹೆಚ್ಚುವರಿಯಾಗಿ, ನಿಯಮಿಸಲಾದ ಪ್ರಾಧಿಕಾರವು ಅಂಥ ವ್ಯಕ್ತಿ ಅಥವಾ ಘಟಕವು ತಮ್ಮ ಪ್ರವಾಸೋದ್ಯಮ ವ್ಯಾಪಾರಕ್ಕಾಗಿ ಹೊಂದಿರುವ ಯಾವುದೇ ವ್ಯಾಪಾರ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರವನ್ನು ಸ್ಥಳೀಯ ಅಧಿಕಾರಿಗಳಿಂದ ಆರು ತಿಂಗಳವರೆಗೆ ಅಮಾನತುಗೊಳಿಸಲು ಆದೇಶಿಸಬಹುದು.

(iii) ಮೂರನೇ ಅಥವಾ ನಂತರದ ಯಾವುದೇ ಅನಧಿಕೃತ ಬಳಕೆಯ ಅಪರಾಧಕ್ಕಾಗಿ, ಅಂಥ ವ್ಯಕ್ತಿ ಅಥವಾ ಘಟಕವು ಹಣಕಾಸಿನ ದಂಡಕ್ಕೆ ಗುರಿಯಾಗತಕ್ಕದ್ದು, ಅದು ನಿಯಮಗಳಲ್ಲಿ ನಿಯಮಿಸಬಹುದಾದಂತೆ ಎರಡನೇ ಅಪರಾಧಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರತಕ್ಕದ್ದು. ಅದಕ್ಕೆ ಹೆಚ್ಚುವರಿಯಾಗಿ, ನಿಯಮಿಸಲಾದ ಪ್ರಾಧಿಕಾರವು ಅಂಥ ವ್ಯಕ್ತಿ ಅಥವಾ ಘಟಕವು ತಮ್ಮ ಪ್ರವಾಸೋದ್ಯಮ ವ್ಯಾಪಾರಕ್ಕಾಗಿ ಹೊಂದಿರುವ ಯಾವುದೇ ವ್ಯಾಪಾರ ಲೈಸೆನ್ಸು ಅಥವಾ ನಿರಾಕ್ಷೇಪಣಾ ಪತ್ರವನ್ನು ಸ್ಥಳೀಯ ಅಧಿಕಾರಿಗಳಿಂದ ರದ್ದುಗೊಳಿಸಲು ಅಥವಾ ಮುಕ್ತಾಯಗೊಳಿಸಲು ಆದೇಶಿಸಬಹುದು.

ಪರಂತು, ಅಂಥ ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಹಣಕಾಸಿನ ದಂಡ ಅಥವಾ ಆಡಳಿತಾತ್ಮಕ ನಿರ್ಬಂಧವನ್ನು ವಿಧಿಸತಕ್ಕದ್ದಲ್ಲ. ಮುಂದುವರಿದ ಮತ್ತು ಪುನರಾವರ್ತಿತ ಅಪರಾಧಗಳನ್ನು ನಿರ್ಧರಿಸುವ ಮಾನದಂಡಗಳನ್ನು ಮತ್ತು ಮೇಲ್ಮನವಿ ಕಾರ್ಯವಿಧಾನವನ್ನು ಸಹ ನಿಯಮಗಳು ನಿಯಮಿಸತಕ್ಕದ್ದು."

(ಬಿ) ಉಪ-ಪ್ರಕರಣ (4)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(4) ಯಾರೇ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಇತರ ನಿಕಾಯವು, ಉಪ-ಪ್ರಕರಣ (2)ರಡಿಯಲ್ಲಿ ವಿಧಿಸಿದ ದಂಡನೆಯ ನಂತರವೂ ಸರ್ಕಾರಿ ಪ್ರವಾಸೋದ್ಯಮ ಬ್ರ್ಯಾಂಡ್ ಬಳಸುವುದನ್ನು ಮುಂದುವರಿಸಿದರೆ, ಅಪರಾಧ ನಿರ್ಣೀತನಾದ ಮೇಲೆ, ಆತನು ದಂಡದೊಂದಿಗಿನ ದಂಡಿತನಾಗತಕ್ಕದ್ದು"

**7. 1966ರ ಕರ್ನಾಟಕ ಅಧಿನಿಯಮ 18ರ ತಿದ್ದುಪಡಿ.-** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18)ರ 39ನೇ ಪ್ರಕರಣದಲ್ಲಿ "ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳ ಬದಲಿಗೆ "ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 1993ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ರ 281ನೇ ಪ್ರಕರಣದಲ್ಲಿ "ಅಪರಾಧ ನಿರ್ಣಯವಾದ ಮೇಲೆ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳ ಬದಲಿಗೆ "ಒಂದು ಸಾವಿರದಿಂದ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**9. 2013ರ ಕರ್ನಾಟಕ ಅಧಿನಿಯಮ 09ರ ತಿದ್ದುಪಡಿ.-** ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ಅಧಿನಿಯಮ, 2012 (2013ರ ಕರ್ನಾಟಕ ಅಧಿನಿಯಮ 9)ರ 19ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**19. ಉಲ್ಲಂಘನೆಗಳು ಮತ್ತು ದಂಡ**.- ಯಾರಾದರೂ,-

(ಎ) ಈ ಅಧಿನಿಯಮದ ಪ್ರಕರಣ 3, 4 ಮತ್ತು 5ರ ಉಪಬಂಧಗಳನ್ನು ಉಲ್ಲಂಘಿಸಿದರೆ, ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಹಾಗೆ ಉಲ್ಲಂಘನೆಯು ಮುಂದುವರೆದ ಅವಧಿಯ ಮೊದಲ ದಿನದ ತರುವಾಯ ಪ್ರತಿ ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯನ್ನು ವಿಧಿಸತಕ್ಕದ್ದು;

(ಬಿ) ಈ ಅಧಿನಿಯಮದ ಪ್ರಕರಣ 7ರ ಉಪಬಂಧಗಳನ್ನು ಉಲ್ಲಂಘಿಸಿದರೆ, ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಹಾಗೆ ಉಲ್ಲಂಘನೆಯು ಮುಂದುವರೆದ ಅವಧಿಯ ಮೊದಲ ದಿನದ ತರುವಾಯ ಪ್ರತಿ ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯನ್ನು ವಿಧಿಸತಕ್ಕದ್ದು;

(ಸಿ) ಈ ಅಧಿನಿಯಮದ ಪ್ರಕರಣ 15ರ ಉಪಬಂಧಗಳನ್ನು ಉಲ್ಲಂಘಿಸಿದರೆ, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಹಾಗೆ ಉಲ್ಲಂಘನೆಯು ಮುಂದುವರೆದ ಅವಧಿಯ ಮೊದಲ ದಿನದ ತರುವಾಯ ಪ್ರತಿ ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯನ್ನು ವಿಧಿಸತಕ್ಕದ್ದು; ಮತ್ತು

(ಡಿ) (ಎ), (ಬಿ) ಮತ್ತು (ಸಿ) ಖಂಡಗಳಡಿಯಲ್ಲಿ ಒಳಗೊಳ್ಳದಿರುವ ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಡಿಯಲ್ಲಿ ಅಥವಾ ಲೈಸೆನ್ಸು ಅಥವಾ ನೋಂದಣಿಯ ಷರತ್ತುಗಳು ಅಥವಾ ಈ ಅಧಿನಿಯಮದಡಿ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಅಧಿಕಾರಿಯು ನೀಡಿದ

ನಿರ್ದೇಶನದ ಯಾವುದೇ ಇತರ ಉಪಬಂಧಗಳನ್ನು ಉಲ್ಲಂಘಿಸಿದರೆ, ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಹಾಗೆ ಉಲ್ಲಂಘನೆಯು ಮುಂದುವರೆದ ಅವಧಿಯ ಮೊದಲ ದಿನದ ತರುವಾಯ ಪ್ರತಿ ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯನ್ನು ವಿಧಿಸತಕ್ಕದ್ದು."

**10. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-** ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ,-

(1) 170ನೇ ಪ್ರಕರಣದ, (9)ನೇ ಉಪ-ಪ್ರಕರಣದಲ್ಲಿ, "ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು"ಎಂಬ ಪದಗಳ ಬದಲಾಗಿ "ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡವನ್ನು ವಿಧಿಸತಕ್ಕದ್ದು."ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) 184ನೇ ಪ್ರಕರಣದ, (3)ನೇ ಉಪ-ಪ್ರಕರಣದಲ್ಲಿ, "ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲನೆಯ ಅಪರಾಧ ನಿರ್ಣಯದ ದಿನಾಂಕದ ತರುವಾಯ ಅಪರಾಧವು ಮುಂದುವರಿಯುವ ಪ್ರತಿಯೊಂದು ದಿನಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲನೆಯ ಅಪರಾಧ ನಿರ್ಣಯದ ದಿನಾಂಕದ ತರುವಾಯ ಅಪರಾಧವು ಮುಂದುವರಿಯುವ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) 203ನೇ ಪ್ರಕರಣದ, (1)ನೇ ಉಪ-ಪ್ರಕರಣದಲ್ಲಿ, "ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(4) 208ನೇ ಪ್ರಕರಣದ, (2)ನೇ ಉಪ-ಪ್ರಕರಣದಲ್ಲಿ, "ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಯಾವ ಮುಂಚಾಚಿರುವುದಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಅಪರಾಧಿಯೆಂದು ಅವನು ನಿರ್ಣೀತನಾಗಿದ್ದಾನೆಯೋ, ಹಿಂದೆ ಹೇಳಿದಂತಹ ಈ ಯಾವುದೇ ಮುಂಚಾಚಿರುವುದನ್ನು ತೆಗೆದು ಹಾಕಲು ಅಂಥ ಒಡೆಯನು ಅಥವಾ ಅಧಿಭೋಗದಾರನು ತಪ್ಪಿದರೆ, ಅವನು ಹಾಗೆ ತಪ್ಪಿರುವುದು ಅಥವಾ ಉಪೇಕ್ಷೆಯು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳವರೆಗೆ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡವನ್ನು ವಿಧಿಸತಕ್ಕದ್ದು ಮತ್ತು ಯಾವ ಮುಂಚಾಚಿರುವುದಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಅಪರಾಧಿಯೆಂದು ಅವನು ನಿರ್ಣೀತನಾಗಿದ್ದಾನೆಯೋ, ಹಿಂದೆ ಹೇಳಿದಂತಹ ಈ ಯಾವುದೇ ಮುಂಚಾಚಿರುವುದನ್ನು ತೆಗೆದು ಹಾಕಲು ಅಂಥ ಒಡೆಯನು ಅಥವಾ ಅಧಿಭೋಗದಾರನು ತಪ್ಪಿದರೆ, ಅವನು ಹಾಗೆ ತಪ್ಪಿರುವುದು ಅಥವಾ ಉಪೇಕ್ಷೆಯು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ ಒಂದು ನೂರು ರೂಪಾಯಿಗಳವರೆಗೆ ಹೆಚ್ಚಿನ ದಂಡವನ್ನು ವಿಧಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(5) 211ನೇ ಪ್ರಕರಣದ, (3)ನೇ ಉಪ-ಪ್ರಕರಣದಲ್ಲಿ, "ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(6) 215ನೇ ಪ್ರಕರಣದ,-

(ಎ) ಉಪ-ಪ್ರಕರಣ (1)ರಲ್ಲಿ "ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(II) ಉಪ-ಪ್ರಕರಣ (2)ರಲ್ಲಿ "ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ" ಎಂಬ ಪದಗಳ ಬದಲಾಗಿ "ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(7) 217ನೇ ಪ್ರಕರಣದ, (2)ನೇ ಉಪ-ಪ್ರಕರಣದಲ್ಲಿ, "ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯದ ದಿನಾಂಕದ ತರುವಾಯ ಮುಂದುವರಿಯುವಂಥ ಉಲ್ಲಂಘನೆಗೆ ಸಂದರ್ಭಾನುಸಾರ ಪ್ರತಿಯೊಂದು ಹಗಲಿಗೆ ಅಥವಾ ರಾತ್ರಿಗೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ಮತ್ತು ಮೊದಲ ಬಾರಿಗೆ

ಅಪರಾಧ ನಿರ್ಣಯದ ದಿನಾಂಕದ ತರುವಾಯ ಮುಂದುವರಿಯುವಂಥ ಉಲ್ಲಂಘನೆಗೆ ಸಂದರ್ಭಾನುಸಾರ ಪ್ರತಿಯೊಂದು ಹಗಲಿಗೆ ಅಥವಾ ರಾತ್ರಿಗೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(8) 219ನೇ ಪ್ರಕರಣದ, (2)ನೇ ಉಪ-ಪ್ರಕರಣದಲ್ಲಿ, "ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಅಂಥ ಉಲ್ಲಂಘನೆ ಮುಂದುವರಿಯುವ ಸಂದರ್ಭಾನುಸಾರ ಪ್ರತಿಯೊಂದು ಹಗಲಿಗೆ ಅಥವಾ ರಾತ್ರಿಗೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಅಂಥ ಉಲ್ಲಂಘನೆ ಮುಂದುವರಿಯುವ ಸಂದರ್ಭಾನುಸಾರ ಪ್ರತಿಯೊಂದು ಹಗಲಿಗೆ ಅಥವಾ ರಾತ್ರಿಗೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(9) 225ನೇ ಪ್ರಕರಣದಲ್ಲಿ, "ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(10) 226ನೇ ಪ್ರಕರಣದಲ್ಲಿ, "ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಮತ್ತು ಮೊದಲ ಬಾರಿಗೆ ಅಪರಾಧವು ನಿರ್ಣಯವಾದ ದಿನಾಂಕದ ತರುವಾಯ ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೂ ಅಂಥ ಅಪರಾಧಿಯು ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಮತ್ತು ಮೊದಲ ಬಾರಿಗೆ ಅಪರಾಧವು ನಿರ್ಣಯವಾದ ದಿನಾಂಕದ ತರುವಾಯ ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೂ ಅಂಥ ಅಪರಾಧಿಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(11) 228ನೇ ಪ್ರಕರಣದ, (1)ನೇ ಉಪ-ಪ್ರಕರಣದಲ್ಲಿ, "ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಸದರಿ ನೋಟೀಸನ್ನು ಪಾಲಿಸಲು ತಪ್ಪುವುದು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಸದರಿ ನೋಟೀಸನ್ನು ಪಾಲಿಸಲು ತಪ್ಪುವುದು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(12) 241ನೇ ಪ್ರಕರಣದ, (2)ನೇ ಉಪ-ಪ್ರಕರಣದಲ್ಲಿ, "ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು." ಎಂಬ ಪದಗಳ ಬದಲಾಗಿ "ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(13) 243ನೇ ಪ್ರಕರಣದ,-

(i) ಉಪ-ಪ್ರಕರಣ (2)ರಲ್ಲಿ "ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಉಪ-ಪ್ರಕರಣ (3)ರಲ್ಲಿ "ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(14) 256ನೇ ಪ್ರಕರಣದ, (6)ನೇ ಪ್ರಕರಣದಲ್ಲಿ, "ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯವೂ ಅಂಥ ಉಲ್ಲಂಘನೆಯು ಮುಂದುವರಿದರೆ ಪ್ರತಿದಿನಕ್ಕೆ ನಲವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ಮತ್ತು ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯವೂ ಅಂಥ ಉಲ್ಲಂಘನೆಯು ಮುಂದುವರಿದರೆ ಪ್ರತಿದಿನಕ್ಕೆ ನಾಲ್ಕು ನೂರು

ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(15) 260ನೇ ಪ್ರಕರಣದ, (3)ನೇ ಉಪ-ಪ್ರಕರಣದಲ್ಲಿ, "ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(16) 266ನೇ ಪ್ರಕರಣದಲ್ಲಿ, "ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ" ಎಂಬ ಪದಗಳ ಬದಲಾಗಿ "ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**11. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ,-

(1) 424ನೇ ಪ್ರಕರಣದ, (2)ನೇ ಉಪ-ಪ್ರಕರಣದಲ್ಲಿ, -

(ಎ) ಖಂಡ (ಎ)ರಲ್ಲಿ, "ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿಯುತ್ತಿರುವ ಉಲ್ಲಂಘನೆ ಸಂದರ್ಭದಲ್ಲಿ, ಮೊದಲನೆಯ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಉಲ್ಲಂಘನೆ ಮುಂದುವರೆಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಮೂರು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ" ಎಂಬ ಪದಗಳಿಗೆ ಬದಲಾಗಿ "ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಮತ್ತು ಮುಂದುವರಿಯುತ್ತಿರುವ ಉಲ್ಲಂಘನೆ ಸಂದರ್ಭದಲ್ಲಿ, ಮೊದಲನೆಯ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಉಲ್ಲಂಘನೆ ಮುಂದುವರೆಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ" ಎಂಬ ಪದಗಳನ್ನು ಕ್ರಮವಾಗಿ ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಖಂಡ (ಬಿ)ರಲ್ಲಿ, "ಎರಡು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ" ಎಂಬ ಪದಗಳಿಗೆ ಬದಲಾಗಿ "ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) 431ನೇ ಪ್ರಕರಣದ, (1)ನೇ ಉಪ-ಪ್ರಕರಣದ (ಸಿ) ಖಂಡದಲ್ಲಿ ಹಾಗೂ (2)ನೇ ಉಪ-ಪ್ರಕರಣದ, (ಸಿ) ಖಂಡದಲ್ಲಿ, "ಜುಲ್ಮಾನೆ" ಎಂಬ ಪದಕ್ಕೆ ಬದಲಿಯಾಗಿ "ದಂಡ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(3) ಅನುಸೂಚಿ-XIರ ಬದಲಿಯಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**ಅನುಸೂಚಿ-XI"**

ಸಾಮಾನ್ಯ ದಂಡಗಳು

(431ನೇ ಪ್ರಕರಣವನ್ನು ನೋಡಿ)

| **ಪ್ರಕರಣ** | **ಉಪ-ಪ್ರಕರಣ** | **ವಿಷಯ** | **ದಂಡ (ರೂಪಾಯಿಗಳಲ್ಲಿ** |
|---|---|---|---|
| **(1)** | | **(2)** | **(3)** |
| 80 | (1) | ಹಿತಾಸಕ್ತಿ ಹೊಂದಿರುವ ಕೌನ್ಸಿಲರ್ ಚರ್ಚೆಯಲ್ಲಿ ಭಾಗವಹಿಸುವುದು ಅಥವಾ ಮತದಾನ ಮಾಡುವುದು | ಎರಡು ಸಾವಿರ |
| 114 | (1) ಮತ್ತು (3) | ಸ್ವಾಮ್ಯದ ವರ್ಗಾವಣೆಯ ಬಗ್ಗೆ ನೋಟೀಸು ಕೊಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ತಪ್ಪುವುದು | ಐದು ನೂರು |
| 188 | | ನೀರು ಸರಬರಾಜಿಗೆ ಸಂಬಂಧಿಸಿದ ಆವರಣದ ಮೇಲೆ ಅತಿಕ್ರಮ ಪ್ರವೇಶ ಮಾಡುವುದು | ಐದು ನೂರು |
| 190 | | ಉಪವಿಧಿಗಳಿಗೆ ಅನುಗುಣವಾಗಿ ಗೃಹ ಸಂಪರ್ಕರಗಳನ್ನು ನಿರ್ವಹಿಸಲು ತಪ್ಪುವುದು | ಐದು ನೂರು |
| 192 | (2) | ಸಮರ್ಪಕ ನೀರಿನ ಸರಬರಾಜಿಲ್ಲದ ಮನೆಯನ್ನು ಅಧಿಭೋಗಿಸುವುದು ಅಥವಾ ಅಧಿಭೋಗಿಸಲು ಅವಕಾಶ ನೀಡುವುದು. | ಐದು ನೂರು |
| 192 | (3) | ಗೃಹ ಸಂಪರ್ಕ ಕಲ್ಪಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| 194 | | ಗೃಹಬಳಕೆಯ ಉದ್ದೇಶಕ್ಕಾಗಿ ಸರಬರಾಜು ಮಾಡಿದ ನೀರನ್ನು ಗೃಹೇತರ ಉದ್ದೇಶಗಳಿಗೆ ಬಳಸುವುದು | ಒಂದು ಸಾವಿರ |
| 208 | | ನೀರನ್ನು ಪೋಲು ಮಾಡುವುದು ಅಥವಾ ದುರುಪಯೋಗ ಮಾಡುವುದು | ಐದು ನೂರು |
| 209 | | ಪ್ರವೇಶಕ್ಕೆ ನಿರಾಕರಿಸುವುದು, ಇತ್ಯಾದಿ | ಒಂದು ಸಾವಿರ |
| 211 | (1) | ನೀರಿನ ಪೈಪುಗಳಿಗೆ ಹಾನಿಯಾಗುವ ಅಥವಾ ಅವುಗಳಲ್ಲಿನ ನೀರು ಕಲುಷಿತಗೊಳ್ಳುವ ಹಾಗೆ ನೀರಿನ ಪೈಪನ್ನು ಹಾಕುವುದು ಇತ್ಯಾದಿ | ಒಂದು ಸಾವಿರ |
| 218 | (1) | ಲೈಸೆನ್ಸ್ ಪಡೆದಿರುವ ಕೊಳಾಯಿಗಾರರನ್ನು ಹೊರತುಪಡಿಸಿ ಬೇರೆ ವ್ಯಕ್ತಿಯಿಂದ ಕೆಲಸದ ನಿರ್ವಹಣೆ | ಎರಡು ಸಾವಿರ |
| 218 | (2) | ನಿಯೋಜಿತನಾದ ಲೈಸೆನ್ಸ್ ಪಡೆದ ಕೊಳಾಯಿಗಾರನ ಹೆಸರನ್ನು ತಿಳಿಸುವಂತೆ ಅಗತ್ಯಪಡಿಸಿದಾಗ ತಿಳಿಸಲು ತಪ್ಪುವುದು | ಒಂದು ಸಾವಿರ |
| 218 | (6) | ಲೈಸೆನ್ಸ್ ಪಡೆದಿರುವ ಕೊಳಾಯಿಗಾರನು ನಿಯಮಿಸಿದ ಚಾರ್ಜುಗಳಿಗಿಂತ ಹೆಚ್ಚಾಗಿ ತಗಾದೆ ಮಾಡುವುದು. | ಒಂದು ಸಾವಿರ |
| 218 | (8) | ಲೈಸೆನ್ಸ್ ಪಡೆದ ಕೊಳಾಯಿಗಾರನು ವಿನಿಯಮಗಳನ್ನು ಉಲ್ಲಂಘಿಸುವುದು ಅಥವಾ ಕೆಲಸವನ್ನು ಅಜಾಗರೂಕತೆಯಿಂದ ಅಥವಾ ನಿರ್ಲಕ್ಷ್ಯದಿಂದ ನಿರ್ವಹಿಸುವುದು | ಒಂದು ಸಾವಿರ |
| 219 | | ನೀರು ಸರಬರಾಜು ಕೊಳವೆ ಮಾರ್ಗಗಳಿಗೆ ಸಂಬಂಧಿಸಿದಂತೆ ನಿಷೇಧಿಸಿರುವ ಕಾರ್ಯಗಳನ್ನು ಬುದ್ಧಿಪೂರ್ವಕವಾಗಿ ಅಥವಾ ನಿರ್ಲಕ್ಷ್ಯತೆಯಿಂದ ಮಾಡುವುದು | ಒಂದು ಸಾವಿರ |
| 223 | | ನಗರಪಾಲಿಕೆಯ ಒಳಚರಂಡಿಗಳೊಳಕ್ಕೆ ಅಥವಾ ಚರಂಡಿಗಳೊಳಕ್ಕೆ ಅಥವಾ ನಗರಪಾಲಿಕೆಯ ಒಳಚರಂಡಿಗಳೊಂದಿಗೆ ಸಂಪರ್ಕ ಹೊಂದಿರುವ ಒಳಚರಂಡಿಗಳೊಳಕ್ಕೆ ವಸ್ತುಗಳನ್ನು ಹರಿಸುವುದು | ಒಂದು ಸಾವಿರ |
| 224 | (2) | ನೋಟೀಸು ನೀಡದೆ ಖಾಸಗಿ ಚರಂಡಿಗಳನ್ನು ನಗರಪಾಲಿಕೆಯ ಒಳಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | ಐದು ನೂರು |
| 225 | (2) ಮತ್ತು (4) | ಚರಂಡಿ ವ್ಯವಸ್ಥೆಯಿಲ್ಲದ ಆವರಣಗಳಿಗೆ ಚರಂಡಿ ವ್ಯವಸ್ಥೆ ಕಲ್ಪಿಸಲು ನೀಡಿದ ಸೂಚನೆಯನ್ನು ಪಾಲಿಸದಿರುವುದು | ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಹಾಗೂ ಐದು ಸಾವಿರ ರೂಪಾಯಿಗಳಿಗೆ ಹೆಚ್ಚಲ್ಲದ |
| 226 | | ಚರಂಡಿಗಳಿಲ್ಲದೆ ಹೊಸ ಆವರಣದ ನಿರ್ಮಾಣ | ಹತ್ತು ಸಾವಿರ |
| 227 | | ಆವರಣಗಳ ಯಾವುದೇ ಸಮೂಹಕ್ಕೆ ಅಥವಾ ವಿಭಾಗಕ್ಕೆ ಚರಂಡಿ ವ್ಯವಸ್ಥೆಯ ಕಾಮಗಾರಿಗಳ ನಿರ್ವಹಣೆಗಾಗಿ ನೀಡಿದ ಸೂಚನೆಯನ್ನು ಪಾಲಿಸದಿರುವುದು | ಒಂದು ಸಾವಿರ |
| 228 | | ಕೆಲವು ಸಂದರ್ಭಗಳಲ್ಲಿ ಖಾಸಗಿ ಚರಂಡಿಗಳನ್ನು ಮುಚ್ಚಲು ಅಥವಾ ಅವುಗಳ ಬಳಕೆಯನ್ನು ಮಿತಿಗೊಳಿಸಲು ನೀಡಿದ ನಿರ್ದೇಶನವನ್ನು | ಐದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| | | ಪಾಲಿಸದಿರುವುದು | |
| 229 | | ಚರಂಡಿಯ ಮಾಲೀಕನನ್ನು ಹೊರತುಪಡಿಸಿ ಬೇರೆ ವ್ಯಕ್ತಿಯು ಅದನ್ನು ಬಳಸುವ ಬಗ್ಗೆ ಆಯುಕ್ತರ ಆದೇಶವನ್ನು ಪಾಲಿಸದಿರುವುದು | ಐದು ನೂರು |
| 230 | | ಒಳಚರಂಡಿಯನ್ನು ಮತ್ತು ಮಳೆನೀರಿನ ಚರಂಡಿಗಳನ್ನು ಪ್ರತ್ಯೇಕವಾಗಿ ಇಡುವುದಕ್ಕಾಗಿ ನೀಡಿದ ಸೂಚನೆಯನ್ನು ಪಾಲಿಸದಿರುವುದು | ಐದು ನೂರು |
| 231 | | ಅಂಗಳ ಮುಂತಾದವುಗಳಿಗೆ ನೆಲಗಟ್ಟು ಮಾಡುವುದಕ್ಕಾಗಿ ನೀಡಿದ ಸೂಚನೆಯನ್ನು ಪಾಲಿಸದಿರುವುದು | ಐದು ನೂರು |
| 233 | | ಲಿಖಿತ ಅನುಮತಿ ಇಲ್ಲದೆ ಒಳಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | ಎರಡು ಸಾವಿರ |
| 236 | (4) | ಪೈಪನ್ನು ಅಥವಾ ಚರಂಡಿಯನ್ನು ಮುಚ್ಚಲು, ತೆಗೆದುಹಾಕಲು ಅಥವಾ ಮಾರ್ಗವನ್ನು ಬದಲಾಯಿಸಲು ನೀಡಿದ ಸೂಚನೆಯನ್ನು ಪಾಲಿಸದಿರುವುದು | ಐದು ನೂರು |
| 240 | (1) | ಲೈಸೆನ್ಸ್ ಪಡೆದ ಕೊಳಾಯಿಗಾರರನ್ನು | ಎರಡು ಸಾವಿರ |
| 240 | (2) (223 ನೇ ಪ್ರಕರಣ ದೊಂದಿಗೆ ಓದಿಕೊಂಡಂತೆ) | ನಿಯೋಜಿಸಿಕೊಂಡ ಲೈಸೆನ್ಸ್ ಪಡೆದ ಕೊಳಾಯಿಗಾರನ ಹೆಸರನ್ನು ತಿಳಿಸುವಂತೆ ಅಗತ್ಯಪಡಿಸಿದಾಗ ತಿಳಿಸಲು ತಪ್ಪುವುದು | ಒಂದು ಸಾವಿರ |
| 240 | (2) (218ನೇ ಪ್ರಕರಣ ದೊಂದಿಗೆ ಓದಿಕೊಂಡಂತೆ) | ಲೈಸೆನ್ಸ್ ಪಡೆದ ಕೊಳಾಯಿಗಾರರು ನಿಯಮಿಸಿದ ಚಾರ್ಜಿಗಿಂತ ಹೆಚ್ಚಿಗೆ ತಗಾದೆ ಮಾಡುವುದು | ಒಂದು ಸಾವಿರ |
| 240 | (2) (218 (8)ನೇ ಪ್ರಕರಣ ದೊಂದಿಗೆ ಓದಿಕೊಂಡಂತೆ) | ಲೈಸೆನ್ಸ್ ಪಡೆದ ಕೊಳಾಯಿಗಾರರು ವಿನಿಯಮಗಳನ್ನು ಉಲ್ಲಂಘಿಸುವುದು ಅಥವಾ ಕಾಮಗಾರಿಯನ್ನು ಅಜಾಗರೂಕತೆಯಿಂದ ಅಥವಾ ನಿರ್ಲಕ್ಷ್ಯತೆಯಿಂದ ಕಾರ್ಯಗತ ಗೊಳಿಸುವುದು ಇತ್ಯಾದಿ | ಒಂದು ಸಾವಿರ |
| 241 | ..... | ಒಳಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಷೇಧಿಸಿರುವ ಕಾರ್ಯಗಳನ್ನು ಬುದ್ದಿಪೂರ್ವಕವಾಗಿ ಅಥವಾ ನಿರ್ಲಕ್ಷ್ಯತೆಯಿಂದ ಮಾಡುವುದು | ಒಂದು ಸಾವಿರ |
| 242 | (3) | ಉಪವಿಧಿಗಳಿಗನುಗುಣವಾಗಿ ಮನೆಯ ಚರಂಡಿಗಳು, ಇತ್ಯಾದಿಗಳನ್ನು ನಿರ್ವಹಿಸಲು ತಪ್ಪುವುದು | ಐದು ನೂರು |
| 246 | (2)<br><br>(3) | ಲೈಸೆನ್ಸ್ ಇಲ್ಲದೆ ಸಾರ್ವಜನಿಕ ಕಕ್ಕಸನ್ನು ನಿರ್ವಹಣೆಮಾಡುವುದು<br><br>ಸಾರ್ವಜನಿಕ ಕಕ್ಕಸನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಐದು ನೂರು<br><br>ಐದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| 247 | ... | ಕಕ್ಕಸಿಗೆ ವ್ಯವಸ್ಥೆ ಮಾಡಲು ಅಥವಾ ಬೇರೊಂದು ಸ್ಥಳಕ್ಕೆ ಕಕ್ಕಸನ್ನು ಸ್ಥಳಾಂತರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು ಮತ್ತು ಕಕ್ಕಸುಗಳನ್ನು ಸ್ವಚ್ಛವಾಗಿ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಐದು ನೂರು |
| 248 | ... | ಹೆಚ್ಚಿನ ಸಂಖ್ಯೆಯ ಜನರು ಬಳಸುವ ಆವರಣಗಳಿಗೆ ಕಕ್ಕಸುಗಳನ್ನು ವ್ಯವಸ್ಥೆಮಾಡಲು ಅಥವಾ ಅವುಗಳನ್ನು ಸ್ವಚ್ಛವಾದ ಅಥವಾ ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಒಂದು ಸಾವಿರ |
| 249 | ... | ಮಾರುಕಟ್ಟೆ, ದನಗಳ ಕೊಟ್ಟಿಗೆ ಅಥವಾ ಗಾಡಿಗಳ ನಿಲ್ದಾಣಗಳಲ್ಲಿ ಕಕ್ಕಸುಗಳನ್ನು ವ್ಯವಸ್ಥೆಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು ಅಥವಾ ಅವುಗಳನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಒಂದು ಸಾವಿರ |
| 250 | ... | ಕಕ್ಕಸುಗಳನ್ನು ಬಳಸುವ ವ್ಯಕ್ತಿಗಳು ಬೇರೆಯವರಿಗೆ ಕಾಣಿಸದಂತೆ ಅವುಗಳನ್ನು ನಿರ್ಮಿಸಲು ತಪ್ಪುವುದು | ಎರಡು ನೂರು |
| 252 | ... | ಅನುಮತಿ ಪಡೆಯದೆ ಪ್ರಧಾನ ಮಾರ್ಗಗÀಳೊಂದಿಗೆ ಸಂಪರ್ಕ ಕಲ್ಪಿಸುವುದು | ಎರಡು ಸಾವಿರ |
| 272 | ... | ಅನುಮತಿಯಿಲ್ಲದೆ ಬೀದಿ ಪಂಕ್ತೀಕರಣದಲ್ಲಿ ಅಥವಾ ಕಟ್ಟಡದ ಸಾಲಿನಲ್ಲಿ ಕಟ್ಟಡ ನಿರ್ಮಿಸುವುದು | ಹತ್ತು ಸಾವಿರ |
| 273 | (1) | ಕಟ್ಟಡಗಳನ್ನು ಹಿಂದಕ್ಕೆ ಸರಿಹೊಂದಿಸಲು ಮಾಡಿದ ಆದೇಶಗಳನ್ನು ಪಾಲಿಸಲು ತಪ್ಪುವುದು | ಐದು ಸಾವಿರ |
| 278 | ... | ಸಾರ್ವಜನಿಕ ಬೀದಿಯ ನೆಲಗಟ್ಟು, ಅಥವಾ ಬೇಲಿಗಳು, ಸ್ತಂಭಗಳು ಹಾಗೂ ಇತರ ಸಾಮಗ್ರಿಗಳನ್ನು ಕಾನೂನುಬಾಹಿರವಾಗಿ ಸ್ಥಳಾಂತರ ಮಾಡುವುದು, ಇತ್ಯಾದಿ | ಐದು ಸಾವಿರ |
| 280 | ... | ವಿಲೆ ಮಾಡುವುದಕ್ಕೆ ಮುಂಚೆ ಕಟ್ಟಡ ನಿವೇಶನಗಳ ಮೇಲೆ ಬೀದಿಗಳನ್ನು ಅಥವಾ ರಸ್ತೆಗಳನ್ನು ವ್ಯವಸ್ಥೆಮಾಡಲು ತಪ್ಪುವುದು | ಎರಡು ಸಾವಿರ |
| 281 | ... | ಕಾನೂನುಬಾಹಿರವಾಗಿ ಹೊಸ ಬೀದಿಗಳನ್ನು ರೂಪಿಸುವುದು ಅಥವಾ ರಚಿಸುವುದು | ಐದು ಸಾವಿರ |
| 283 | ... | ಖಾಸಗಿ ಬೀದಿಗೆ ಜಲ್ಲಿ ಇತ್ಯಾದಿಯನ್ನು ಹಾಕಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ |
| 285 | ... | ಬೀದಿಯ ಅಥವಾ ಯಾವುದೇ ಸಾರ್ವಜನಿಕ ಸ್ಥಳದ ನಿಯಂತ್ರಣವು ನಗರಪಾಲಿಕೆಯಲ್ಲಿ ನಿಹಿತವಾಗಿದೆಯೋ ಆ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಗೋಡೆಯನ್ನು ಕಟ್ಟುವುದು ಅಥವಾ ಬೇಲಿಯನ್ನು ಹಾಕುವುದು, ಇತ್ಯಾದಿ | ಒಂದು ಸಾವಿರ |
| 286 | ... | ಲೈಸೆನ್ಸ್ ಇಲ್ಲದೆ ಅಥವಾ ನೋಟೀಸಿಗೆ ತದ್ವಿರುದ್ಧವಾಗಿ ಬಾಗಿಲುಗಳು ನೆಲಅಂತಸ್ತಿನ ಕಿಟಕಿಗಳು ಮೊದಲಾದವುಗಳನ್ನು ಹೊರಮುಖವಾಗಿ ತೆರೆದುಕೊಂಡಿರುವಂತೆ ಮಾಡಿರುವುದು | ಎರಡು ಸಾವಿರ |
| 287 | ... | ಖಾಯಂ ಒತ್ತುವರಿಯನ್ನು ತೆರವು ಮಾಡಲು ತಪ್ಪುವುದು | ಎರಡು ಸಾವಿರ |
| 288 | ... | ತಾತ್ಕಾಲಿಕ ಒತ್ತುವರಿಯನ್ನು ತೆರವುಮಾಡಲು | ಐದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| | | ತಪ್ಪುವುದು | |
| 290 | ... | ಕಾನೂನುಬಾಹಿರವಾಗಿ ಸರಳನ್ನು ತೆಗೆದುಹಾಕುವುದು ಅಥವಾ ಚೌಬೀನೆ ಮರಗಳು, ಇತ್ಯಾದಿಗಳನ್ನು ದಾಸ್ತಾನು ಮಾಡುವುದು ಅಥವಾ ದೀಪವನ್ನು ತೆಗೆದುಹಾಕುವುದು ಅಥವಾ ಆರಿಸುವುದು | ಐದು ನೂರು |
| 291 | (1) | ಬೀದಿಯಲ್ಲಿ ಕಾನೂನುಬಾಹಿರವಾಗಿ ಗುಂಡಿ ತೆಗೆಯುವುದು ಅಥವಾ ಅಡೆತಡೆ ಉಂಟುಮಾಡುವುದು | ಐದು ನೂರು |
| | (3) | ಅಡತಡೆಯನ್ನು ತೆಗೆದುಹಾಕಲು ತಪ್ಪುವುದು | ಐದು ನೂರು |
| 292 | ... | ಬೀದಿಗೆ ಅಥವಾ ಕಾಲುದಾರಿಗೆ ಅಡೆತಡೆಯುಂಟಾಗುವ ಸಂಭವವಿರುವಂತೆ ಲೈಸೆನ್ಸ್ ಇಲ್ಲದೆ ಕಟ್ಟಡ ಕಟ್ಟುವುದು, ಇತ್ಯಾದಿ | ಐದು ನೂರು |
| 292 | ... | ದುರಸ್ತಿಯಲ್ಲಿರುವಂಥ ಕಟ್ಟಡಕ್ಕೆ ಬೇಲಿ ಇತ್ಯಾದಿಯನ್ನು ಹಾಕಲು ತಪ್ಪುವುದು | ಐದು ನೂರು |
| 293 | (3) | ಸಾರ್ವಜನಿಕ ಬೀದಿಯ ಸಂಖ್ಯೆಯನ್ನು ಕಾನೂನುಬಾಹಿರವಾಗಿ ನಾಶಪಡಿಸುವುದು. ಇತ್ಯಾದಿ | ಎರಡು ನೂರು |
| 294 | (2) | ಕಟ್ಟಡದ ಸಂಖ್ಯೆಯನ್ನು ಕಾನೂನು ಬಾಹಿರವಾಗಿ ನಾಶಪಡಿಸುವುದು ಇತ್ಯಾದಿ | ಎರಡು ನೂರು |
| 294 | (3) | ಸಂಖ್ಯೆಯನ್ನು ಬದಲಿಸುವಂತೆ ಅಗತ್ಯಪಡಿಸಿದಾಗ ಹಾಗೆ ಮಾಡಲು ತಪ್ಪುವುದು | ಎರಡು ನೂರು |
| 296 | (5) | ನಗರಪಾಲಿಕೆಯು ಹೊರಡಿಸಿದ ಘೋಷಣೆಗೆ ತದ್ವಿರುದ್ಧವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡುವುದು ಅಥವಾ ಮರು ನಿರ್ಮಾಣ ಮಾಡುವುದು | ಎರಡು ಸಾವಿರ |
| 297 | (1) | ಬೀದಿಗಳ ಮೂಲೆಗಳಲ್ಲಿನ ಕಟ್ಟಡಗಳನ್ನು ನೇರ್ಪಡಿಸಲು ಅಥವಾ ಎದ್ದುಕಾಣುವಂತೆ ಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ |
| 298 | .... | ಸುಲಭ ದಹ್ಯ ಸಾಮಗ್ರಿಗಳಿಂದ ಹೊರ ಛಾವಣಿಯ ನಿರ್ಮಾಣ, ಮರುನಿರ್ಮಾಣ ಅಥವಾ ಅಂಥ ಹೊರಛಾವಣಿಯನ್ನು ಉಳಿಸಿಕೊಳ್ಳುವುದು, ಇತ್ಯಾದಿ | ಐದು ನೂರು |
| 310 | (1) | ಕಟ್ಟಡದ ನಿರ್ಮಾಣ ಅಥವಾ ಮರುನಿರ್ಮಾಣ ಪೂರ್ಣಗೊಂಡ ತರುವಾಯ ಆಯುಕ್ತರಿಗೆ ಲಿಖಿತದಲ್ಲಿ ತಿಳಿಸಲು ತಪ್ಪುವುದು | ಐದು ನೂರು |
| 319 | .... | ಆವರಣಗಳ ಹೊರ ಗೋಡೆಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ತಪ್ಪುವುದು | ಎರಡು ನೂರು |
| 322 | .... | ಅಪಾಯಕಾರಿ ಕಟ್ಟಡವನ್ನು ಕೆಡವಲು, ದುರಸ್ತಿ ಮಾಡಲು ಅಥವಾ ಭದ್ರಪಡಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ಸಾವಿರ |
| 323 | .... | ಅಪಾಯಕಾರಿ ಮರಗಳನ್ನು ಭದ್ರಪಡಿಸಲು, ಸವರಲು ಅಥವಾ ಕಡಿದುಹಾಕಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |
| 324 | .... | ಹಾದುಹೋಗುವವರಿಗೆ ಅಥವಾ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳಿಗೆ ಅಪಾಯಕಾರಿಯಾದ ಕೆರೆಯನ್ನು ಅಥವಾ ಇತರ ಸ್ಥಳವನ್ನು ದುರಸ್ತಿ, ಇತ್ಯಾದಿ ಮಾಡುವ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| 325 | .... | ಬೆಂಕಿ ಆಕಸ್ಮಿಕದ ಬಗ್ಗೆ ಮುನ್ನೆಚ್ಚರಿಕೆಗಳಿಗೆ ಸಂಬಂಧಿಸಿದ ನೋಟೀಸನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ |
| 326 | (1) | ಅನುಮತಿ ಇಲ್ಲದೆ ಬಾವಿ ಇತ್ಯಾದಿಗಳನ್ನು ನಿರ್ಮಿಸುವುದು | ಐದು ನೂರು |
| | (2) | ಬಾವಿಯನ್ನು ಮುಚ್ಚಿಹಾಕಲು ಅಥವಾ ಕೆಡವಿಹಾಕಲು ಕೊಟ್ಟ ನೋಟೀಸನ್ನು ಪಾಲಿಸಲು ತಪ್ಪುವುದು | ಐದು ನೂರು |
| 327 | .... | ಅಪಾಯಕಾರಿ ಕಲ್ಲುಗಣಿ ಕೆಲಸವನ್ನು ನಿಲ್ಲಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ |
| 328 | (1) | ಕೆರೆ ಅಥವಾ ಬಾವಿಯನ್ನು ಮುಚ್ಚುವುದು ಇತ್ಯಾದಿ ಬಗ್ಗೆ ಅಥವಾ ಅದರಲ್ಲಿನ ನೀರನ್ನು ಹರಿಸಿ ಬರಿದು ಮಾಡುವುದು ಇತ್ಯಾದಿ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ಸಾವಿರ |
| | (3) | ನಿಷೇಧಗಳಿಗೆ ಅಥವಾ ವಿನಿಯಮಗಳಿಗೆ ತದ್ವಿರುದ್ಧವಾಗಿ ಸಾಗುವಳಿ ಮಾಡುವುದು | ಐದು ಸಾವಿರ |
| 329 | .... | ಕುಡಿಯುವುದಕ್ಕೆ, ಸ್ನಾನ ಮಾಡುವುದಕ್ಕೆ ಅಥವಾ ಬಟ್ಟೆ ಒಗೆಯುವುದಕ್ಕೆ ಬಳಸುವ ಕೆರೆಗಳು, ಬಾವಿ ಅಥವಾ ನೀರಿನ ಇತರ ಮೂಲಗಳನ್ನು ಸ್ವಚ್ಛಗೊಳಿಸುವುದು ಅಥವಾ ಮುಚ್ಚುವುದು ಇತ್ಯಾದಿ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |
| 331 | .... | ಕೆರೆಯ ನೀರನ್ನು ಮಲಿನಗೊಳಿಸುವುದು, ಇತ್ಯಾದಿ | ಐದು ನೂರು |
| 332 | .... | ಒಕ್ಕಲಿಲ್ಲದ ಆವರಣಗಳನ್ನು ಸುತ್ತುಗಟ್ಟುಹಾಕಲು, ತೆರವುಗೊಳಿಸಲು ಅಥವಾ ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |
| 333 | .... | ಹೊಲಸು ಸ್ಥಿತಿಯಲ್ಲಿರುವ ಅಥವಾ ಯಾವುದೇ ದಟ್ಟವಾದ ಅಥವಾ ಹಾನಿಕಾರಕವಾದ ಸಸ್ಯಗಳು ಮಿತಿಮೀರಿ ಬೆಳೆದಿರುವ ಕಟ್ಟಡವನ್ನು ಅಥವಾ ಭೂಮಿಯನ್ನು ಚೊಕ್ಕಟಗೊಳಿಸಲು ಅಥವಾ ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |
| 334 | .... | ಕಲ್ಲಿದ್ದಲು ಬೂದಿ, ಇತ್ಯಾದಿಯನ್ನು ರಾಶಿ ಹಾಕುವುದು ಮುಂತಾದವುಗಳಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಉಪದ್ರವವನ್ನು ನಿವಾರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ |
| 335 | .... | ಕಟ್ಟಡಕ್ಕೆ ಅಥವಾ ಭೂಮಿಗೆ ಬೇಲಿ ಹಾಕಲು ಅಥವಾ ಬೇಲಿಗಳನ್ನು ಅಥವಾ ಮರಗಳನ್ನು ಕತ್ತರಿಸಿ ಸಮ ಮಾಡಲು, ಸವರಲು ಅಥವಾ ಕತ್ತರಿಸಿಹಾಕಲು ಅಥವಾ ಸುತ್ತುಗಟ್ಟಿರುವ ಗೋಡೆ ಎತ್ತರವನ್ನು ತಗ್ಗಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |
| 336 | .... | ಕಟ್ಟಡಕ್ಕೆ ಸುಣ್ಣ ಬಳಿಯಲು ಅಥವಾ ಅನ್ಯಥಾ ಅದನ್ನು ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |
| 337 | .... | ನೈರ್ಮಲ್ಯಕರವಲ್ಲದ ಕಟ್ಟಡಗಳಿಗೆ ಸಂಬಂಧಿಸಿದಂತೆ ಕೆಲಸವನ್ನು ನಿರ್ವಹಿಸಲು ಅಥವಾ ಇತರ ಕ್ರಮವನ್ನು | ಕಲ್ಲು ಕಟ್ಟಡದ ಸಂದರ್ಭದಲ್ಲಿ |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| | | ತೆಗೆದುಕೊಳ್ಳಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ ರೂಪಾಯಿಗಳು ಹಾಗೂ ಗುಡಿಸಲಿನ ಸಂದರ್ಭದಲ್ಲಿ ಐದು ನೂರು ರೂಪಾಯಿಗಳು |
| 338 | (2) | ಮನುಷ್ಯರ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳನ್ನು ನಿಷೇಧದ ತರುವಾಯವು ಬಳಸುವುದು ಅಥವಾ ಬಳಸಲು ಅವಕಾಶ ನೀಡುವುದು | ಪ್ರತಿಯೊಂದು ದಿನಕ್ಕೆ ಎರಡು ನೂರು |
| | (4) | ಅದನ್ನು ಕೆಡವಿಹಾಕಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ದಿನವೊಂದಕ್ಕೆ ಎರಡು ನೂರು |
| 339 | (1) | ಕಟ್ಟಡದಲ್ಲಿ ಜನಸಂದಣಿಯನ್ನು ಕಡಿಮೆಮಾಡಲು ಆದೇಶ ನೀಡಿದ ತರುವಾಯವು ಕಟ್ಟಡದಲ್ಲಿ ಜನಸಂದಣಿಗೆ ಅವಕಾಶ ಮಾಡಿಕೊಡುವುದು | ದಿನವೊಂದಕ್ಕೆ ಎರಡು ನೂರು |
| | (4) | ಜನಸಂದಣಿ ಹೆಚ್ಚಿರುವ ಕಟ್ಟಡವನ್ನು ಅಥವಾ ಕೊಠಡಿಯನ್ನು ಖಾಲಿ ಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ದಿನವೊಂದಕ್ಕೆ ಎರಡು ನೂರು |
| 343 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ವಸತಿಗೃಹ, ಉಪಾಹಾರಗೃಹ, ಚಹಾ ಅಂಗಡಿ ಮೊದಲಾದವುಗಳನ್ನು ಇಡುವುದು | ಒಂದು ಸಾವಿರ |
| 344 | (ಎ) | ಕಾನೂನು ಬಾಹಿರವಾಗಿ ಹಂದಿಗಳನ್ನು ಸಾಕುವುದು | ಎರಡು ನೂರು |
| | (ಬಿ) | ಉಪದ್ರವಕಾರಿಯಾಗುವಂತೆ ಅಥವಾ ಅಪಾಯಕಾರಿ ಯಾಗುವಂತೆ ಪ್ರಾಣಿಗಳನ್ನು ಕಾನೂನುಬಾಹಿರವಾಗಿ ಸಾಕುವುದು | ಎರಡು ನೂರು |
| | (ಸಿ) | ಪ್ರಾಣಿಗಳಿಗೆ ಹೊಲಸನ್ನು ತಿನ್ನಿಸುವುದು | ಎರಡು ನೂರು |
| 346 | .... | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಕುದುರೆಲಾಯ, ದನದ ಕೊಟ್ಟಿಗೆ ಮುಂತಾದವಕ್ಕೆ ಸ್ಥಳವನ್ನು ಬಳಸುವುದು | ಐದು ನೂರು |
| 347 | .... | ಅಧಿನಿಯಮಕ್ಕೆ ಅಥವಾ ಸಹಾಯಕ ಶಾಸನಕ್ಕೆ ತದ್ವಿರುದ್ಧವಾಗಿ ಕುದುರೆಲಾಯ, ದನದ ಕೊಟ್ಟಿಗೆ ಮುಂತಾದವುಗಳನ್ನು ನಿರ್ಮಿಸುವುದು ಅಥವಾ ನಿರ್ವಹಿಸುವುದು | ಐದು ನೂರು |
| 349 | .... | ಸಾರ್ವಜನಿಕ ಸ್ಥಳವನ್ನು ಅಥವಾ ಸಾರ್ವಜನಿಕ ಬೀದಿಯ ಬದಿಗಳನ್ನು ಗಾಡಿ ನಿಲ್ದಾಣ ಇತ್ಯಾದಿಯಾಗಿ ಬಳಸುವುದು, ಇತ್ಯಾದಿ | ಎರಡು ನೂರು |
| 351 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಹೊಸ ಖಾಸಗಿ ಗಾಡಿ ನಿಲ್ದಾಣವನ್ನು ಪ್ರಾರಂಭಿಸುವುದು ಅಥವಾ ಇಟ್ಟುಕೊಂಡು ಬರುವುದು | ಎರಡು ಸಾವಿರ |
| 352 | .... | ಪ್ರಾಣಿಗಳ ಶವಗಳನ್ನು ತೆಗೆದುಹಾಕಲು ತಪ್ಪುವುದು | ಎರಡು ನೂರು |
| 353 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಅನುಸೂಚಿ Xರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಕ್ಕಾಗಿ ಸ್ಥಳವನ್ನು ಬಳಸುವುದು | ಎರಡು ಸಾವಿರ |
| 354 | (1),(2) ಮತ್ತು (3) | ಕಾರ್ಖಾನೆಯ ಕಾರ್ಯಾಗಾರ, ಕಾರ್ಯಸ್ಥಳ ಅಥವಾ ಯಂತ್ರಸಾಮಗ್ರಿಯನ್ನು ಕಾನೂನು ಬಾಹಿರವಾಗಿ | ಹತ್ತು ಸಾವಿರ |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| | | ಸ್ಥಾಪಿಸುವುದು | |
| | (5) | ಚಿಮಣಿಗಳಿಗೆ ಸಂಬಂಧಿಸಿದ ಆದೇಶವನ್ನು ಉಲ್ಲಂಘಿಸುವುದು | ಐದು ಸಾವಿರ |
| 355 | (1) | ಉಪದ್ರವವನ್ನು ನಿವಾರಿಸುವುದಕ್ಕೆ ಸಂಬಂಧಿಸಿದ ಆದೇಶವನ್ನು ಉಲ್ಲಂಘಿಸುವುದು | ಒಂದು ಸಾವಿರ |
| 355 | (2) | ಕಾರ್ಖಾನೆ ಇತ್ಯಾದಿಗಳ ಕಾರ್ಯನಿರ್ವಹಣೆಯನ್ನು ಅಥವಾ ವಿಶಿಷ್ಟ ಬಗೆಯ ಇಂಧನದ ಬಳಕೆಯನ್ನು ನಿಷೇಧಿಸುವ ಆದೇಶವನ್ನು ಉಲ್ಲಂಘಿಸುವುದು | ಎರಡು ಸಾವಿರ |
| 357 | .... | ಕಾರ್ಖಾನೆ ಇತ್ಯಾದಿಗಳನ್ನು ಸುಸ್ಥಿತಿಯಲ್ಲಿಡುವುದಕ್ಕಾಗಿ, ಅತಿಯಾಗಿ ದಟ್ಟೈಸುವುದು ಇತ್ಯಾದಿಯನ್ನು ಕಡಿಮೆ ಮಾಡುವುದಕ್ಕಾಗಿ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ |
| 358 | .... | ಉಪದ್ರವ ಅಥವಾ ಪ್ರಾಣಕ್ಕೆ ಅಪಾಯ ಮುಂತಾದವನ್ನು ನಿವಾರಿಸಲು ನೀಡಿದ ಆದೇಶವನ್ನು ಉಲ್ಲಂಘಿಸುವುದು | ಒಂದು ಸಾವಿರ |
| 363 | (2) | ಅನಧಿಕೃತ ಸ್ಥಳಗಳಲ್ಲಿ ಅಗಸರು ಬಟ್ಟೆಗಳನ್ನು ಒಗೆಯುವುದು | ಎರಡು ನೂರು |
| 365 | .... | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್‌ಸ್‌ಗೆ ತದ್ವಿರುದ್ಧವಾಗಿ ಸ್ಥಳವನ್ನು ಕಸಾಯಿಖಾನೆಯಾಗಿ ಬಳಸುವುದು | ಐದು ನೂರು |
| 367 | .... | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್‌ಸ್‌ಗೆ ತದ್ವಿರುದ್ಧವಾಗಿ ಮಾರಾಟಕ್ಕಾಗಿ ಅಥವಾ ಆಹಾರಕ್ಕಾಗಿ ಪ್ರಾಣಿಗಳನ್ನು ವಧೆ ಮಾಡುವುದು ಅಥವಾ ಪ್ರಾಣಿಗಳ ಶವಗಳ ಚರ್ಮ ಸುಲಿಯುವುದು ಅಥವಾ ಕತ್ತರಿಸುವುದು ಅಥವಾ ಉಪದ್ರವ ಉಂಟಾಗುವ ಹಾಗೆ ಚರ್ಮವನ್ನು ಒಣಗಿಸುವುದು | ಎರಡು ನೂರು ರೂಪಾಯಿಗಳು ಪ್ರತಿಯೊಂದು ಪ್ರಾಣಿಯ ಶವಕ್ಕೆ ಅಥವಾ ಚರ್ಮಕ್ಕೆ |
| 370 | .... | ಅನುಮತಿ ಇಲ್ಲದೆ ಅಥವಾ ಅನುಮತಿಗೆ ತದ್ವಿರುದ್ಧವಾಗಿ ಪ್ರಾಣಿಯನ್ನು ಅಥವಾ ವಸ್ತುವನ್ನು ಸಾರ್ವಜನಿಕ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದು ಅಥವಾ ಮಾರಾಟಕ್ಕೆ ಇಡುವುದು | ಐದು ನೂರು |
| 371 | (2) | ಲೈಸೆನ್ಸ್ ಪಡೆಯದೆ ಅಥವಾ ಅನುಮತಿಗೆ ತದ್ವಿರುದ್ಧವಾಗಿ ಖಾಸಗಿ ಮಾರುಕಟ್ಟೆಯನ್ನು ಸ್ಥಾಪಿಸುವುದು | ಒಂದು ಸಾವಿರ |
| 372 | .... | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್‌ಸ್‌ಗೆ ತದ್ವಿರುದ್ಧವಾಗಿ ಖಾಸಗಿ ಮಾರುಕಟ್ಟೆಯನ್ನು ತೆರೆದಿಡುವುದು | ಒಂದು ಸಾವಿರ |
| 375 | .... | ಲೈಸೆನ್ಸ್ ಇಲ್ಲದ ಖಾಸಗಿ ಮಾರುಕಟ್ಟೆಯಲ್ಲಿ ಪ್ರಾಣಿಗಳನ್ನು ಅಥವಾ ವಸ್ತುಗಳನ್ನು ಮಾರಾಟ ಮಾಡುವುದು ಅಥವಾ ಮಾರಾಟಕ್ಕೆ ಇಡುವುದು | ಎರಡು ನೂರು |
| 376 | .... | ಖಾಸಗಿ ಮಾರುಕಟ್ಟೆಗಳಿಗೆ ಸಂಪರ್ಕ ಮಾರ್ಗಗಳು, ಚರಂಡಿಗಳು, ಮುಂತಾದವುಗಳನ್ನು ನಿರ್ಮಿಸಲು ಅಥವಾ ಅವುಗಳಿಗೆ ನೆಲಗಟ್ಟು ಇತ್ಯಾದಿ ಮಾಡಲು ನೀಡಿದ ನಿರ್ದೇಶನವನ್ನು ಪಾಲಿಸಲು ತಪ್ಪುವುದು | ಐದು ನೂರು |
| 377 | (2) | ಕೆಲಸಗಳನ್ನು ನಿರ್ವಹಿಸಲು ತಪ್ಪಿದ್ದಕ್ಕಾಗಿ ಲೈಸೆನ್ಸನ್ನು | ಐದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| | | ಅಮಾನತ್ತುಗೊಳಿಸಿದ ಅಥವಾ ನಿರಾಕರಿಸಿದ ತರುವಾಯವೂ ಖಾಸಗಿ ಮಾರುಕಟ್ಟೆಯನ್ನು ಪ್ರಾರಂಭಿಸುವುದು ಅಥವಾ ತೆರೆದಿಡುವುದು | |
| 378 | .... | ಮಾರುಕಟ್ಟೆ ವಿನಿಯಮಗಳನ್ನು ಉಲ್ಲಂಘಿಸುವುದು | ಒಂದು ನೂರು |
| 379 | .... | ಕುಷ್ಟರೋಗದಿಂದ ಅಥವಾ ಇತರ ಸೋಂಕು ಅಥವಾ ಅಂಟುರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ಹೊರಹಾಕಲು ಮಾರುಕಟ್ಟೆಗಳ ಪ್ರಭಾರದಲ್ಲಿರುವ ವ್ಯಕ್ತಿಯು ತಪ್ಪುವುದು | ಐದು ನೂರು |
| 381 | .... | ಲೈಸೆನ್ಸ್ ಇಲ್ಲದೆ ಕಟುಕನ, ಮಿÃನು ಮಾರುವವನ ಅಥವಾ ಕೋಳಿ ಮಾರುವವನ ಕಸುಬನ್ನು ನಡೆಸುವುದು ಇತ್ಯಾದಿ | ಒಂದು ನೂರು |
| 382 | .... | ಸಾರ್ವಜನಿಕ ಬೀದಿಗಳಲ್ಲಿ ಪ್ರಾಣಿಯನ್ನು ಅಥವಾ ವಸ್ತುವನ್ನು ಮಾರಾಟ ಮಾಡುವುದು ಅಥವಾ ಮಾರಾಟಕ್ಕಾಗಿ ಇಡುವುದು | ಎರಡು ನೂರು |
| 386 | .... | ಆಯುಕ್ತರಿಗೆ ಅಥವಾ ಆಯುಕ್ತರಿಂದ ಅಧಿಕೃತನಾದ ಯಾರೇ ವ್ಯಕ್ತಿಗೆ 385ನೇ ಪ್ರಕರಣದ ಮೇರೆಗೆ ಪ್ರವೇಶ, ಇತ್ಯಾದಿ ಅಧಿಕಾರವನ್ನು ಚಲಾಯಿಸಲು ಅಡ್ಡಿಯುಂಟುಮಾಡುವುದು | ಐದು ನೂರು |
| 388 | .... | 387ನೇ ಪ್ರಕರಣದ ಮೇರೆಗೆ ಪಡೆದ ಪ್ರಾಣಿಯನ್ನು ಅಥವಾ ವಸ್ತುವನ್ನು ಸಾಗಿಸುವುದು ಅಥವಾ ಅದರೊಡನೆ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡುವುದು | ಐದು ಸಾವಿರ |
| 392 | (1) | ಲೈಸೆನ್ಸ್ ಇಲ್ಲದೆ ಮೃತರ ವಿಲೆಗಾಗಿ ಸ್ಥಳವನ್ನು ತೆರೆಯುವುದು, ಇತ್ಯಾದಿ | ಒಂದು ಸಾವಿರ |
| 394 | (4) | ಲೈಸೆನ್ಸ್ ಇಲ್ಲದ ಸ್ಮಶಾನವನ್ನು ಅಥವಾ ಸುಡುಗಾಡನ್ನು ಬಳಸುವುದು ಅಥವಾ ಬಳಸಲು ಅವಕಾಶ ನೀಡುವುದು.<br>ನೋಂದಾಯಿಸಿರದ ಸ್ಮಶಾನವನ್ನು ಅಥವಾ ಸುಡುಗಾಡನ್ನು ಬಳಸುವುದು ಅಥವಾ ಬಳಸಲು ಅವಕಾಶ ನೀಡುವುದು | ಐದು ನೂರು<br>ಒಂದು ಸಾವಿರ |
| 395 | .... | ಸ್ಮಶಾನದಲ್ಲಿ ಅಥವಾ ಸುಡುಗಾಡಿನಲ್ಲಿ ಶವ ಹೂಳುವುದರ ಅಥವಾ ಸುಡುವುದರ ಬಗ್ಗೆ ಮಾಹಿತಿ ಕೊಡಲು ತಪ್ಪುವುದು | ಎರಡು ನೂರು |
| 396 | .... | ಸಾರ್ವಜನಿಕ ಆರಾಧನಾ ಸ್ಥಳದಲ್ಲಿ ಹೆಣವನ್ನು ಹೂಳುವುದಕ್ಕಾಗಿ ಗುಮ್ಮಟವನ್ನು ಅಥವಾ ಗೋರಿಯನ್ನು ಕಟ್ಟುವುದು | ಐದು ನೂರು |
| 397 | (3) | ನಿಷೇಧಿಸಿದ ತರುವಾಯವು ಸ್ಥಳದಲ್ಲಿ ಶವವನ್ನು ಹೂಳುವುದು ಅಥವಾ ಸುಡುವುದು | ಎರಡು ಸಾವಿರ |
| 398 | .... | ಶವಗಳನ್ನು ಹೂಳುವುದು ಅಥವಾ ಸುಡುವುದು, ಇತ್ಯಾದಿ | ಐದು ನೂರು |
| 400 | .... | ಲೈಸೆನ್ಸ್ ಇಲ್ಲದೆ ಸಾರ್ವಜನಿಕ ಸ್ಥಳದಲ್ಲಿ ಮೃತರ ವಿಲೆಗಾಗಿ ಗೋರಿ ಗುಂಡಿ ತೋಡುವವನ ಅಥವಾ ಸಹಾಯಕನ ಕೆಲಸವನ್ನು ನಿರ್ವಹಿಸುವುದು | ಎರಡು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| 402 | .... | ಖಾಸಗಿ ಅಥವಾ ಸಾರ್ವಜನಿಕ ವಾಸದ ಮನೆಯಲ್ಲಿ ಅಪಾಯಕಾರಿ ರೋಗ ಇರುವುದರ ಬಗ್ಗೆ ಮಾಹಿತಿ ಕೊಡಲು ವೈದ್ಯ ವೃತ್ತಿಗರು ಅಥವಾ ಮನೆಯ ಮಾಲೀಕನು ಅಥವಾ ಅಧಿಭೋಗದಾರನು ತಪ್ಪುವುದು | ಐದು ನೂರು |
| 406 | .... | ಕಟ್ಟಡವನ್ನು ಅಥವಾ ವಸ್ತುವನ್ನು ಸ್ವಚ್ಛಗೊಳಿಸಲು ಅಥವಾ ಅದರ ಸೋಂಕು ನಿವಾರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |
| 408 | (2) | ಅನಧಿಕೃತ ಸ್ಥಳಗಳಲ್ಲಿ ಸೋಂಕು ತಗುಲಿದ ವಸ್ತುಗಳನ್ನು ತೊಳೆಯುವುದು | ಐದು ನೂರು |
| 409 | .... | ಸೋಂಕು ತಗುಲಿದ ವಸ್ತುಗಳನ್ನು ಕೊಡುವುದು, ಎರವಲು ಕೊಡುವುದು, ಇತ್ಯಾದಿ | ಐದು ನೂರು |
| 410 | .... | ಸೋಂಕು ತಗುಲಿದ ವ್ಯಕ್ತಿಯು ವೃತ್ತಿಯನ್ನು ನಡೆಸುವುದು | ಐದು ನೂರು |
| 411 | (1) | ಸೋಂಕು ತಗುಲಿರುವ ವ್ಯಕ್ತಿಯು ಸೋಂಕು ತಗುಲಿರುವ ಸಂಗತಿಯನ್ನು ತಿಳಿಸದೆ ಸಾರ್ವಜನಿಕ ವಾಹನದೊಳಕ್ಕೆ ಪ್ರವೇಶಿಸುವುದು | ಐದು ನೂರು |
| 412 | (1) | ಸಾರ್ವಜನಿಕ ವಾಹನದ ಸೋಂಕನ್ನು ನಿವಾರಿಸಲು ತಪ್ಪುವುದು, ಇತ್ಯಾದಿ | ಐದು ನೂರು |
| | (2) | ಸೋಂಕು ತಗುಲಿದ ವ್ಯಕ್ತಿಯು ಪ್ರಯಾಣ ಮಾಡಿದಂಥ ಸಾರ್ವಜನಿಕ ವಾಹನವನ್ನು ಆರೋಗ್ಯಾಧಿಕಾರಿಯಿಂದ ಪ್ರಮಾಣಪತ್ರವನ್ನು ಪಡೆಯುವುದಕ್ಕೆ ಮುಂಚೆ ಬಳಸುವುದು | ಐದು ನೂರು |
| 413 | .... | ಆರೋಗ್ಯಾಧಿಕಾರಿಯಿಂದ ಪ್ರಮಾಣಪತ್ರ ಪಡೆಯದೆ ಸೋಂಕು ತಗುಲಿದ ಕಟ್ಟಡವನ್ನು ಬಾಡಿಗೆಗೆ ಅಥವಾ ಒಳಬಾಡಿಗೆಗೆ ಕೊಡುವುದು | ಎರಡು ಸಾವಿರ |
| 414 | .... | ಸಾರ್ವಜನಿಕ ಮನೋರಂಜನಾ ಸ್ಥಳವನ್ನು ಮುಚ್ಚಲು ತಪ್ಪುವುದು | ಎರಡು ಸಾವಿರ |
| 415 | .... | ಸೋಂಕು ತಗುಲಿದ ಮಗುವನ್ನು ಶಾಲೆಗೆ ಕಳುಹಿಸುವುದು | ಐದು ನೂರು |
| 416 | .... | ಸೋಂಕು ತಗುಲಿದ ವ್ಯಕ್ತಿಯು ಸಾರ್ವಜನಿಕ ಅಥವಾ ಪರಿಚಲನ ಗ್ರಂಥಾಲಯದಿಂದ ಪುಸ್ತಕವನ್ನು ಬಳಸುವುದು ಅಥವಾ ಬಳಸುವುದಕ್ಕೆ ಅನುಮತಿ ನೀಡುವುದು | ಐದು ನೂರು |
| 417 | .... | ನಿಷೇಧಿಸಿದ ತರುವಾಯವೂ ನೀರನ್ನು ಬಳಸುವುದು | ಐದು ನೂರು |
| 419 | .... | ಸಿಡುಬು ರೋಗದ ಬಗ್ಗೆ ಮಾಹಿತಿಯನ್ನು ಕೊಡಲು ತಪ್ಪುವುದು | ಐದು ನೂರು |
| 420 | .... | ಸಿಡುಬು ರೋಗಕ್ಕೆ ರೋಗನಿರೋಧಕ ಚುಚ್ಚುಮದ್ದನ್ನು ಹಾಕಿಸಿಕೊಂಡ ನಲವತ್ತು ದಿವಸಗಳು ಮುಗಿಯುವುದಕ್ಕೆ ಮುಂಚೆ ಪ್ರಮಾಣಪತ್ರ ಇಲ್ಲದೆ ನಗರವನ್ನು ಪ್ರವೇಶಿಸುವುದು | ಒಂದು ಸಾವಿರ |
| 430 | (3) | ಸಾರ್ವಜನಿಕವಾಗಿ ಪ್ರದರ್ಶಿಸಿದ ನಿಯಮಗಳ ಹಾಗೂ ಉಪವಿಧಿಗಳ ಪ್ರತಿಗಳನ್ನು ಪರಿಶೀಲಿಸುವುದಕ್ಕೆ ಅಡ್ಡಿಯುಂಟುಮಾಡುವುದು | ಐದು ನೂರು |
| | (4) | ಉಪವಿಧಿಗಳ ಮತ್ತು ನಿಯಮಗಳ ಮುದ್ರಿತ ಪ್ರತಿಗಳನ್ನು ಪ್ರದರ್ಶಿಸುವ ಫಲಕವನ್ನು ನಾಶ | ಐದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ |
|---|---|---|---|
| (1) | | (2) | (3) |
| | | ಪಡಿಸುವುದು, ಇತ್ಯಾದಿ | |
| 443 | (7) | ಕೇಳಿದ ಮೇಲೆ ಲೈಸೆನ್ಸನ್ನು ಹಾಜರ್ಪಡಿಸಲು ತಪ್ಪುವುದು | ಒಂದು ನೂರು |
| 447 | .... | ಹಾಜರಾಗಲು, ದಸ್ತಾವೇಜನ್ನು ಹಾಜರುಪಡಿಸಲು ಅಥವಾ ಸಾಕ್ಷ್ಯವನ್ನು ನೀಡಲು ಕೊಟ್ಟ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ |
| 457 | (1) | ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ಮಾಲೀಕನಿಗೆ ಅನುಮತಿಸಲು ನೀಡಿದ ಸೂಚನೆಯನ್ನು ಪಾಲಿಸಲು ಅಧಿಭೋಗದಾರನು ತಪ್ಪುವುದು | ಪ್ರತಿ ದಿನಕ್ಕೆ ಐದು ನೂರು |
| 459 | .... | ಆಯುಕ್ತರಿಗೆ ಅಥವಾ ಅವರಿಂದ ಅಧಿಕೃತನಾದ ಯಾರೇ ವ್ಯಕ್ತಿಗೆ ಪ್ರವೇಶ ಇತ್ಯಾದಿ ಅಧಿಕಾರಗಳನ್ನು ಚಲಾಯಿಸಲು ಅಡ್ಡಿ ಉಂಟುಮಾಡುವುದು | ಐದು ನೂರು |
| 494 | .... | ನಗರಪಾಲಿಕೆ, ಸ್ಥಾಯೀ ಸಮಿತಿ, ಮೇಯರ್ ಮೊದಲಾದವರಿಗೆ ಅಡ್ಡಿ ಉಂಟುಮಾಡುವುದು ಅಥವಾ ಅವರನ್ನು ಪೀಡಿಸುವುದು, ಇತ್ಯಾದಿ | ಎರಡು ಸಾವಿರ |
| 495 | .... | ಮಟ್ಟ ಇತ್ಯಾದಿಯನ್ನು ತೋರಿಸುವುದಕ್ಕಾಗಿ ನಿಲ್ಲಿಸಿರುವ ಗುರುತನ್ನು ತೆಗೆದುಹಾಕುವುದು | ಒಂದು ನೂರು |
| 496 | .... | ನಗರಪಾಲಿಕೆಯು ಅಥವಾ ಆಯುಕ್ತರು ಪ್ರದರ್ಶಿಸಿರುವ ಅಥವಾ ಅವರ ಆದೇಶದ ಮೇರೆಗೆ ಪ್ರದರ್ಶಿಸಿರುವ ನೋಟೀಸನ್ನು ತೆಗೆದುಹಾಕುವುದು, ಇತ್ಯಾದಿ | ಐದು ನೂರು |
| 497 | .... | ನಗರಪಾಲಿಕೆಯಲ್ಲಿ ನಿಹಿತವಾಗಿರುವ ಭೂಮಿಯಿಂದ ಮಣ್ಣು, ಮರಳು ಅಥವಾ ಇತರ ಸಾಮಗ್ರಿಯನ್ನು ಕಾನೂನುಬಾಹಿರವಾಗಿ ತೆಗೆಯುವುದು ಅಥವಾ ಜಲಮಾರ್ಗಗಳಲ್ಲಿ ಅಥವಾ ಅವುಗಳ ಮೇಲೆ ವಸ್ತುವನ್ನು ಶೇಖರಿಸುವುದು ಅಥವಾ ಅವುಗಳನ್ನು ಒತ್ತುವರಿ ಮಾಡುವುದು | ಐದು ನೂರು |

"

(4) ಅನುಸೂಚಿ-XIIರ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**ಅನುಸೂಚಿ – XII**
**ಮುಂದುವರಿಯುತ್ತಿರುವ ಉಲ್ಲಂಘನೆಗಳಿಗೆ ದಂಡಗಳು**
**[431ನೇ ಪ್ರಕರಣವನ್ನು ನೋಡಿ]**

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ) |
|---|---|---|---|
| (1) | | (2) | (3) |
| 190 | .... | ಉಪವಿಧಿಗಳಿಗೆ ಅನುಗುಣವಾಗಿ ಗೃಹ ಸಂಪರ್ಕಗಳನ್ನು ನಿರ್ವಹಿಸಲು ತಪ್ಪುವುದು | ಒಂದು ನೂರು |
| 192 | (2) ಮತ್ತು (3) | ಗೃಹಸಂಪರ್ಕ ಕಲ್ಪಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 194 | .... | ಗೃಹಬಳಕೆಯ ಉದ್ದೇಶಕ್ಕಾಗಿ ಸರಬರಾಜು ಮಾಡಿದ ನೀರನ್ನು ಗೃಹೇತರ ಉದ್ದೇಶಗಳಿಗೆ ಬಳಸುವುದು | ಒಂದು ನೂರು |
| 211 | (1) | ನೀರಿನ ಪೈಪುಗಳಿಗೆ ಹಾನಿಯಾಗುವಂತೆ ಅಥವಾ ಅವುಗಳಲ್ಲಿನ ನೀರು ಕಲುಷಿತಗೊಳ್ಳುವ ಹಾಗೆ ನೀರಿನ ಪೈಪುಗಳನ್ನು ಹಾಕುವುದು ಇತ್ಯಾದಿ | ಒಂದು ನೂರು |
| | (2) | ನೀರಿನ ಪೈಪುಗಳಿಗೆ ಹಾನಿಯಾಗಬಹುದಾದ ಅಥವಾ ಅವುಗಳಲ್ಲಿನ ನೀರು ಕಲುಷಿತಗೊಳ್ಳಬಹುದಾದ ಸ್ಥಳದಲ್ಲಿ ಕಕ್ಕಸು, ಮುಂತಾದವುಗಳನ್ನು ನಿರ್ಮಾಣ ಮಾಡುವುದು | ಒಂದು ಸಾವಿರ |
| 219 | .... | ನಗರಪಾಲಿಕೆಯ ಒಳಚರಂಡಿಗಳ ಅಥವಾ ಚರಂಡಿಗಳ ಅಥವಾ ನಗರಪಾಲಿಕೆಯ ಒಳಚರಂಡಿಗಳಿಗೆ ಸಂಪರ್ಕ ಕಲ್ಪಿಸುವ ಒಳಚರಂಡಿಗಳಲ್ಲಿನ ವಸ್ತುಗಳು ಸಲೀಸಾಗಿ ಹರಿದುಹೋಗುವುದಕ್ಕೆ ಹಾನಿಯುಂಟುಮಾಡುವುದು ಅಥವಾ ಅಡ್ಡಿ ಅಡಚಣೆ ಉಂಟುಮಾಡುವುದು | ಐದು ನೂರು |
| 224 | (2) | ನೋಟೀಸು ನೀಡದೆ ಖಾಸಗಿ ಚರಂಡಿಗಳನ್ನು ನಗರಪಾಲಿಕೆಯ ಒಳಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | ಒಂದು ನೂರು |
| 225 | .... | ಚರಂಡಿ ವ್ಯವಸ್ಥೆಯಿಲ್ಲದ ಆವರಣಗಳಿಗೆ ಚರಂಡಿ ವ್ಯವಸ್ಥೆ ಕಲ್ಪಿಸಲು ನೀಡಿದ ಸೂಚನೆಯನ್ನು ಪಾಲಿಸದಿರುವುದು | ಎರಡು ನೂರ ಐವತ್ತು |
| 233 | .... | ಲಿಖಿತ ಅನುಮತಿ ಇಲ್ಲದೆ ಒಳಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | ಐದು ನೂರು |
| 236 | (4) | ಪೈಪನ್ನು ಅಥವಾ ಚರಂಡಿಯನ್ನು ಮುಚ್ಚಲು ಅಥವಾ ತೆಗೆದುಹಾಕಲು ಅಥವಾ ಅದರ ಮಾರ್ಗವನ್ನು ಬದಲಾಯಿಸಲು ನೀಡಿದ ಸೂಚನೆಯನ್ನು ಪಾಲಿಸದಿರುವುದು | ಒಂದು ನೂರು |
| 242 | (3) | ಉಪವಿಧಿಗಳಿಗನುಗುಣವಾಗಿ ಮನೆಯ ಚರಂಡಿಗಳು ಇತ್ಯಾದಿಗಳನ್ನು ನಿರ್ವಹಿಸಲು ತಪ್ಪುವುದು | ಒಂದು ನೂರು |
| 246 | (2) | ಲೈಸೆನ್ಸ್ ಇಲ್ಲದೆ ಸಾರ್ವಜನಿಕ ಕಕ್ಕಸ್ಸನ್ನು ನಿರ್ವಹಣೆ ಮಾಡುವುದು | ಒಂದು ನೂರು |
| 246 | (3) | ಸಾರ್ವಜನಿಕ ಕಕ್ಕಸ್ಸನ್ನು ಸ್ವಚ್ಛವಲ್ಲದ ಸ್ಥಿತಿಯಲ್ಲಿ ಮತ್ತು ಸರಿಯಲ್ಲದ ರೀತಿಯಲ್ಲಿ ಇಟ್ಟಿರುವುದು | ಒಂದು ನೂರು |
| 247 | .... | ಕಕ್ಕಸಿಗೆ ವ್ಯವಸ್ಥೆ ಮಾಡುವಂತೆ ಅಥವಾ ಬೇರೊಂದು ಸ್ಥಳಕ್ಕೆ ಕಕ್ಕಸನ್ನು ಸ್ಥಳಾಂತರಿಸುವಂತೆ ನೀಡಿದ ಸೂಚನೆಯನ್ನ ಪಾಲಿಸಲು ತಪ್ಪುವುದು ಮತ್ತು ಕಕ್ಕಸುಗಳನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಒಂದು ನೂರು |
| 248 | .... | ಹೆಚ್ಚಿನ ಸಂಖ್ಯೆಯ ಜನರು ಬಳಸುವ ಆವರಣಗಳಿಗೆ ಕಕ್ಕಸುಗಳನ್ನು ವ್ಯವಸ್ಥೆಮಾಡಲು ಅಥವಾ ಅವುಗಳನ್ನು ಸ್ವಚ್ಛವಾದ ಮತ್ತು ಸರಿಯಾದ | ಎರಡು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ) |
|---|---|---|---|
| (1) | | (2) | (3) |
| | | ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | |
| 249 | .... | ಮಾರುಕಟ್ಟೆ, ದನಗಳ ಕೊಟ್ಟಿಗೆ ಅಥವಾ ಗಾಡಿಗಳ ನಿಲ್ದಾಣಗಳಲ್ಲಿ ಕಕ್ಕಸುಗಳನ್ನು ವ್ಯವಸ್ಥೆಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು ಅಥವಾ ಅವುಗಳನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಎರಡು ನೂರು |
| 263 | (1)<br>(4) | ಇಪ್ಪತ್ತನಾಲ್ಕು ಗಂಟೆಗಳಿಗಿಂತ ಹೆಚ್ಚಿಗೆ ಆವರಣಗಳಲ್ಲಿ ಕಸಕಡ್ಡಿ ಅಥವಾ ಹೊಲಸು ರಾಶಿ ಬೀಳಲು ಅವಕಾಶ ಮಾಡಿಕೊಡುವುದು | ಒಂದು ನೂರು<br>ಒಂದು ನೂರು |
| 272 | .... | ಅನುಮತಿ ಇಲ್ಲದೇ ಬೀದಿ ಪಂಕ್ತೀಕರಣದಲ್ಲಿ ಅಥವಾ ಕಟ್ಟಡದ ಸಾಲಿನಲ್ಲಿ ಕಟ್ಟಡವನ್ನು ನಿರ್ಮಿಸುವುದು | ಒಂದು ಸಾವಿರ |
| 287 | .... | ಶಾಶ್ವತ ಒತ್ತುವರಿಯನ್ನು ತೆರವುಮಾಡಲು ತಪ್ಪುವುದು | ಒಂದು ನೂರು |
| 288 | .... | ತಾತ್ಕಾಲಿಕ ಒತ್ತುವರಿಯನ್ನು ತೆರವುಮಾಡಲು ತಪ್ಪುವುದು | ಒಂದು ನೂರು |
| 291 | (1) | ಬೀದಿಯಲ್ಲಿ ಕಾನೂನುಬಾಹಿರವಾಗಿ ಗುಂಡಿ ತೋಡುವುದು ಅಥವಾ ಅಡೆತಡೆ ಉಂಟುಮಾಡುವುದು | ಒಂದು ನೂರು |
| 292 | .... | ಬೀದಿಗೆ ಅಥವಾ ಕಾಲುದಾರಿಗೆ ಅಡೆತಡೆ ಉಂಟಾಗುವ ಸಂಭವವಿರುವಂತೆ, ಲೈಸೆನ್ಸ್ ಇಲ್ಲದೆ ಕಟ್ಟಡ ಕಟ್ಟುವುದು, ಇತ್ಯಾದಿ | ಒಂದು ನೂರು |
| 297 | (1) | ಬೀದಿಗಳ ಮೂಲೆಗಳಲ್ಲಿನ ಕಟ್ಟಡಗಳನ್ನು ನೇರ್ಪಡಿಸಲು ಅಥವಾ ಎದ್ದುಕಾಣುವಂತೆ ಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು |
| 298 | .... | ಸುಲಭ ದಹ್ಯ ಸಾಮಗ್ರಿಗಳಿಂದ ಹೊರ ಛಾವಣಿಯ ನಿರ್ಮಾಣ, ಮರುನಿರ್ಮಾಣ ಅಥವಾ ಅಂಥ ಹೊರ ಛಾವಣಿಯನ್ನು ಉಳಿಸಿಕೊಳ್ಳುವುದು, ಇತ್ಯಾದಿ | ಒಂದು ನೂರು |
| 319 | .... | ಆವರಣಗಳ ಹೊರ ಗೋಡೆಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ತಪ್ಪುವುದು | ಒಂದು ನೂರು |
| 324 | .... | ಹಾದುಹೋಗುವವರಿಗೆ ಅಥವಾ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳಿಗೆ ಅಪಾಯಕಾರಿಯಾದ ಕೆರೆಯನ್ನು ಅಥವಾ ಇತರ ಸ್ಥಳವನ್ನು ದುರಸ್ತಿ, ಇತ್ಯಾದಿ ಮಾಡುವ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 325 | .... | ಬೆಂಕಿ ಆಕಸ್ಮಿಕದ ಬಗ್ಗೆ ಮುನ್ನೆಚ್ಚರಿಕೆಗಳಿಗೆ ಸಂಬಂಧಿಸಿದ ನೋಟೀಸನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 327 | .... | ಅಪಾಯಕಾರಿ ಕಲ್ಲುಗಣಿ ಕೆಲಸವನ್ನು ನಿಲ್ಲಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 328 | .... | ಕೆರೆ ಅಥವಾ ಬಾವಿಯನ್ನು ಮುಚ್ಚುವುದು, ಇತ್ಯಾದಿ ಬಗ್ಗೆ ಅಥವಾ ಅದರಲ್ಲಿನ ನೀರನ್ನು ಹೊರಹರಿಸಿ ಬರಿದು ಮಾಡುವುದು, ಇತ್ಯಾದಿ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 329 | .... | ಕುಡಿಯುವುದಕ್ಕೆ, ಸ್ನಾನ ಮಾಡುವುದಕ್ಕೆ ಅಥವಾ ಬಟ್ಟೆ ಒಗೆಯುವುದಕ್ಕೆ ಬಳಸುವ ಕೆರೆಗಳು, ಬಾವಿ, ಇತ್ಯಾದಿಗಳನ್ನು ಅಥವಾ ನೀರಿನ ಇತರ ಮೂಲಗಳನ್ನು | ಒಂದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ) |
|---|---|---|---|
| (1) | | (2) | (3) |
| | | ಸ್ವಚ್ಛಗೊಳಿಸುವುದು, ಮುಚ್ಚುವುದು, ಇತ್ಯಾದಿ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | |
| 332 | .... | ಒಕ್ಕಲಿಲ್ಲದ ಆವರಣಗಳನ್ನು ಸುತ್ತುಗಟ್ಟುಹಾಕಲು, ತೆರವುಗೊಳಿಸಲು ಅಥವಾ ಸ್ವಚ್ಛಗೊಳಿಸಲು, ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 333 | .... | ಹೊಲಸು ಸ್ಥಿತಿಯಲ್ಲಿರುವ ಅಥವಾ ಯಾವುದೇ ದಟ್ಟವಾದ ಅಥವಾ ಹಾನಿಕಾರಕವಾದ ಸಸ್ಯಗಳು ಮಿತಿಮೀರಿ ಬೆಳೆದಿರುವ ಕಟ್ಟಡವನ್ನು ಅಥವಾ ಭೂಮಿಯನ್ನು ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 334 | .... | ಕಲ್ಲಿದ್ದಲು ಬೂದಿ, ಇತ್ಯಾದಿಗಳನ್ನು ರಾಶಿ ಹಾಕುವುದು ಮುಂತಾದವುಗಳಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಉಪದ್ರವವನ್ನು ನಿವಾರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಎರಡು ನೂರು |
| 335 | .... | ಕಟ್ಟಡಕ್ಕೆ ಅಥವಾ ಭೂಮಿಗೆ ಬೇಲಿ ಹಾಕಲು ಅಥವಾ ಬೇಲಿಗಳನ್ನು ಅಥವಾ ಮರಗಳನ್ನು ಕತ್ತರಿಸಿ ಸಮಮಾಡಲು, ಸವರಲು ಅಥವಾ ಕತ್ತರಿಸಿಹಾಕಲು ಅಥವಾ ಸುತ್ತುಗಟ್ಟಿರುವ ಗೋಡೆ ಎತ್ತರವನ್ನು ತಗ್ಗಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 336 | .... | ಕಟ್ಟಡಕ್ಕೆ ಸುಣ್ಣ ಬಳಿಯಲು ಅಥವಾ ಅನ್ಯಥಾ ಅದನ್ನು ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 338 | .... | ನೈರ್ಮಲ್ಯಕರವಲ್ಲದ ಕಟ್ಟಡಗಳಿಗೆ ಸಂಬಂಧಿಸಿದಂತೆ ಕೆಲಸವನ್ನು ನಿರ್ವಹಿಸಲು ಅಥವಾ ಇತರ ಕ್ರಮಗಳನ್ನು ತೆಗೆದುಕೊಳ್ಳಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಕಲ್ಲು ಕಟ್ಟಡದ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳು ಮತ್ತು ಗುಡಿಸಲುಗಳ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳು |
| 343 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ವಸತಿಗೃಹ, ಉಪಾಹಾರಗೃಹ, ಚಹಾ ಅಂಗಡಿ ಮೊದಲಾದವುಗಳನ್ನು ಇಡುವುದು | ಒಂದು ಸಾವಿರ |
| 344 | (ಎ) | ಕಾನೂನುಬಾಹಿರವಾಗಿ ಹಂದಿಗಳನ್ನು ಸಾಕುವುದು | ಒಂದು ನೂರು |
| | (ಬಿ) | ಉಪದ್ರವಕಾರಿಯಾಗುವಂತೆ ಅಥವಾ ಅಪಾಯಕಾರಿ ಯಾಗುವಂತೆ ಪ್ರಾಣಿಗಳನ್ನು ಕಾನೂನುಬಾಹಿರವಾಗಿ ಸಾಕುವುದು | ಒಂದು ನೂರು |
| 346 | .... | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಕುದುರೆ ಲಾಯ, ದನದ ಕೊಟ್ಟಿಗೆ ಮುಂತಾದುವಕ್ಕೆ ಸ್ಥಳವನ್ನು ಬಳಸುವುದು | ಒಂದು ನೂರು |
| 347 | .... | ಅಧಿನಿಯಮಕ್ಕೆ ಅಥವಾ ಸಹಾಯಕ ಶಾಸನಕ್ಕೆ ತದ್ವಿರುದ್ಧವಾಗಿ ಕುದುರೆ ಲಾಯ, ದನದ ಕೊಟ್ಟಿಗೆ ಮುಂತಾದವುಗಳನ್ನು ನಿರ್ಮಿಸುವುದು ಅಥವಾ | ಒಂದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ) |
|---|---|---|---|
| (1) | | (2) | (3) |
| | | ನಿರ್ವಹಿಸುವುದು | |
| 349 | .... | ಸಾರ್ವಜನಿಕ ಸ್ಥಳವನ್ನು ಅಥವಾ ಸಾರ್ವಜನಿಕ ಬೀದಿಯ ಬದಿಗಳನ್ನು ಗಾಡಿ ನಿಲ್ದಾಣ ಇತ್ಯಾದಿಯಾಗಿ ಬಳಸುವುದು, ಇತ್ಯಾದಿ | ಎರಡು ನೂರು |
| 351 | .... | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಹೊಸ ಖಾಸಗಿ ಗಾಡಿ ನಿಲ್ದಾಣವನ್ನು ಪ್ರಾರಂಭಿಸುವುದು ಅಥವಾ ಇಟ್ಟುಕೊಂಡು ಬರುವುದು | ಎರಡು ನೂರು |
| 352 | .... | ಪ್ರಾಣಿಗಳ ಶವಗಳನ್ನು ತೆಗೆದುಹಾಕಲು ತಪ್ಪುವುದು | ಒಂದು ನೂರು |
| 353 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಅನುಸೂಚಿ-ಫ಼ಿರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಕ್ಕಾಗಿ ಸ್ಥಳವನ್ನು ಬಳಸುವುದು | ಐದು ನೂರು |
| 354 | (1), (2) ಮತ್ತು (3) | ಕಾರ್ಖಾನೆಯ ಕಾರ್ಯಾಗಾರ, ಕಾರ್ಯಸ್ಥಳ ಅಥವಾ ಯಂತ್ರ ಸಾಮಗ್ರಿಯನ್ನು ಕಾನೂನುಬಾಹಿರವಾಗಿ ಸ್ಥಾಪಿಸುವುದು | ಒಂದು ಸಾವಿರ |
| | (5) | ಚಿಮಣಿಗಳಿಗೆ ಸಂಬಂಧಿಸಿದ ಆದೇಶವನ್ನು ಉಲ್ಲಂಘಿಸುವುದು | ಐದು ನೂರು |
| 355 | (1) | ಉಪದ್ರವವನ್ನು ನಿವಾರಿಸುವುದಕ್ಕೆ ಸಂಬಂಧಿಸಿದ ಆದೇಶವನ್ನು ಉಲ್ಲಂಘಿಸುವುದು | ಒಂದು ಸಾವಿರ |
| 355 | (2) | ಕಾರ್ಖಾನೆ, ಇತ್ಯಾದಿಗಳ ಕಾರ್ಯನಿರ್ವಹಣೆಯನ್ನು ಅಥವಾ ವಿಶಿಷ್ಟ ಬಗೆಯ ಇಂಧನದ ಬಳಕೆಯನ್ನು ನಿಷೇಧಿಸುವ ಆದೇಶವನ್ನು ಉಲ್ಲಂಘಿಸುವುದು | ಎರಡು ಸಾವಿರ |
| 357 | .... | ಕಾರ್ಖಾನೆ, ಇತ್ಯಾದಿಗಳನ್ನು ಸುಸ್ಥಿತಿಯಲ್ಲಿಡುವುದಕ್ಕಾಗಿ, ಅತಿಯಾಗಿ ದಟ್ಟೈಸುವುದು, ಇತ್ಯಾದಿಯನ್ನು ಕಡಿಮೆ ಮಾಡುವುದಕ್ಕಾಗಿ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ಸಾವಿರ |
| 358 | .... | ಉಪದ್ರವ ಅಥವಾ ಪ್ರಾಣಕ್ಕೆ ಅಪಾಯ ಮುಂತಾದವನ್ನು ನಿವಾರಿಸಲು ನೀಡಿದ ಆದೇಶವನ್ನು ಉಲ್ಲಂಘಿಸುವುದು | ಒಂದು ಸಾವಿರ |
| 365 | .... | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಸ್ಥಳವನ್ನು ಕಸಾಯಿಖಾನೆಯಾಗಿ ಬಳಸುವುದು | ಐದು ನೂರು |
| 371 | .... | ಲೈಸೆನ್ಸ್ ಪಡೆಯದೆ ಅಥವಾ ಅನುಮತಿಗೆ ತದ್ವಿರುದ್ಧವಾಗಿ ಖಾಸಗಿ ಮಾರುಕಟ್ಟೆಯನ್ನು ಸ್ಥಾಪಿಸುವುದು | ಒಂದು ಸಾವಿರ |
| 372 | .... | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಖಾಸಗಿ ಮಾರುಕಟ್ಟೆಯನ್ನು ತೆರೆದಿಡುವುದು | ಒಂದು ಸಾವಿರ |
| 378 | .... | ಮಾರುಕಟ್ಟೆ ವಿನಿಯಮಗಳನ್ನು ಉಲ್ಲಂಘಿಸುವುದು | ಒಂದು ನೂರು |
| 379 | .... | ಕುಷ್ಠರೋಗದಿಂದ ಅಥವಾ ಇತರ ಸೋಂಕು ಅಥವಾ ಅಂಟುರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ಹೊರಹಾಕಲು ಮಾರುಕಟ್ಟೆಗಳ ಪ್ರಭಾರದಲ್ಲಿರುವ ವ್ಯಕ್ತಿಗಳು ತಪ್ಪುವುದು | ಐದು ನೂರು |
| 381 | .... | ಲೈಸೆನ್ಸ್ ಇಲ್ಲದೆ ಕಟುಕನ, ಮೀನು ಮಾರುವವನ ಅಥವಾ ಕೋಳಿ ಮಾರುವವನ ಕಸುಬನ್ನು | ಒಂದು ನೂರು |

| ಪ್ರಕರಣ | ಉಪ-ಪ್ರಕರಣ | ವಿಷಯ | ದಂಡ (ರೂಪಾಯಿಗಳಲ್ಲಿ) |
|---|---|---|---|
| (1) | | (2) | (3) |
| | | ನಡೆಸುವುದು, ಇತ್ಯಾದಿ | |
| 392 | .... | ಲೈಸೆನ್ಸ್ ಇಲ್ಲದೆ ಮೃತರ ವಿಲೆಗಾಗಿ ಸ್ಥಳವನ್ನು ತೆರೆಯುವುದು, ಇತ್ಯಾದಿ | ಒಂದು ಸಾವಿರ |
| 406 | .... | ಕಟ್ಟಡವನ್ನು ಅಥವಾ ವಸ್ತುವನ್ನು ಸ್ವಚ್ಛಗೊಳಿಸಲು ಅಥವಾ ಅದರ ಸೋಂಕು ನಿವಾರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು |
| 410 | .... | ಸೋಂಕು ತಗುಲಿದ ವ್ಯಕ್ತಿಯು ವೃತ್ತಿಯನ್ನು ನಡೆಸುವುದು | ಐದು ನೂರು |
| 414 | .... | ಸಾರ್ವಜನಿಕ ಮನೋರಂಜನಾ ಸ್ಥಳವನ್ನು ಮುಚ್ಚಲು ತಪ್ಪುವುದು | ಒಂದು ಸಾವಿರ |
| 417 | .... | ನಿಷೇಧಿಸಿದ ತರುವಾಯವು ನೀರನ್ನು ಬಳಸುವುದು | ಐದು ನೂರು |

**12. 1963ರ ಕರ್ನಾಟಕ ಅಧಿನಿಯಮ 11ರ ತಿದ್ದುಪಡಿ.-** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ,-

(1) 73ನೇ ಪ್ರಕರಣದಲ್ಲಿ,-

(ಎ) -"ಅವನು ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಅವನು ಅಪರಾಧ ನಿರ್ಣಯವಾದ ಮೇಲೆ, ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ದಂಡಿತನಾಗತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಖಂಡ (ಇ) ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್) ಸ್ಥಳೀಯ ಸಂಸ್ಥೆಯಿಂದ ನೋಂದಾಯಿತನಾದ ಮತ್ತು ಅಧಿನಿಯಮದ 15 ಮತ್ತು 17ನೇ ಪ್ರಕರಣಗಳದಡಿಯಲ್ಲಿ ಕಟ್ಟಡ ಅಥವಾ ಬಡಾವಣೆ ಯೋಜನೆಗಳ ರೂಪರೇಷೆಯನ್ನು ತಯಾರಿಸಲು, ಪ್ರಮಾಣೀಕರಿಸಲು, ಸಲ್ಲಿಸಲು, ಅಥವಾ ಅಭಿವೃದ್ಧಿಗೊಳಿಸಲು ಜವಾಬ್ದಾರರಾಗಿರುವ ಪ್ರತಿಯೊಬ್ಬ ಇಂಜಿನಿಯರ್ ಅಥವಾ ವಾಸ್ತುಶಿಲ್ಪಿಯು, ಅಧಿನಿಯಮದ ಉಪಬಂಧಗಳ ಮತ್ತು ಮಂಜೂರಾದ ನಕ್ಷೆಯ ಅನುಸಾರ ಅಭಿವೃದ್ಧಿ ಅಥವಾ ನಿರ್ಮಾಣವನ್ನು ಕಟ್ಟುನಿಟ್ಟಾಗಿ ಕಾರ್ಯಗತಗೊಳಿಸುವ ಬಾಧ್ಯತೆಯನ್ನು ಸಂಬಂಧಪಟ್ಟ ಮಾಲೀಕ ಮತ್ತು ಡೆವಲಪರುಗಳಿಗೆ ತಿಳಿಸತಕ್ಕದ್ದು. ಯಾರೇ ಮಾಲೀಕ ಅಥವಾ ಡೆವಲಪರ್‌ಗಳು, ಅಂಥ ಅನುಮೋದನೆಯನ್ನು ಪಡೆದುಕೊಂಡ ತರುವಾಯ, ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ಅಭಿವೃದ್ಧಿ ಅಥವಾ ನಿರ್ಮಾಣವನ್ನು ಕೈಗೊಂಡರೆ, ಸಂಬಂಧಪಟ್ಟ ನೋಂದಾಯಿತ ಇಂಜಿನಿಯರ್ ಅಥವಾ ವಾಸ್ತುಶಿಲ್ಪಿಯು ಎರಡು ಲಕ್ಷ ರೂಪಾಯಿಗಳ ದಂಡಕ್ಕೆ ಗುರಿಯಾಗತಕ್ಕದ್ದು. ಪುನರಾವರ್ತಿತ ಉಲ್ಲಂಘನೆಗಳ ಸಂದರ್ಭದಲ್ಲಿ, ಅಂಥ ಇಂಜಿನಿಯರ್ ಅಥವಾ ವಾಸ್ತುಶಿಲ್ಪಿಗಳ ನೋಂದಣಿ ಅಥವಾ ಲೈಸೆನ್ಸನ್ನು ರದ್ದುಗೊಳಿಸಲು ಸೂಕ್ತ ಕ್ರಮಗಳನ್ನು ಪ್ರಾರಂಭಿಸತಕ್ಕದ್ದು."

(2) 76ಡಿ ಪ್ರಕರಣದಲ್ಲಿ "ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಎರಡು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ

ಕಾರಾವಾಸದಿಂದ" ಎಂಬ ಪದಗಳಿಗೆ ಬದಲಾಗಿ "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**13. 2003ರ ಕರ್ನಾಟಕ ಅಧಿನಿಯಮ 45ರ ತಿದ್ದುಪಡಿ.-** ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 45)ರ ಪ್ರಕರಣ 19ರ ಉಪ-ಪ್ರಕರಣ (2)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2)ಯಾವುದೇ ಉತ್ಪಾದನಾ ಕೈಗಾರಿಕೆ ಅಥವಾ ಉದ್ಯಮವು ಸ್ವೀಕೃತಿ ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸುವಾಗ ನೋಡಲ್ ಏಜೆನ್ಸಿಗೆ ನೀಡಿದ ಮುಚ್ಚಳಿಕೆ ಅಥವಾ ಸ್ವಯಂ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪಾಲಿಸುವಲ್ಲಿ ವಿಫಲವಾದರೆ ಅಥವಾ ಕೈಗಾರಿಕಾ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅನ್ವಯಿಸಬಹುದಾದ ಅಧಿನಿಯಮ ಅಥವಾ ನಿಯಮಗಳಲ್ಲಿನ ಯಾವುದೇ ಖಂಡವನ್ನು ಉಲ್ಲಂಘಿಸಿದರೆ, ಅಪರಾಧ ನಿರ್ಣೀತವಾದ ಮೇಲೆ ಸೇವಾ ಉಲ್ಲಂಘನೆ, ಉಲ್ಲಂಘನೆಯ ತೀವ್ರತೆ ಮತ್ತು ಕೈಗಾರಿಕೆಗಳ ಪ್ರವರ್ಗದ ಆಧಾರದ ಮೇಲೆ ಮೊದಲ ಅಪರಾಧಕ್ಕಾಗಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದೊಂದಿಗೆ ಮತ್ತು ಎರಡನೇ ಹಾಗೂ ಮುಂದುವರಿದ ಅಪರಾಧಕ್ಕಾಗಿ ನಾಲ್ಕು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದೊಂದಿಗೆ ದಂಡಿತವಾಗತಕ್ಕದ್ದು ಇದರ ಜೊತೆಗೆ, ಸಂಬಂಧಿತ ಇಲಾಖೆಗಳು ಸಂಬಂಧಪಟ್ಟ ಅಸ್ತಿತ್ವದಲ್ಲಿರುವ ಅಧಿನಿಯಮಗಳ ಅಡಿಯಲ್ಲಿ ದಂಡನಾಕ್ರಮವನ್ನು ಪ್ರಾರಂಭಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಅಪರಾಧಗಳನ್ನು ನಿರಪರಾಧೀಕರಿಸಲು ಮತ್ತು ತರ್ಕಬದ್ಧಗೊಳಿಸುವುದಕ್ಕಾಗಿ ಹಾಗೂ ಬದುಕುವುದು ಮತ್ತು ವ್ಯವಹಾರ ನಡೆಸುವುದನ್ನು ಸರಾಗಗೊಳಿಸುವುದಕ್ಕಾಗಿ ನಂಬಿಕೆ-ಆಧಾರಿತ ಆಡಳಿತವನ್ನು ಮತ್ತಷ್ಟು ವೃದ್ಧಿಸಲು ಈ ಮುಂದಿನ ಅಧಿನಿಯಮಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ :-

1. ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 36);

2. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34);

3. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27);

4. ಕರ್ನಾಟಕ ಉಗ್ರಾಣಗಳ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 11);

5. ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ 21);

6. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18);

7. ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14);

8. ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ಅಧಿನಿಯಮ, 2012 (2013ರ ಕರ್ನಾಟಕ ಅಧಿನಿಯಮ 9);

9. ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22);

10. ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14);

11. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11); ಮತ್ತು

12. ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 45)

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ-6** | (i) ಖಂಡ 6ರ ಉಪಖಂಡ (1)ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 8ನೇ ಪ್ರಕರಣದ (5)ನೇ ಉಪಪ್ರಕರಣವು, ಮೊದಲ, ಎರಡನೆಯ ಮತ್ತು ಮೂರನೆಯ ಉಲ್ಲಂಘನೆಗಾಗಿ ಆಡಳಿತಾತ್ಮಕ ನಿರ್ಬಂಧಗಳು ಮತ್ತು ದಂಡನೆಯ ಕಾರ್ಯವಿಧಾನವನ್ನು ಹಾಗೂ ಅಪರಾಧಗಳ ಪುನರಾವರ್ತನೆ ಮತ್ತು ಮೇಲ್ಮನವಿ ಕಾರ್ಯವ್ಯವಸ್ಥೆಯನ್ನು ನಿರ್ಧರಿಸುವುದಕ್ಕಾಗಿ ಮಾನದಂಡಗಳ ಕಾರ್ಯವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) ಖಂಡ 6ರ ಉಪಖಂಡ (2)ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 16ನೇ ಪ್ರಕರಣದ (9)ನೇ ಉಪಪ್ರಕರಣವು, ಮೊದಲ, ಎರಡನೆಯ ಮತ್ತು ಮೂರನೆಯ ಉಲ್ಲಂಘನೆಗಾಗಿ ಆಡಳಿತಾತ್ಮಕ ನಿರ್ಬಂಧಗಳು ಮತ್ತು ದಂಡನೆಯ ಕಾರ್ಯವಿಧಾನವನ್ನು ಹಾಗೂ ಅಪರಾಧಗಳ ಪುನರಾವರ್ತನೆ ಮತ್ತು ಮೇಲ್ಮನವಿ ಕಾರ್ಯವ್ಯವಸ್ಥೆಯನ್ನು ನಿರ್ಧರಿಸುವುದಕ್ಕಾಗಿ ಮಾನದಂಡಗಳ ಕಾರ್ಯವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(iii) ಖಂಡ 6ರ ಉಪಖಂಡ (4)ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 23ನೇ ಪ್ರಕರಣದ (2) ಮತ್ತು (6)ನೇ ಉಪಪ್ರಕರಣಗಳು, ಮೊದಲ, ಎರಡನೆಯ ಮತ್ತು ಮೂರನೆಯ ಉಲ್ಲಂಘನೆಗಾಗಿ ಆಡಳಿತಾತ್ಮಕ ನಿರ್ಬಂಧಗಳು ಮತ್ತು ದಂಡನೆಯ ಕಾರ್ಯವಿಧಾನವನ್ನು ಹಾಗೂ ಅಪರಾಧಗಳ ಪುನರಾವರ್ತನೆ ಮತ್ತು ಮೇಲ್ಮನವಿ ಕಾರ್ಯವ್ಯವಸ್ಥೆಯನ್ನು ನಿರ್ಧರಿಸುವುದಕ್ಕಾಗಿ ಮಾನದಂಡಗಳ ಕಾರ್ಯವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತವೆ.<br>(iv) ಖಂಡ 6ರ ಉಪಖಂಡ (5)ರ ಮೂಲಕ ಅನುಕ್ರಮವಾಗಿ ಪ್ರತಿಯೋಜಿಸಲು ಮತ್ತು ಸೇರಿಸಲು ಉದ್ದೇಶಿಸಿರುವ 24ನೇ ಪ್ರಕರಣದ (8) ಮತ್ತು (9)ನೇ ಉಪಪ್ರಕರಣಗಳು, ದಂಡವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತವೆ.<br>(v) ಖಂಡ 6ರ ಉಪಖಂಡ (6)ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 25ನೇ ಪ್ರಕರಣದ (1)ನೇ ಉಪಪ್ರಕರಣವು, ಮೊದಲ, ಎರಡನೆಯ ಮತ್ತು ಮೂರನೆಯ ಉಲ್ಲಂಘನೆಗಾಗಿ ಆಡಳಿತಾತ್ಮಕ ನಿರ್ಬಂಧಗಳು ಮತ್ತು ದಂಡನೆಯ ಕಾರ್ಯವಿಧಾನವನ್ನು ಹಾಗೂ ಅಪರಾಧಗಳ ಪುನರಾವರ್ತನೆ ಮತ್ತು ಮೇಲ್ಮನವಿ ಕಾರ್ಯವ್ಯವಸ್ಥೆಯನ್ನು ನಿರ್ಧರಿಸುವುದಕ್ಕಾಗಿ ಮಾನದಂಡಗಳ ಕಾರ್ಯವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(vi) ಖಂಡ 6ರ ಉಪಖಂಡ (7)ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 26ನೇ ಪ್ರಕರಣದ (2)ನೇ ಉಪಪ್ರಕರಣವು, ಮೊದಲ, ಎರಡನೆಯ ಮತ್ತು ಮೂರನೆಯ ಉಲ್ಲಂಘನೆಗಾಗಿ ಆಡಳಿತಾತ್ಮಕ ನಿರ್ಬಂಧಗಳು ಮತ್ತು ದಂಡನೆಯ ಕಾರ್ಯವಿಧಾನವನ್ನು ಹಾಗೂ ಅಪರಾಧಗಳ ಪುನರಾವರ್ತನೆ ಮತ್ತು ಮೇಲ್ಮನವಿ ಕಾರ್ಯವ್ಯವಸ್ಥೆಯನ್ನು ನಿರ್ಧರಿಸುವುದಕ್ಕಾಗಿ ಮಾನದಂಡಗಳ ಕಾರ್ಯವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಎಂ.ಬಿ. ಪಾಟೀಲ್**
ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು,
ಮೂಲಭೂತ ಸೌಕರ್ಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ
## ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 36)ರ ಉದ್ಧೃತ ಭಾಗ

**XXX XXX XXX**

**62.ಕೆಲವು ಅಪರಾಧಗಳಿಗಾಗಿ ದಂಡನೆ.-** ಯಾರೇ ಆಗಲಿ,-

(ಎ) ಈ ಕೆಳಕಂಡ ಕೋಷ್ಟಕದ ಮೊದಲನೇ ಅಂಕಣದಲ್ಲಿ ನಮೂದುಮಾಡಿದ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಸದರಿ ಯಾವುದೇ ಉಪಬಂಧದ ಮೇರೆಗೆ ಅವನಿಗೆ ಕಾನೂನು ಸಮ್ಮತವಾಗಿ ಕೊಟ್ಟ ಯಾವುದೇ ಆದೇಶ ಅಥವಾ ನಿರ್ದೇಶನವನ್ನು ಅಥವಾ ಅವನಿಗೆ ಕಾನೂನು ಸಮ್ಮತವಾಗಿ ಮಾಡಿಕೊಂಡ ಯಾವುದೇ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪಿದರೆ ಅವನು,- ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಅಥವಾ

(i)ಸದರಿ ಕೋಷ್ಟಕದ ಮೂರನೇ ಅಂಕಣದಲ್ಲಿ ಅದರ ಬಗ್ಗೆ ನಿರ್ದಿಷ್ಟಪಡಿಸಿದ ಮೊಬಲಗಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ಮತ್ತು

(ii)ಮುಂದುವರಿಯುತ್ತಿರುವ ಉಲ್ಲಂಘನೆ ಅಥವಾ ತಪ್ಪುವಿಕೆಯ ಸಂದರ್ಭದಲ್ಲಿ ಅಮಥ ಮೊದಲನೇ ಉಲ್ಲಂಘನೆ ಅಥವಾ ತಪ್ಪುವಿಕೆಗಾಗಿ ಅಪರಾಧವು ನಿರ್ಣಯವಾದ ತರುವಾಯ, ಅಂಥ ಉಲ್ಲಂಘನೆ ಅಥವಾ ತಪ್ಪುವಿಕೆಯು ಮುಂದುವರಿಯುತ್ತಿರುವಂಥ ಕಾಲದಲ್ಲಿ ಪ್ರತಿಯೊಂದು ದಿವಸಕ್ಕಾಗಿ ಆ ಕೋಷ್ಟಕದ ನಾಲ್ಕನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**ಕೋಷ್ಟಕ**

| ಅಧಿನಿಯಮದ ಉಪಬಂಧಗಳು | ವಿಷಯ | ವಿಧಿಸಬಹುದಾದಂಥ ಗರಿಷ್ಟ ಜುಲ್ಮಾನೆ | ವಿಧಿಸಬಹುದಾದಂಥ ನಿತ್ಯದ ಜುಲ್ಮಾನೆ |
|---|---|---|---|
| 1 | 2 | 3 | 4 |
| ಪ್ರಕರಣ 28 | ನೀರು ಸರಬರಾಜಿಗೆ ಸಂಬಂಧಿಸಿದ ಆವರಣದ ಮೇಲೆ ಅತಿಕ್ರಮಣ ಮಾಡುವುದು | 1000 | |
| ಪ್ರಕರಣ 30 | ವಿನಿಮಯಗಳಿಗೆ ಅನುಗುಣವಾಗಿ ಮನೆ ಜೋಡಣೆಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು ಬರುವುದಕ್ಕೆ ತಪ್ಪುವುದು | 1000 | |
| ಪ್ರಕರಣ 32 ಉಪಪ್ರಕರಣ (2) | ಸರಿಯಾದ ನೀರು ಸರಬರಾಜು ಇಲ್ಲದ ಮನೆಯನ್ನು ಅಧಿಭೋಗಕ್ಕೆ ತೆಗೆದುಕೊಳ್ಳುವುದು ಅಥವಾ ಅಧಿಭೋಗಕ್ಕೆ ಅವಕಾಶ ಮಾಡಿಕೊಡುವುದು | 1000 | |
| ಪ್ರಕರಣ 32 ಉಪಪ್ರಕರಣ (3) | ಮನೆ ಜೋಡಣೆಗಳನ್ನು ಮಾಡುವ ಬಗ್ಗೆ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪುವುದು | 1000 | 100 |
| ಪ್ರಕರಣ 34 | ಗೃಹ ಉದ್ದೇಶಗಳಿಗಾಗಿ ಸರಬರಾಜು ಮಾಡಿದ ನೀರನ್ನು ಗೃಹೇತರ ಉದ್ದೇಶಗಳಿಗಾಗಿ ಉಪಯೋಗಿಸುವುದು | 5000 | 100 |
| ಪ್ರಕರಣ 49 | ನೀರಿನ ಪೋಲು ಅಥವಾ ಅದರ ದುರುಪಯೋಗ | 1000 | |
| ಪ್ರಕರಣ 50 | ಪ್ರವೇಶಿಸಲು ಅವಕಾಶ ನೀಡುವುದು ಇತ್ಯಾದಿಗಳನ್ನು ನಿರಾಕರಿಸುವುದು | 1000 | |

| | | | |
|---|---|---|---|
| ಪ್ರಕರಣ 52 ಉಪಪ್ರಕರಣ (1) | ನೀರಿನ ಕೊಳವೆಗಳು ಮುಂತಾದವುಗಳನ್ನು ಅವುಗಳಿಗೆ ಹಾನಿಯಾಗಬಹುದಾದ ಅಥವಾ ಅದರಲ್ಲಿ ನೀರು ಮಲಿನವಾಗಬಹುದಾದ ಸ್ಥಳದಲ್ಲಿ ಹಾಕುವುದು | 5000 | 100 |
| ಪ್ರಕರಣ 52 ಉಪಪ್ರಕರಣ (2) | ಕೊಳವೆಗಳು, ಹಾನಿಯಾಗಬಹುದಾದ ಅಥವಾ ಅದರಲ್ಲಿನ ನೀರು ಮಲಿನಗೊಳ್ಳಬಹುದಾದ ಸ್ಥಳದಲ್ಲಿ ಶೌಚಾಲಯಗಳು ಇತ್ಯಾದಿಗಳನ್ನು ನಿರ್ಮಿಸುವುದು | 5000 | 100 |
| ಪ್ರಕರಣ 59 ಉಪಪ್ರಕರಣ (1) | ಲೈಸೆನ್ಸ್ ಪಡೆದ ಕೊಳಾಯಿಗಾರನು ಹೊರತುಪಡಿಸಿ ಯಾವೊಬ್ಬ ಇತರ ವ್ಯಕ್ತಿಯಿಂದ ಕಾಮಗಾರಿಯ ನಿರ್ವಹಣೆ | 2000 | |
| ಪ್ರಕರಣ 59 ಉಪಪ್ರಕರಣ (2) | ನಿಯೋಜಿಸಿಕೊಂಡ ಲೈಸೆನ್ಸುಗಳು | 1000 | |
| ಪ್ರಕರಣ 59 ಉಪಪ್ರಕರಣ (6) | ಲೈಸೆನ್ಸ್ ಪಡೆದ ಕೊಳಾಯಿಗಾರನು ನಿಯಮಿಸಿದ ಚಾರ್ಜುಗಳಿಗಿಂತ ಹೆಚ್ಚಿನದನ್ನು ತಗಾದೆ ಮಾಡತಕ್ಕದ್ದಲ್ಲ, | 1000 | |
| ಪ್ರಕರಣ 59 ಉಪಪ್ರಕರಣ (8) | ಲೈಸೆನ್ಸ್ ಪಡೆದ ಕೊಳಾಯಿಗಾರನು ವಿನಿಮಯಗಳನ್ನು ಉಲ್ಲಂಘಿಸಬಾರದು ಅಥವಾ ಅಜಾಗರೂಕತೆಯಿಂದ ಅಥವಾ ನಿರ್ಲಕ್ಷ್ಯದಿಂದ ಕಾಮಗಾರಿಯನ್ನು ನಿರ್ವಹಿಸಬಾರದು | 1000 | |
| ಪ್ರಕರಣ 60 ಉಪಪ್ರಕರಣ ಎ,ಬಿ,ಡಿ ಮತ್ತು ಇ | ನೀರು ಸರಬರಾಜು ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಉದ್ದೇಶಪೂರ್ವಕ ಅಥವಾ ನಿರ್ಲಕ್ಷ್ಯತೆಯ ಕಾರ್ಯನಿರ್ವಹಣೆಯ ಬಗ್ಗೆ ನಿಷೇಧ | 5000 | |
| ಪ್ರಕರಣ 60 | ನೀರು ಸರಬರಾಜು ಗೃಹಕ್ಕೆ ಸಂಬಂಧಪಟ್ಟಂತೆ ಉದ್ದೇಶಪೂರ್ವಕ ಅಥವಾ ನಿರ್ಲಕ್ಷ್ಯ ಕಾರ್ಯಗಳ ಬಗ್ಗೆ ನಿಷೇಧ | 100 | |

**XXX XXX XXX**

**85.ಕೆಲವು ಅಪರಾಧಗಳಿಗಾಗಿ ದಂಡನೆ.-** ಯಾರೇ ಆಗಲಿ,-

(ಎ) ಈ ಕೆಳಕಂಡ ಕೋಷ್ಟಕದ ಮೊದಲನೇ ಅಂಕಣದಲ್ಲಿ ನಮೂದಿಸಿರುವ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಸದರಿ ಯಾವುದೇ ಉಪಬಂಧದ ಮೇರೆಗೆ ಅವನಿಗೆ ಕೊಟ್ಟ ಕಾನೂನುಬಧ್ಧ ಯಾವುದೇ ಆದೇಶ ಅಥವಾ ನಿರ್ದೇಶನ ಅಥವಾ ಅವನಿಗೆ ಕಾನೂನುಬಧ್ಧವಾಗಿ ಮಾಡಿಕೊಂಡ ಯಾವುದೇ ಕಡ್ಡಾಯ ಕೋರಿಕೆಯನ್ನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಅಥವಾ

(i)ಸದರಿ ಕೋಷ್ಟಕದ ಮೂರನೇ ಅಂಕಣದಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಿದ ಮೊಬಲಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅಥವಾ ಅವೆರಡರಿಂದಲೂ

(ii) ಮುಂದುವರಿಯುತ್ತಿರುವ ಉಲ್ಲಂಘನೆ ಅಥವಾ ತಪ್ಪುವಿಕೆಯ ಸಂಧರ್ಭದಲ್ಲಿ, ಅಂಥ ಮೊದಲನೇ ಉಲ್ಲಂಘನೆ ಅಥವಾ ತಪ್ಪುವಿಕೆಗಾಗಿನ ಅಪರಾಧವು ನಿರ್ಣಯವಾದ ತರುವಾಯ ಅಂಥ ಉಲ್ಲಂಘನೆ ಅಥವಾ ತಪ್ಪುವಿಕೆಯು ಮುಂದುವರೆಯುತ್ತಿರುವಂಥ ಕಾಲದಲ್ಲಿ ಪ್ರತಿಯೊಂದು ದಿವಸಕ್ಕಾಗಿ ಆ ಕೋಷ್ಟಕದ ನಾಲ್ಕನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗಿಗೆ ವಿಸ್ತರಿಸಬಹುದಾದಂತ ಹೆಚ್ಚಿನ ಜುಲ್ಮಾನೆಯಿಂದ

-ದಂಡನೀಯನಾಗತಕ್ಕದ್ದು,

**ಕೋಷ್ಟಕ**

| **ಅಧಿನಿಯಮದ ಉಪಬಂಧಗಳು** | **ವಿಷಯ** | **ವಿಧಿಸಬಹುದಾದಂಥ ಗರಿಷ್ಟ ಜುಲ್ಮಾನೆ** | **ವಿಧಿಸಬಹುದಾದಂಥ ದೈನಂದಿನ ಜುಲ್ಮಾನೆ** |
|---|---|---|---|
| 1 | 2 | 3 | 4 |
| ಪ್ರಕರಣ 65 | ಮಂಡಳಿಯ ಗ್ರಾಮಸಾರ ಚರಂಡಿಗಳು ಅಥವಾ ಮಂಡಳಿಯ ಗ್ರಾಮಸಾರ ಚರಂಡಿಗಳೊಂದಿಗೆ ಸಂಪರ್ಕವನ್ನು ಹೊಂದಿರುವ ಚರಂಡಿಗಳಲ್ಲಿ ನೀರು ನಿರಾತಂಕವಾಗಿ ಹರಿದು ಹೋಗುವುದಕ್ಕೆ ಹಾನಿ ಅಥವಾ ಅಡ್ಡಿಯನ್ನುಂಟು ಮಾಡುವುದು | 5000 | 500 |
| ಪ್ರಕರಣ 66 ಉಪ ಪ್ರಕರಣ (2) | ನೋಟೀಸು ಇಲ್ಲದೆ ಮಂಡಳಿಯ ಗ್ರಾಮಸಾರ ಚರಂಡಿಗಳೊಂದಿಗೆ ಖಾಸಗಿ ಚರಂಡಿಯನ್ನು ಕೂಡಿಸತಕ್ಕದ್ದಲ್ಲ | 1000 | 100 |
| ಪ್ರಕರಣ 67 | ಚರಂಡಿ ವ್ಯವಸ್ಥೆ ಇಲ್ಲದ ಆವರಣಕ್ಕೆ ಚರಂಡಿ ವ್ಯವಸ್ಥೆ ಮಾಡಲು ಕಡ್ಡಾಯ ಕೋರಿಕೆಯನ್ನು ಪಾಲಿಸದಿರುವುದು | 2000 | 200 |
| ಪ್ರಕರಣ 68 | ಚರಂಡಿಗಳಿಲ್ಲದೆ ಹೊಸ ಆವರಣದ ನಿರ್ಮಾಣ | 5000 | |
| ಪ್ರಕರಣ 69 | ಆವರಣಗಳ ಯಾವುದೇ ಗುಂಪು ಅಥವಾ ಬ್ಲಾಕುಗಳಿಗಾಗಿ ಚರಂಡಿ ವ್ಯವಸ್ಥೆಯ ಕಾಮಗಾರಿಗಳ ನಿರ್ವಹಣೆಗಾಗಿ ಮಾಡಿದ ಕೋರಿಕೆಯನ್ನು ಪಾಲಿಸದಿರುವುದು | 5000 | |
| ಪ್ರಕರಣ 70 | ಕೆಲವು ಸಂಧರ್ಭಗಳಲ್ಲಿ ಖಾಸಗಿ ಚರಂಡಿಗಳನ್ನು ಮುಚ್ಚಲು ಅಥವಾ ಅವುಗಳ ಉಪಯೋಗವನ್ನು ಸೀಮಿತಗೊಳಿಸುವ ನಿರ್ದೇಶನವನ್ನು ಪಾಲಿಸದಿರುವುದು | 5000 | |
| ಪ್ರಕರಣ 71 | ಚರಂಡಿಯ ಒಡೆಯನಲ್ಲದ ಇತರ ವ್ಯಕ್ತಿಯು ಅದನ್ನು ಉಪಯೋಗಿಸುವುದರ ಬಗ್ಗೆ ನೈರ್ಮಲ್ಯ ಇಂಜಿನಿಯರನ ಆದೇಶಗಳನ್ನು ಪಾಲಿಸದಿರುವುದು | 5000 | |
| ಪ್ರಕರಣ 72 | ಗ್ರಾಮಸಾರ ಚರಂಡಿ ವ್ಯವಸ್ಥೆ ಮತ್ತು ಮಳೆಯ ನೀರು ಚರಂಡಿಗಳನ್ನು ಪ್ರತ್ಯೇಕವಾಗಿಡುವುದಕ್ಕಾಗಿ ಮಾಡಿದ ಕೋರಿಕೆಯನ್ನು ಪಾಲಿಸದಿರುವುದು | 5000 | |
| ಪ್ರಕರಣ 73 | ಅಂಗಳ ಇತ್ಯಾದಿ ಗಳನ್ನು ನೆಲಗಟ್ಟು ಮಾಡುವುದಕ್ಕಾಗಿ ಮಾಡಿದ ಕೋರಿಕೆಯನ್ನು ಪಾಲಿಸದಿರುವುದು | 1000 | |

| | | | |
|---|---|---|---|
| ಪ್ರಕರಣ 75 | ಲಿಖಿತ ಅನುಮತಿ ಇಲ್ಲದೆ ಮಂಡಳಿಯಗ್ರಾಮಸಾರ ಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | 5000 | 500 |
| ಪ್ರಕರಣ 78 ಉಪ ಪ್ರಕರಣ (4) | ಕೊಳವೆ ಅಥವಾ ಚರಂಡಿಯನ್ನು ಮುಚ್ಚಲು, ತೆಗೆದುಹಾಕಲು ಅಥವಾ ಮಾರ್ಗಪಲ್ಲಟ ಮಾಡುವ ಬಗ್ಗೆ ಮಾಡುವ ಬಗ್ಗೆ ಮಾಡಿದ ಕೋರಿಕೆಯನ್ನು ಪಾಲಿಸದಿರುವುದು | 5000 | 500 |
| ಪ್ರಕರಣ 82 ಉಪ ಪ್ರಕರಣ (1) | ಲೈಸೆನ್ಸ್ ಪಡೆದ ಕೊಳಾಯಿಗಾರನನ್ನು ಹೊರತುಪಡಿಸಿ, ಇತರ ವ್ಯಕ್ತಿಯು ಕಾಮಗಾರಿಯನ್ನು ನಿರ್ವಹಿಸುವುದು | 5000 | |
| ಪ್ರಕರಣ 82 ಉಪ ಪ್ರಕರಣ (2) ಪ್ರಕರಣ 59 (2) ಇದರೊಂದಿಗೆ ಓದಿಕೊಂಡು | ನಿಯೋಜಿಸಿಕೊಂಡ ಲೈಸೆನ್ಸ್ ಪಡೆದ ಕೊಳಾಯಿಗಾರನ ಹೆಸರನ್ನು ಒದಗಿಸಲು ಅಗತ್ಯಪಡಿಸಿದಾಗ ತಪ್ಪುವುದು | 5000 | |
| ಪ್ರಕರಣ 82 ಉಪ ಪ್ರಕರಣ (6) ಪ್ರಕರಣ | ಲೈಸೆನ್ಸ್ ಪಡೆದ ಕೊಳಾಯಿಗಾರರು ನಿಯಮಿಸಿದ ಚಾರ್ಜುಗಳಿಗಿಂತ ಹೆಚ್ಚಿಗೆ ತಗಾದೆ ಮಾಡಕೂಡದು | 5000 | |
| 59 (2) ಇದರೊಂದಿಗೆ ಓದಿಕೊಂಡು | | | |
| ಪ್ರಕರಣ 82 ಉಪ ಪ್ರಕರಣ (2) (8)ಪ್ರಕರಣ 59 (2) ಇದರೊಂದಿಗೆ ಓದಿಕೊಂಡು | ಲೈಸೆನ್ಸ್ ಪಡೆದ ಕೊಳಾಯಿಗಾರರು ವಿನಿಯಮಗಳನ್ನು ಉಲ್ಲಂಘಿಸಕೂಡದು ಅಥವಾ ಕಾಮಗಾರಿಯನ್ನು ಅಜಾಗರೂಕತೆ ಅಥವಾ ನಿರ್ಲಕ್ಷ್ಯತೆಯಿಂದ ನಿರ್ವಹಿಸಕೂಡದು, ಇತ್ಯಾದಿ | 5000 | |
| ಪ್ರಕರಣ 83 | | 5000 | |

**XXX XXX XXX**

**ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34)ರ ಉದ್ಧೃತ ಭಾಗ**

**32. ಹೊಸ ಬಡಾವಣೆಗಳು ಅಥವಾ ಲೇಔಟ್‌ಗಳ ನಿರ್ಮಾಣ ಮಾಡುವುದು ಅಥವಾ ಹೊಸ ಖಾಸಗಿ ಬೀದಿಗಳ ರಚನೆ.- XXX XXX XXX**

(9) ಯಾವೊಬ್ಬ ವ್ಯಕ್ತಿಯು, (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸಿದರೆ ಅಥವಾ ನಿರ್ಮಿಸಲು ಪ್ರಯತ್ನಿಸಿದರೆ ಅಥವಾ ಈ ಪ್ರಕರಣದ ಅಡಿಯಲ್ಲಿನ ಪ್ರಾಧಿಕಾರದ ಆದೇಶಗಳಿಲ್ಲದೆ ಅಥವಾ ಆದೇಶಗಳಿಗನುಗುಣವಾಗಿ ಅಲ್ಲದೆ ಅನ್ಯಥಾ ಯಾವುದೇ ಬೀದಿಯನ್ನು ರಚಿಸಿದರೆ, ದೋಷಸಿದ್ಧಿಯ ತರುವಾಯ, ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಬದ್ಧನಾಗಿರತಕ್ಕದ್ದು.

**XXX XXX XXX**

## ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರ ಉದ್ಧೃತ ಭಾಗ

**XXX XXX XXX**

**118. 72ಎ, 72ಬಿ, 79 ಮತ್ತು 80ನೇ ಪ್ರಕರಣಗಳ ಉಲ್ಲಂಘನೆಗಾಗಿ ದಂಡ.-** 72ಎ, 72ಬಿ, 79 ಮತ್ತು 80ನೇ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡನೀಯನಾಗತಕ್ಕುದು:

ಪರಂತು,-

(i) ಮೊದಲನೆಯ ಅಪರಾಧದ ಸಂಬಂಧದಲ್ಲಿ, ನ್ಯಾಯಾಲಯವು ಕಾರಣಗಳನ್ನು ದಾಖಲು ಮಾಡಿ, ಜುಲ್ಮಾನೆಯ ಶಿಕ್ಷೆಯನ್ನು ಮಾತ್ರ ವಿಧಿಸಬಹುದು;

(ii) ಎರಡನೆಯ ಅಥವಾ ಅನಂತರದ ಅಪರಾಧದ ಸಂಬಂಧದಲ್ಲಿ ನ್ಯಾಯಾಲಯವು, ಒಂದು ತಿಂಗಳಿಗೆ ಕಡಿಮೆಯಲ್ಲದಷ್ಟು ಅವಧಿಯ ಕಾರಾವಾಸ ಶಿಕ್ಷೆಯನ್ನು ವಿಧಿಸತಕ್ಕುದು.][1]

**118ಎ. 78ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.-** (1) ಯಾವೊಬ್ಬ ವ್ಯಕ್ತಿಯು, ಮಾರುಕಟ್ಟೆ ಪ್ರಾಂಗಣ, ಖಾಸಗಿ ಮಾರುಕಟ್ಟೆಯಲ್ಲಿ ಕಮೀಷನ್ ಏಜೆಂಟ್‌ನಾಗಿ ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯವಹಾರವನ್ನು ನಡೆಸುತ್ತಿದ್ದು, 78ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಮತ್ತು (ಬಿ) ಖಂಡಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ತನ್ನ ಕರ್ತವ್ಯವನ್ನು ಪಾಲಿಸಲು ಯಾವುದೇ ಯುಕ್ತ ಕಾರಣವಿಲ್ಲದೇ ವಿಫಲನಾದಲ್ಲಿ ಅವನು ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳನ್ನು ಮೀರದಂತೆ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವೊಬ್ಬ ವ್ಯಕ್ತಿಯು, ಮಾರುಕಟ್ಟೆ ಪ್ರಾಂಗಣ ಅಥವಾ ಖಾಸಗಿ ಮಾರುಕಟ್ಟೆಯಲ್ಲಿ ಕಮೀಷನ್ ಏಜೆಂಟ್‌ನಾಗಿ ಅಧಿಸೂಚಿತ ಕೃಷಿ ಉತ್ಪನ್ನದ ವ್ಯವಹಾರವನ್ನು ನಡೆಸುತ್ತಿದ್ದು, 78ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಮಾರಾಟಗಾರನಿಗೆ ಬೆಲೆ ಸಂದಾಯಮಾಡುವ ಜವಾಬ್ದಾರಿಯನ್ನು ಪಾಲಿಸಲು ವಿಫಲನಾದಲ್ಲಿ, ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಒಂದು ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಸಂದಾಯ ಮಾಡಬೇಕಾಗಿದ್ದ ಬೆಲೆ ಮೌಲ್ಯದ ಎರಡುಪಟ್ಟು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಮೊದಲನೇ ಅಪರಾಧ ನಿರ್ಣಯದ ತರುವಾಯ ಉಲ್ಲಂಘನೆಯು ಮುಂದುವರೆದಲ್ಲಿ ಆ ಉಲ್ಲಂಘನೆಯ ಸಮಯಲದಲದಿ ಒಂದು ದಿನಕ್ಕೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು

**XXX XXX XXX**

**121. 125ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.-** ಮಾರುಕಟ್ಟೆ ಸಮಿತಿಯ ಯಾವುವೇ ಪುಸ್ತಕಗಳನ್ನು, ದಾಖಲೆಗಳನ್ನು, ನಿಧಿಗಳನ್ನು ಮತ್ತು ಸ್ವತ್ತನ್ನು ಅಭಿಗ್ರಹಪಡಿಸುವ ಅಥವಾ ಸ್ವಾಧೀನಪಡಿಸಿಕೊಳ್ಳುವ ಯಾವನೇ ವ್ಯಕ್ತಿಯನ್ನು 125ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಡ್ಡಿಪಡಿಸುವ ಅಥವಾ ಅಂಥ ವ್ಯಕ್ತಿಗೆ ಅವುಗಳನ್ನು ಒಪ್ಪಿಸಲು ತಪ್ಪುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಒಂದು ವರ್ಷ ದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**XXX XXX XXX**

**131ಐ. 131ಐ ನೇ ಪ್ರಕರಣದ ಉಲ್ಲಂಘನೆಗೆ ದಂಡ.–** 131ಡಿ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ, ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಆತನು, ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಸೆರವಾಸ ಅಥವಾ ಐದು ಸಾಐರ ರೂಪಾಯಿಗಳವರೆಗೆ ವಿಸ್ತರಿಸಬಹುದಾರ ಜುಲ್ಮಾನೆಯಿಂದ ಅಥವಾ ಇವರೆಡರಿಂದಲೂ, ದಂಡಿತವಾಗತಕ್ಕದ್ದು.

**XXX XXX XXX**

## ಕರ್ನಾಟಕ ಉಗ್ರಾಣಗಳ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 11)ರ ಉದ್ಧೃತ ಭಾಗ

**XXX XXX XXX**

**33.ದಂಡ.-** (1) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸಲು ತಪ್ಪುವ ಅಥವಾ ಅದನ್ನು ಉಲ್ಲಂಘಿಸಿ ವರ್ತಿಸುವ ಯಾರೇ ವ್ಯಕ್ತಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಅಪಾಧ ಮಾಡಿದ್ದಾನೆಂದು ಭಾವಿಸತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ಮೇಲೆ ಈ ಮುಂದಿನಂತೆ ದಂಡಿತನಾಗತಕ್ಕದ್ದು,-

(ಎ) 3ನೇ ಅಥವಾ 20ನೇ ಪ್ರಕರಣದ ಉಪಬಂಧದ ಉಲ್ಲಂಘನೆಯ ಸಂದರ್ಭದಲ್ಲಿ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದ;

(ಬಿ) ಇತರ ಯಾವುದೇ ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ.

(2) (ಎ) (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಕಂಪನಿ ಮತ್ತು ಅಪರಾಧ ಮಾಡಿದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು, ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತಮ್ಮ ವಿರುದ್ಧದ ಕಾನೂನು ವ್ಯವಹರಣೆಗಳಿಗೆ ಮತ್ತು ತದನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಯುವುದಕ್ಕೆ ತಾನು ಯುಕ್ತ ಜಾಗರೂಕತೆ ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಈ ಖಂಡದಲ್ಲಿ ಇರುವುದು ಯಾವುದೂ, ಅವನನ್ನು ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(ಬಿ) (ಎ) ಖಂಡದಲ್ಲಿ ಏನೇ ಇದ್ದರೂ, (1) ನೇ ಉಪ ಪ್ರಕರಣ ಅಡಿಯಲ್ಲಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಅವರ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಅಪರಾಧವು ನಡೆದಿದೆಯೆಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ:-** ಈ ಉಪ ಪ್ರಕರಣದ ಉದ್ದೇಶಗಳಿಗಾಗಿ,-

(i) "ಒಂದು ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ವಾಣಿಜ್ಯ ಸಂಸ್ಥೆ ಮತ್ತು ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ii) ವಾಣಿಜ್ಯ ಸಂಸ್ಥೆಯ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ವಾಣಿಜ್ಯ ಸಂಸ್ಥೆಯ ಪಾಲುದಾರ.

## ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ 21)ರ ಉದೃತ ಭಾಗ

**XXX XXX XXX**

**8. ನೋಂದಣಿ, ಮಾನ್ಯತೆ ಮತ್ತು ಶ್ರೇಣೀಕರಣ.- (1)** ಈ ಅಧಿನಿಯಮದ ಅಡಿಯಲ್ಲಿ ಕಾಲಕಾಲಕ್ಕೆ ರಚಿಸಿದ ನಿಯಮಗಳಲ್ಲಿ ರೂಪಿಸಲಾದ ಪ್ರಕ್ರಿಯೆಗಳಿಗನುಸಾರವಾಗಿ ಪ್ರವಾಸಿ ತಾಣಗಳಲ್ಲಿಯ ಪ್ರತಿಯೊಂದು ಪ್ರವರ್ಗದ ಪ್ರವಾಸೋದ್ಯಮ ವ್ಯಾಪಾರವನ್ನು ನೋಂದಾಯಿಸತಕ್ಕದ್ದು, ಮಾನ್ಯತೆಯನ್ನು ನೀಡತಕ್ಕದ್ದು ಹಾಗೂ ಶ್ರೇಣೀಕರಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಹೊರಡಿಸಲಾದ ನಿಯಮಗಳು, ವಿಶೇಷವಾಗಿ ಈ ಮುಂದಿನವುಗಳಿಗಾಗಿ, ಎಂದರೆ:-

(ಎ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಬೇಕೆAದು ಉದ್ದೇಶಿಸಲಾದ ಪ್ರವಾಸೋದ್ಯಮ ವ್ಯಾಪಾರದ ಗುಣಮಟ್ಟ ಮತ್ತು ಮಾನಕಗಳಿಗೆ ಸಂಬಂಧಿಸಿದ;

(ಬಿ) ನೋಂದಣಿ, ಮಾನ್ಯತೆ, ನವೀಕರಣ ಮತ್ತು ಶ್ರೇಣೀಕರಣಕ್ಕಾಗಿ ವಾರ್ಷಿಕ ಅಥವಾ ಇತರ ನಿಯತಕಾಲಿಕ ಶುಲ್ಕಗಳನ್ನು ವಿಧಿಸುವುದಕ್ಕಾಗಿ;

(ಸಿ) ನೋಂದಣಿ ಪ್ರಮಾಣ ಪತ್ರಗಳನ್ನು ನೀಡುವುದಕ್ಕಾಗಿ ಮತ್ತು ಪ್ರದರ್ಶಿಸುವುದಕ್ಕಾಗಿ ಹಾಗೂ ಪ್ರವಾಸೋದ್ಯಮ ವ್ಯಾಪಾರವು ನೋಂದಣಿಯಾಗಿದೆಯೆಂದು ತೋರಿಸುವ ಚಿಹ್ನೆಗಳನ್ನು ಪ್ರದರ್ಶಿಸುವುದಕ್ಕಾಗಿ;

(ಡಿ) ಪ್ರವಾಸೋದ್ಯಮ ವ್ಯಾಪಾರದ ತಪಾಸಣೆಗಾಗಿ ಹಾಗೂ ಆ ಉದ್ದೇಶಕ್ಕಾಗಿ ಪ್ರವೇಶಾಧಿಕಾರಗಳಿಗಾಗಿ;

(ಇ) ವರ್ಗೀಕರಣ ಅಥವಾ ಶ್ರೇಣೀಕರಣವನ್ನು ನಡೆಸಲು ಅನ್ವಯವಾಗುವ ಮಾನದಂಡವನ್ನು ಅಗತ್ಯಪಡಿಸುವುದಕ್ಕಾಗಿ;

(ಎಫ್) ಹಾಗೆ ನಿರ್ಧರಿಸಲಾದ ಯಾವುದೇ ಮಾನದಂಡದ ಪ್ರಕಟಣೆಗಾಗಿ;

(ಜಿ) ನಿಯಮಗಳ ಅಡಿಯಲ್ಲಿ ನಿರ್ವಹಿಸಬೇಕಾದ ರಿಜಿಸ್ಟರು ಅಥವಾ ರಿಜಿಸ್ಟರುಗಳ ನಮೂನೆ ಮತ್ತು ಒಳಾಂಶಗಳ ಹಾಗೂ ಅದರಲ್ಲಿ ನೋಂದಣಿಯಾಗಬೇಕಾದ ಪ್ರವಾಸೋದ್ಯಮ ವ್ಯಾಪಾರದ ಸಂಬಂಧವಾಗಿ;

(ಎಚ್) ನೋಂದಣಿಯಾದ ಅಥವಾ ಶ್ರೇಣೀಕೃತ ಪ್ರವಾಸೋದ್ಯಮ ವ್ಯಾಪಾರಕ್ಕೆ ದೊರಕುವ ಪ್ರಯೋಜನಗಳು ಅಥವಾ ಪ್ರೋತ್ಸಾಹ ಧನಗಳಿಗೆ ಸಂಬAಧಿಸಿದ; ಮತ್ತು

(ಐ) ಸರ್ಕಾರಕ್ಕೆ ಅಗತ್ಯ ಮತ್ತು ಯುಕ್ತವೆಂದು ಕಂಡುಬರಬಹುದಾದ ಅಂಥ ಇತರ ಪೂರಕ ಮತ್ತು ಅನುಷಂಗಿಕ ವಿಷಯಗಳಿಗಾಗಿ,

- ಉಪಬಂಧವನ್ನು ಕಲ್ಪಿಸಬಹುದು.

(3) ಈ ಅಧಿನಿಯಮದ ಅಡಿಯಲ್ಲಿ ಯಾವ ಪ್ರವಾಸಿ ತಾಣಕ್ಕೆ ಸಂಬAದಿಸಿದAತೆ ನಿಯಮಗಳನ್ನು ರಚಿಸಲಾಗಿದೆಯೋ ಮತ್ತು ಯಾವ ಪ್ರವಾಸೋದ್ಯಮವನ್ನು ನಿಯಂತ್ರಿಸಲಾಗುತ್ತಿದೆಯೋ, ಆ ಪ್ರವಾಸಿ ತಾಣದಲ್ಲಿ, ಅಂಥ ಪ್ರವಾಸೊದ್ಯಮ ವ್ಯಾಪಾರವನ್ನು ಯಾವೊಬ್ಬ ವ್ಯಕ್ತಿಯು, ಅಂಥ ಪ್ರವಾಸೋದ್ಯಮ ವ್ಯಾಪಾರದ ಪ್ರವರ್ಗವನ್ನು ನೋಂದಾಯಿಸಿದ ಮಾನ್ಯತೆಯನ್ನು ನೀಡಿದ ಅಥವಾ ಶ್ರೇಣೀಕರಿಸಿದ ಹೊರತು ನಡೆಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ:

ಪರಂತು, ಅಂಥ ಪ್ರವರ್ಗದ ವ್ಯಾಪಾರವನ್ನು ನಿಯಂತ್ರಿಸುವ ನಿಯಮಗಳು ಪ್ರಾರಂಭವಾದ ದಿನಾಂಕದಂದು ಪ್ರವಾಸೋದ್ಯಮ ವ್ಯಾಪಾರದ ಯಾವುದೇ ಪ್ರವರ್ಗವನ್ನು ನಡೆಸುತ್ತಿರುವ ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ನೋಂದಣಿ, ಮಾನ್ಯತೆ ಅಥವಾ ಶ್ರೇಣೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಅದು ತಿರಸ್ಕೃತಗೊಂಡ ಹೊರತು, ಆತನು ಅಂಥ ವ್ಯಾಪಾರವನ್ನು ನಡೆಸುವುದನ್ನು ಮುಂದುವರೆಸಬಹುದು:

ಮತ್ತು ಪರಂತು, ಪ್ರವಾಸೋದ್ಯಮ ವ್ಯಾಪಾರವನ್ನು ಭಾರತ ಸರ್ಕಾರವು ನೋಂದಾಯಿಸಿರುವಲ್ಲಿ, ಅಂಥ ಪ್ರವಾಸೋದ್ಯಮ ವ್ಯಾಪಾರಕ್ಕೆ ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಮತ್ತು ಶ್ರೇಣೀಕರಣದಿಂದ ವಿನಾಯಿತಿ ನೀಡಬಹುದು. ಅಂಥ ಸೌಲಭ್ಯವುಳ್ಳ ಪ್ರವಾಸೋದ್ಯಮ ಆಯೋಜಕನು, ಭಾರತ ಸರ್ಕಾರವು ನೀಡಿದ ನೋಂದಣಿ ಅಥವಾ ಸಂದರ್ಭಾನುಸಾರವಾಗಿ ಶ್ರೇಣೀಕರಣದ ಪ್ರಮಾಣ ಪತ್ರದ ಪ್ರತಿಯನ್ನು ಪ್ರವಾಸೋದ್ಯಮ ಇಲಾಖೆಗೆ ಒದಗಿಸತಕ್ಕದ್ದು. ಅಂಥ ಪ್ರಮಾಣ ಪತ್ರವನ್ನು ಪರಿಶೀಲಿಸಿದ ಮೇಲೆ, ಪ್ರವಾಸೋದ್ಯಮ ಇಲಾಖೆಯು, ಅಂಥ ಪ್ರವಾಸೋದ್ಯಮ ವ್ಯಾಪಾರಕ್ಕೆ ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಅಥವಾ ಶ್ರೇಣೀಕರಣದಿಂದ ವಿನಾಯಿತಿ ನೀಡಬಹುದು.

(4) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷ ಕಳೆದ ತರುವಾಯ, ಯಾವುದೇ ಪ್ರವಾಸೋದ್ಯಮ ಸೌಲಭ್ಯಕ್ಕೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯು (3)ನೇ ಉಪಪ್ರಕರಣವನ್ನು ಉಲ್ಲಂಘಿಸಿದನೆಂದು ಕಂಡುಬಂದರೆ, ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ನಂತರ ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(5) ಯಾವೊಬ್ಬ ವ್ಯಕ್ತಿಯು, (4)ನೇ ಉಪಪ್ರಕರಣದ ಅಡಿಯಲ್ಲಿ ದಂಡನೆಗಳನ್ನು ವಿಧಿಸಿದ ತರುವಾಯವೂ ಸಹ (3)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವುದನ್ನು ಮುಂದುವರೆಸಿದಲ್ಲಿ ಅಪರಾಧ ನಿರ್ಣಯವಾದ ನಂತರ, ಆತನು ಎರಡು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡಂರಿಂದಲೂ ದಂಡಿತನಾಗತಕ್ಕದ್ದು.

**XXX XXX XXX**

**16. ಪ್ರವಾಸಿ ಮಾರ್ಗದರ್ಶಿಗಳ ಲೈಸೆನ್ಸ್.- (**1) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ನಿರೂಪಿಸಿದ ಪ್ರಕ್ರಿಯೆಗೆ ಅನುಸಾರವಾಗಿ ಪ್ರವಾಸಿ ಮಾರ್ಗದರ್ಶಿಗಳಿಗೆ ನಿಯಮಿಸಿದ ಪ್ರಾಧಿಕಾರವು ಲೈಸೆನ್ಸನ್ನು ನೀಡತಕ್ಕದ್ದು. ನಿಯಮಗಳು ಪ್ರವಾಸಿ ಮಾರ್ಗದರ್ಶಿಗಳ ಆಯ್ಕೆಗಾಗಿ ಶೈಕ್ಷಣಿಕ ವಿದ್ಯಾರ್ಹತೆ, ಪಠ್ಯಕ್ರಮ, ತರಬೇತಿ ಮತ್ತು ಕಾರ್ಯವಿಧಾನವನ್ನೂ ಸಹ ನಿಯಮಿಸತಕ್ಕದ್ದು.

(2) ಪ್ರವಾಸಿ ತಾಣದಲ್ಲಿ ನೀಡಬೇಕಾದ ಪ್ರವಾಸಿ ಮಾರ್ಗದರ್ಶಿ ಲೈಸೆನ್ಸುಗಳ ಸಂಖ್ಯೆಯನ್ನು ನಿಯಮಿಸಿದ ಪ್ರಾಧಿಕಾರವು ನಿಯಂತ್ರಿಸತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಪ್ರವಾಸಿ ಮಾರ್ಗದರ್ಶಿ ಲೈಸೆನ್ಸುದಾರನು ನಿಯಮಿಸಲಾದ ವಿಧಾನದಲ್ಲಿ ಪ್ರದರ್ಶಿಸಬೇಕಾದ ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು.

(4) ಒಬ್ಬ ವ್ಯಕ್ತಿಯು,-

(ಎ) ನೋಂದಣಿಗಾಗಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ನಿಕಟಪೂರ್ವದ ಐದು ವರ್ಷಗಳೊಳಗೆ ಯಾವುದೇ ಕ್ರಿಮಿನಲ್ ಅಪರಾಧದ ಅಪರಾಧ ನಿರ್ಣೀತನಾಗಿದ್ದರೆ; ಅಥವಾ

(ಬಿ) ಕ್ರಿಮಿನಲ್ ಆಗಿರುವ ಹಿನ್ನಲೆ ಅಥವಾ ದಾಖಲೆಗಳನ್ನು ಹೊಂದಿದ್ದರೆ; ಅಥವಾ

(ಸಿ) ಈ ಪ್ರಕರಣದ ಅಡಿಯಲ್ಲಿ ಕಲ್ಪಿಸಿದ ಅರ್ಹತೆಗಳ ವ್ಯಾಪ್ತಿಯೊಳಗೆ ಬರದಿದ್ದಲ್ಲಿ,

- ನಿಯಮಿಸಿದ ಪ್ರಾಧಿಕಾರವು, ಈ ಪ್ರಕರಣದ ಅಡಿಯಲ್ಲಿ ಆ ವ್ಯಕ್ತಿಗೆ ಪ್ರವಾಸಿ ಮಾರ್ಗದರ್ಶಿ ಲೈಸೆನ್ಸ್ನ್ನು ನೀಡಲು ನಿರಾಕರಿಸಬಹುದು ಹಾಗೂ ಅಂಥ ನಿರಾಕರಣೆಗೆ ಕಾರಣಗಳನ್ನು ಆ ವ್ಯಕ್ತಿಗೆ ತಿಳಿಸತಕ್ಕದ್ದು.

(5) ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸ್ ಪಡೆದ ಪ್ರತಿಯೊಬ್ಬ ಪ್ರವಾಸಿ ಮಾರ್ಗದರ್ಶಿಯು,-

(ಎ) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ಅನುಸರಿಸುವುದು;

(ಬಿ) ಪ್ರವಾಸಿಗರ ಮಾರ್ಗದರ್ಶನಕ್ಕೆ ಅನುಮೋದಿತ ದಾರಿ ಅಥವಾ ಕಾಲುದಾರಿಯನ್ನು ಬಳಸುವುದು; ಮತ್ತು

(ಸಿ) ಪ್ರವಾಸಿಗರು ಅಥವಾ ಭೇಟಿ ನೀಡುವವರೊಂದಿಗೆ ಸಭ್ಯವಾಗಿ, ಆತಿಥ್ಯಪೂರ್ವಕವಾಗಿ, ಸಹಾಯಕವಾಗಿ ಮತ್ತು ಸ್ನೇಹಯುತವಾಗಿ ಇರುವುದು,

- ಅಗತ್ಯವಾಗಿರತಕ್ಕದ್ದು.

(6) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿತವಾದ ನಿಯಮಗಳ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ಪ್ರವಾಸಿ ಮಾರ್ಗದರ್ಶಿಯ ವಿರುದ್ಧ ಯಾವೊಬ್ಬ ವ್ಯಕ್ತಿಯು ನಿಯಮಿಸಲಾದ ಪ್ರಾಧಿಕಾರಕ್ಕೆ ಲಿಖಿತದಲ್ಲಿ ದೂರನ್ನು ಸಲ್ಲಿಸಬಹುದು.

(7) ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಪ್ರವಾಸಿ ಮಾರ್ಗದರ್ಶಿಯು ಉಲ್ಲಂಘಿಸಿರುವನೆಂದು ನಿಯಮಿಸಿದ ಪ್ರಾಧಿಕಾರಕ್ಕೆ ಮನವರಿಕೆಯಾದಲ್ಲಿ, ಆತನು, ಅಂಥ ಪ್ರವಾಸಿ ಮಾರ್ಗದರ್ಶಿಯ ಲೈಸೆನ್ಸನ್ನು ಅಮಾನತುಪಡಿಸಬಹುದು ಅಥವಾ ರದ್ದುಪಡಿಸಬಹುದು.

(8) ನಿಯಮಿಸಲಾದ ಪ್ರಾಧಿಕಾರದಿಂದ ಲೈಸೆನ್ಸನ್ನು ಪಡೆಯದ ಯಾವೊಬ್ಬ ವ್ಯಕ್ತಿಯು ಪ್ರವಾಸಿ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದರೆ, ಪ್ರವಾಸಿ ಮಿತ್ರ ಅಥವಾ ಪ್ರವಾಸೋದ್ಯಮ ಇಲಾಖೆಯ ಇತರ ಅಧಿಕಾರಿಯು ನಿಯಮಿಸಲಾದ ಪ್ರಾಧಿಕಾರಕ್ಕೆ ವಿಷಯವನ್ನು ವರದಿ ಮಾಡಿದ ನಂತರ, ಎರಡು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಗೆ ಗುರಿಯಾಗತಕ್ಕದು. ಅಂಥ ವರದಿಯ ಆಧಾರದ ಮೇಲೆ, ನಿಯಮಿಸಲಾದ ಪ್ರಾಧಿಕಾರವು ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಜುಲ್ಮಾನೆಗಾಗಿ ಆದೇಶಗಳನ್ನು ಹೊರಡಿಸುವ ಮೊದಲು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು ಮತ್ತು ಜುಲ್ಮಾನೆಗೆ ಗುರಿಯಾದ ಯಾರೇ ಆಗಲೀ ಪ್ರವಾಸಿ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುವುದನ್ನು ಪುನರಾವರ್ತಿಸುವ ಅಥವಾ ಮುಂದುವರೆಸುವ ಅಂಥ ಅಪರಾಧಕ್ಕಾಗಿ ಸಬ್-ಇನ್ಸ್ಪೆಕ್ಟರ್‌ನ ದರ್ಜೆಗಿಂತ ಕಡಿಮೆ ಇರದ ಯಾವೊಬ್ಬ ಪೋಲೀಸ್ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡತಕ್ಕದ್ದು.

(9) (8)ನೇ ಉಪಪ್ರಕರಣದ ಅಡಿಯಲ್ಲಿ ದಸ್ತಗಿರಿಯಾದ ಯಾವೊಬ್ಬ ವ್ಯಕ್ತಿಯನ್ನು, ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಿಕ ದಂಡಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಹದಿನೈದು ದಿನಗಳಿಗೆ ವಿಸ್ತರಿಸಬಹುದಾಗಿರುವ ಅವಧಿಗಾಗಿ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**XXX XXX XXX**

**19. ಅಂಕಿ-ಅಂಶದ ಮಾಹಿತಿ.-** (1) ಪ್ರವಾಸೋದ್ಯಮ ವ್ಯಾಪಾರದ ಪ್ರತಿಯೊಬ್ಬ ಮಾಲೀಕ ಮತ್ತು ಆಯೋಜಕನು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅವನು ನೋಂದಾಯಿತನಾಗಿರಲಿ ಅಥವಾ ನೋಂದಾಯಿತನಾಗದೇ ಇರಲಿ, ನಿಯಮಿಸಬಹುದಾದ ಅಂಥ ಅಂಕಿಅಂಶದ ಮಾಹಿತಿಯನ್ನು ಅಥವಾ ಅಂಕಿಅಂಶದ ದತ್ತಾಂಶವನ್ನು, ಅಂಥ ಅವಧಿಯ ಅಂತರಗಳಲ್ಲಿ ಮತ್ತು ಅಂಥ ನಮೂನೆಯಲ್ಲಿ ಅಂಥ ಪ್ರಾಧಿಕಾರಕ್ಕೆ ಒದಗಿಸಲು ಕರ್ತವ್ಯಬದ್ಧನಾಗಿರತಕ್ಕದ್ದು.

(2) (1)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಯಾವುದೇ ಮಾಹಿತಿಯನ್ನು ಅಥವಾ ಅಂಕಿ-ಅಂಶಗಳನ್ನು ಒದಗಿಸುವುದು ಅಗತ್ಯವಾಗಿದ್ದಾಗ, ಯಾವೊಬ್ಬ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ಸಂಸ್ಥೆಯು,-

(ಎ) ಕಾರಣವಿಲ್ಲದೆ, ಸಂಬಂಧಪಟ್ಟ ಮಾಹಿತಿಯನ್ನು ಅಥವಾ ಅಂಕಿ-ಅಂಶಗಳನ್ನು
ಒದಗಿಸಲು ತಪ್ಪಿದರೆ ಅಥವಾ ನಿರಾಕರಿಸಿದರೆ; ಅಥವಾ

(ಬಿ) ವಸ್ತುಶಃ ತಪ್ಪಾಗಿರುವ ಅಥವಾ ತಪ್ಪು ದಾರಿಗೆಳೆಯುವ ಯಾವುದೇ ಮಾಹಿತಿಯನ್ನು ಅಥವಾ ಅಂಕಿ-ಅಂಶವನ್ನು ಗೊತ್ತಿದ್ದೂ ಒದಗಿಸಿದರೆ,

- ಆತನು ಅಪರಾಧದ ತಪ್ಪಿತಸ್ಥನಾಗಿರತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಮತ್ತು ಎರಡನೆಯ ಅಥವಾ ತರುವಾಯದಲ್ಲಿ ನಿಯಮ ಪಾಲನೆ ಮಾಡದಿರುವುದಕ್ಕೆ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಇರುವ ಉಪಬಂಧಗಳಿಗೆ ಅನುಸಾರವಾಗಿ ಅಂಕಿ ಅಂಶದ ಮಾಹಿತಿಯನ್ನು ಒದಗಿಸಲು ಬದ್ಧವಾಗಿರುವ ಯಾವೊಬ್ಬ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮ್ ಅಥವಾ ಯಾವುದೇ ಇತರ ಸಂಸ್ಥೆಯು, (2)ನೇ ಉಪಪ್ರಕರಣದ ಅಡಿಯಲ್ಲಿ ದಂಡನೆಗಳನ್ನು ವಿಧಿಸಿದ ನಂತರವೂ, ಸದರಿ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವುದನ್ನು ಮುಂದುವರೆಸಿದರೆ, ಅಪರಾಧ ನಿರ್ಣಯವಾದ ಮೇಲೆ ಎರಡು ತಿಂಗಳುಗಳಿಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**XXX XXX XXX**

**23. ಪ್ರವಾಸೋದ್ಯಮ ತಾಣಗಳಲ್ಲಿ ಕೆಲವು ಚಟುವಟಿಕೆಗಳ ನಿಷೇಧ.-** (1) ಯಾವೊಬ್ಬ ವ್ಯಕ್ತಿಯು,-

(ಎ) ಯಾವೊಬ್ಬ ಪ್ರವಾಸಿಯ ವಿರುದ್ಧ, ಪೀಡಿಸುವ ಅಥವಾ ದುರಾಚರಣೆಯ ಯಾವುದೇ ಕೃತ್ಯವನ್ನು ಎಸಗತಕ್ಕದ್ದಲ್ಲ ಅಥವಾ ಯಾವುದೇ ಪ್ರವಾಸಿ ತಾಣದಲ್ಲಿ ಭಿಕ್ಷೆಯನ್ನು ಬೇಡತಕ್ಕದ್ದಲ್ಲ ಅಥವಾ ಬೀದಿ ವ್ಯಾಪಾರದ ವಸ್ತುಗಳ ಮಾರಾಟದಲ್ಲಿ ತೊಡಗತಕ್ಕದ್ದಲ್ಲ;

(ಬಿ) ಪ್ರವಾಸಿ ತಾಣದಲ್ಲಿ, ಯಾವೊಬ್ಬ ಪ್ರವಾಸಿಯ ವಿರುದ್ಧ ಪೀಡಿಸುವಂತೆ ಅಥವಾ ದುರಾಚರಣೆಯ ಯಾವುದೇ ಕೃತ್ಯವನ್ನು ಮಾಡುವಂತೆ ಮತ್ತು ಭಿಕ್ಷೆಯನ್ನು ಬೇಡುವಂತೆ ಅಥವಾ ವಸ್ತುಗಳ ಬೀದಿ ವ್ಯಾಪಾರವನ್ನು ಮಾಡುವಂತೆ ಮಾಡಲು ದುಷ್ಪ್ರೇÃರಿಸತಕ್ಕದ್ದಲ್ಲ; ಮತ್ತು

(ಸಿ) ಪ್ರವಾಸಿ ತಾಣದಲ್ಲಿ, ಯಾವೊಬ್ಬ ಪ್ರವಾಸಿಯ ವಿರುದ್ಧ ಪೀಡಿಸುವಂತೆ ಅಥವಾ ದುರಾಚರಣೆಯ ಯಾವುದೇ ಕೃತ್ಯವನ್ನು ಮಾಡಲು ಪ್ರಯತ್ನಿಸತಕ್ಕದ್ದಲ್ಲ.

(2) ಯಾವೊಬ್ಬ ವ್ಯಕ್ತಿಯು,-

(ಎ) (1)ನೇ ಉಪಪ್ರಕಣದ (ಎ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿದ್ದು, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) (1)ನೇ ಉಪಪ್ರಕಣದ (ಬಿ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿದ್ದು, ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಸಿ) (1)ನೇ ಉಪಪ್ರಕಣದ (ಸಿ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿದ್ದು, ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಮಾರಾಟಕ್ಕಾಗಿ ವಸ್ತುಗಳನ್ನು ಬೀದಿ ವ್ಯಾಪಾರ ಮಾಡುವಲ್ಲಿ ತೊಡಗಿರುವ ಮತ್ತು (1)ನೇ ಉಪಪ್ರಕರಣದ ಅಡಿಯಲ್ಲಿ ಅಪರಾಧವನ್ನು ಎಸಗಿರುವ ಯಾವೊಬ್ಬ ವ್ಯಕ್ತಿಯನ್ನು ಪ್ರವಾಸಿ ಮಿತ್ರನು ಅಲ್ಲಿಂದ ಚದುರಿಸತಕ್ಕದ್ದು ಮತ್ತು ಅಂಥ ವ್ಯಕ್ತಿಗೆ ಆ ಪ್ರದೇಶವನ್ನು ತೊರೆಯಲು ಮತ್ತು ತಾನಾಗಿಯೇ ಆ ಪ್ರದೇಶದಿಂದ ದೂರ ಹೋಗುವಂತೆ ನಿರ್ದೇಶಿಸತಕ್ಕದ್ದು. ಪ್ರವಾಸಿ ಮಿತ್ರನು, ನಿಯಮಿಸಲಾದ ರೀತಿಯಲ್ಲಿ ಅವನು ನಿರ್ವಹಿಸಬೇಕಾಗಿರುವ ದಿನಚರಿಯಲ್ಲಿ ಈ ಸಂಗತಿಯ ನಮೂದನ್ನು ದಾಖಲಿಸತಕ್ಕದ್ದು.

(4) ಪ್ರವಾಸಿ ತಾಣಗಳಿಂದ ಯಾವೊಬ್ಬ ವ್ಯಕ್ತಿ ತಾನಾಗಿಯೇ ಅಲ್ಲಿಂದ ದೂರ ಹೋಗಲು (3)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದೇಶನಗಳನ್ನು ನೀಡಿದಾಗ,-

(ಎ) ನಿರ್ದೇಶಿಸಲಾದಂತೆ ತಾನಾಗಿಯೇ ದೂರ ಹೋಗಲು ವಿಫಲರಾದಲ್ಲಿ; ಅಥವಾ

(ಬಿ) ತಾನಾಗಿಯೇ ದೂರ ಹೋಗಿ, ಆ ಪ್ರದೇಶವನ್ನು ಅಥವಾ ಅದರ ಭಾಗವನ್ನು ಮರುಪ್ರವೇಶಿಸಿದರೆ,

-ಯಾವೊಬ್ಬ ಪೊಲೀಸ್ ಅಧಿಕಾರಿಯು ಅವರನ್ನು ದಸ್ತಗಿರಿ ಮಾಡತಕ್ಕದ್ದು ಮತ್ತು ಆ ಪ್ರದೇಶದಿಂದ ದೂರ ಕಳುಹಿಸತಕ್ಕದ್ದು ಹಾಗೂ ಆ ಪ್ರದೇಶದಿಂದ ಹೊರಗೆ ಬಿಡತಕ್ಕದ್ದು ಮತ್ತು ಅಂಥ ದಸ್ತಗಿರಿಯ ಹಾಗೂ ಬಿಡುಗಡೆಯ ನಮೂದನ್ನು ಪೋಲೀಸ್ ಠಾಣೆಯಲ್ಲಿ ನಿರ್ವಹಿಸಲಾಗುವ ದೈನಂದಿನ ದಿನಚರಿಯಲ್ಲಿ ದಾಖಲಿಸತಕ್ಕದ್ದು.

(5) (3)ನೇ ಉಪಪ್ರಕರಣದ ಅಡಿಯಲ್ಲಿ ಉಲ್ಲಂಘನೆ ಮಾಡಿದ ಮತ್ತು ತತ್ಪರಿಣಾಮವಾಗಿ (4)ನೇ ಉಪಪ್ರಕರಣದ ಅಡಿಯಲ್ಲಿ ಆತನನ್ನು ದೂರ ಕಳುಹಿಸಿದ ತರುವಾಯವೂ, ವಸ್ತುಗಳ ಬೀದಿ ಮಾರಾಟದಲ್ಲಿ ಮತ್ತೆ ತೊಡಗಿಕೊಳ್ಳುವ ಯಾವೊಬ್ಬ ಅಪರಾಧಿಯನ್ನು ಯಾವೊಬ್ಬ ಪೋಲೀಸ್ ಅಧಿಕಾರಿಯು ದಸ್ತಗಿರಿ ಮಾಡತಕ್ಕದ್ದು ಮತ್ತು ಅಪರಾಧ ಎಸಗಿರುವ ಸ್ಥಳೀಯ ಪ್ರದೇಶದ ಜಿಲ್ಲಾಧಿಕಾರಿಯು ಈ ಬಗ್ಗೆ ಅಧಿಕೃತಗೊಳಿಸಿದ ತಹಶೀಲ್ದಾರನ ದರ್ಜೆಗಿಂತ ಕಡಿಮೆ ಇರದ ಯಾವೊಬ್ಬ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು. ಆತನು ಪೋಲೀಸ್ ಅಧಿಕಾರಿಯ ಹಾಗೂ ಅಪರಾಧಿಯ ಹೇಳಿಕೆಯನ್ನು ದಾಖಲಿಸತಕ್ಕದ್ದು ಮತ್ತು ಅಪರಾಧಿಯಿಂದ ಈ ಅಧಿನಿಯಮದ ಉಲ್ಲಂಘನೆಯ ಘಟನೆಗಳನ್ನು ತೋರಿಸುವ ದೈನಂದಿನ ದಿನಚರಿಯನ್ನು ಅಥವಾ ಇತರ ದಾಖಲೆಯನ್ನು ಪರಿಶೀಲಿಸತಕ್ಕದ್ದು ಹಾಗೂ ಅಪರಾಧಿ ಮತ್ತು ಪೋಲೀಸ್ ಅಧಿಕಾರಿಯ ಅಹವಾಲನ್ನು ಕೇಳಿದ ತರುವಾಯ ಸಂಕ್ಷಿಪ್ತ ರೀತಿಯಲ್ಲಿ ತನ್ನ ನಿರ್ಣಯಗಳನ್ನು ದಾಖಲಿಸತಕ್ಕದ್ದು ಮತ್ತು ಅಪರಾಧಿಯು ಈ ಪ್ರಕರಣದಲ್ಲಿ ಮೇಲೆ ಹೇಳಲಾದ ನಿಷೇಧಿತ ಉಲ್ಲಂಘನೆಯ ಅಪರಾಧಿಯಾಗಿರುವನೆಂದು ಕಂಡುಬಂದಲ್ಲಿ, ನಿಯಮಿಸಲಾದ ಅಧಿಕಾರಿಯು, (4)ನೇ ಉಪಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ಐದು ನೂರು ರೂಪಾಯಿಗಳನ್ನು ಮೀರದ ಜುಲ್ಮಾನೆಯನ್ನು ವಿಧಿಸತಕ್ಕದ್ದು.

(6) (5)ನೇ ಉಪಪ್ರಕರಣದ ಅಡಿಯಲ್ಲಿ ದಂಡಿತನಾದ ತರುವಾಯವೂ ಯಾವುದೇ ಪ್ರವಾಸೋದ್ಯಮ ತಾಣದಲ್ಲಿ ವಸ್ತುಗಳ ಬೀದಿ ವ್ಯಾಪಾರ ಮಾಡಿದ್ದಕ್ಕೆ ವಿಧಿಸಲಾದ ನಿಷೇಧಿತ ಯಾವುದೇ ತರುವಾಯದ ಉಲ್ಲಂಘನೆಯನ್ನು ಮಾಡುವ ಯಾರನ್ನೇ ಆಗಲಿ, ಯಾವೊಬ್ಬ ಪೋಲೀಸ್ ಅಧಿಕಾರಿಯು ವಾರೆಂಟ್ ಇಲ್ಲದೇ ದಸ್ತಗಿರಿ ಮಾಡತಕ್ಕದ್ದು ಮತ್ತು ಅಪರಾಧಿಯನ್ನು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಿಕ ದಂಡಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ಮೇಲೆ ಆತನು ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**24. ಪ್ರವಾಸಿ ತಾಣದ ರಕ್ಷಣೆ ಮತ್ತು ನಿರ್ವಹಣೆ.-** (1)ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ, ಇಡೀ ಕರ್ನಾಟಕ ರಾಜ್ಯಕ್ಕಾಗಲೀ ಅಥವಾ ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲೆಗಾಗಲೀ, ಪ್ರವಾಸಿ ತಾಣದ ರಕ್ಷಣೆ ಮತ್ತು ನಿರ್ವಹಣೆಗಾಗಿ, ಸರ್ಕಾರದ ಗ್ರೂಪ್-ಬಿ ದರ್ಜೆಯ ಅಥವಾ ಅದರ ಮೇಲಿನ ದರ್ಜೆಯ ಯಾವೊಬ್ಬ ಅಧಿಕಾರಿಯನ್ನು ಸಕ್ಷಮ ಪ್ರಾಧಿಕಾರಿ ಎಂದು ಗೊತ್ತುಪಡಿಸಬಹುದು.

(2) ಯಾವೊಬ್ಬ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮ್ ಅಥವಾ ಯಾವುದೇ ಇತರ ಸಂಸ್ಥೆಯು, ಯಾವುದೇ ಕಿರುಕುಳಕ್ಕೆ ಕಾರಣವಾಗತಕ್ಕದ್ದಲ್ಲ ಅಥವಾ ಯಾವುದೇ ಚಟುವಟಿಕೆ, ಪ್ರಕ್ರಿಯೆ ಅಥವಾ ನಿರ್ವಹಣೆ ಮುಂತಾದವನ್ನು ನಡೆಸತಕ್ಕದ್ದಲ್ಲ ಅಥವಾ ಯಾವುದೇ ಪ್ರವಾಸೀ ತಾಣದ ಪ್ರವಾಸೋದ್ಯಮದ ಬೆಳವಣಿಗೆಗೆ ಚ್ಯುತಿ ಮಾಡುವ ಅಥವಾ ದುಸ್ಥಿತಿಗೆ ತರುವ ಅಥವಾ ಹಾನಿ ಮಾಡುವ ಅಥವಾ ದುಸ್ಥಿಗೆ ತರುವ ಸಂಭವವಿರುವ ಅಥವಾ ಹಾನಿ ಮಾಡುವುದಕ್ಕೆ ಅಥವಾ ದುಸ್ಥಿತಿಗೆ ತರುವುದಕ್ಕೆ ಸಾಧ್ಯವಿರುವ ಅಥವಾ ಹಾನಿಯಾಗುವ ಅಥವಾ ದುಸ್ಥಿತಿಗೆ ತರುವ ಕಿರುಕುಳವನ್ನು ತಡೆಯಲು ಅಥವಾ ನಿವಾರಿಸಲು ಉಪೇಕ್ಷಿಸತಕ್ಕದ್ದಲ್ಲ.

(3) ಸಕ್ಷಮ ಪ್ರಾಧಿಕಾರವು, ಸ್ವಪ್ರೇರಣೆಯಿಂದಾಗಲೀ ಅಥವಾ ಅದು ಸ್ವೀಕರಿಸಿದ ದೂರಿನ ಆಧಾರದ ಮೇಲಾಗಲೀ ಅಥವಾ ಅದಕ್ಕೆ ಮಾಡಿದ ಉಲ್ಲೇಖದ ಮೇಲಾಗಲೀ, ಸದರಿ ಸಕ್ಷಮ ಪ್ರಾಧಿಕಾರದ ಅಭಿಪ್ರಾಯದಲ್ಲಿ, ಯಾವುದೇ ಪ್ರವಾಸಿ ತಾಣದ ಪ್ರವಾಸೋದ್ಯಮದ ಬೆಳವಣಿಗೆಗೆ ಅದು ಹಾನಿ ಮಾಡಿದೆ ಅಥವಾ ದುಸ್ಥಿತಿಗೆ ತಂದಿದೆ ಅಥವಾ ಹಾನಿ ಮಾಡುವ ಅಥವಾ ದುಸ್ಥಿತಿಗೆ ತರುವ ಸಂಭವವಿದೆ ಎಂದಾದಲ್ಲಿ, ಪೂರ್ವ ಸೂಚನೆಯನ್ನು ನೀಡಿದ ತರುವಾಯ ಲಿಖಿತದಲ್ಲಿನ ಆದೇಶದ ಮೂಲಕ ಆಗುತ್ತಿರುವ ಯಾವುದೇ ಉಪದ್ರವವನ್ನು ತಡೆಗಟ್ಟÀಬಹುದು ಅಥವಾ ಮೇಲಿನ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಅಂಥ ಚಟುವಟಿಕೆ, ಪ್ರಕ್ರಿಯೆ, ಕಾರ್ಯನಿರ್ವಹಣೆ ನಡೆಯುವುದನ್ನು ತಡೆಯಬಹುದು, ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಅಂಥ ಮಧ್ಯಂತರ ಆದೇಶವನ್ನು ಹೊರಡಿಸಬಹುದು.

(4) ಸಕ್ಷಮ ಪ್ರಾಧಿಕಾರದ ಅಭಿಪ್ರಾಯದಲ್ಲಿ, ಉಪದ್ರವವು ಪ್ರವಾಸೋದ್ಯಮದ ಬೆಳವಣಿಗೆಯ ಮೇಲೆ ಪ್ರಭಾವ ಬೀರುವಂತಿದ್ದರೆ, ಆ ವಸ್ತುವಿನ ಮಾಲೀಕ, ಅಧಿಭೋಗದಾರ, ಬಾಡಿಗೆದಾರ, ಸನ್ನದುದಾರ ಅಥವಾ ಆ ವಸ್ತುವಿನ ಬಳಕೆಯ ಹಕ್ಕನ್ನು ಅನುಭವಿಸುತ್ತಿರುವ ಅಥವಾ ಅದರ ನಿಯಂತ್ರಣ ಹೊಂದಿರುವ ಯಾವೊಬ್ಬ ವ್ಯಕ್ತಿಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಅಂಥ ವ್ಯಕ್ತಿಯು, ಅಂಥ ನೋಟೀಸನ್ನು ಸ್ವೀಕರಿಸಿದ ದಿನಾಂಕದಿAದ ಹದಿನೈದು ದಿನಗಳ ಅವಧಿಯ ಒಳಗಾಗಿ ಅದನ್ನು ಕೊನೆಗೊಳಿಸತಕ್ಕದ್ದು ಅಥವಾ ನಿವಾರಣೆ ಮಾಡತಕ್ಕದ್ದು, ಹಾಗೂ ಸದರಿ ಹದಿನೈದು ದಿನಗಳ ಅವಧಿಯೊಳಗಾಗಿ ಅಥವಾ ಸಕ್ಷಮ ಪ್ರಾಧಿಕಾರವು ವಿಸ್ತರಿಸಬಹುದಾದ, ಆದರೆ ಮೂರು ತಿಂಗಳುಗಳನ್ನು, ಮೀರದ, ಅಂಥ ಹೆಚ್ಚಿನ ಅವಧಿಯೊಳಗಾಗಿ ಅದನ್ನು ನಿವಾರಿಸಿದ ಅಥವಾ ಕೊನೆಗೊಳಿಸಿದ ಹೊರತು, ಸಕ್ಷಮ ಪ್ರಾಧಿಕಾರವು ಅಂಥ ಉಪದ್ರವದ ನಿವಾರಣೆ ಮಾಡತಕ್ಕದ್ದು.

(5) ಉಪದ್ರವದ ನಿವಾರಣೆಯ ನೋಟೀಸನ್ನು ಯಾರ ವಿರುದ್ಧ ನೀಡಲಾಗಿದೆಯೋ ಆ ಮಾಲೀಕ, ಅಧಿಭೋಗದಾರ, ಬಾಡಿಗೆದಾರ, ಸನ್ನದುದಾರ ಅಥವಾ ಯಾವೊಬ್ಬ ವ್ಯಕ್ತಿಯು, ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿದ ಅವಧಿಯೊಳಗೆ ಅಂಥ ಉಪದ್ರವದ ನಿವಾರಣೆಯ ಆದೇಶವನ್ನು ಪಾಲಿಸಲು ವಿಫಲನಾದ ತರುವಾಯ, ಉಪದ್ರವದ ಮುಖ್ಯ ವಸ್ತು ಅಥವಾ ಪದಾರ್ಥವನ್ನು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಿದಾಗ, ಉಪದ್ರವದ ನಿವಾರಣೆಯ ವೆಚ್ಚಕ್ಕಿಂತ ಹೆಚ್ಚು ಮೊತ್ತ ಯಾವುದೇ ಇದ್ದಲ್ಲಿ ಅದನ್ನು ಮಾಲೀಕನಿಗೆ ಸಂದಾಯ ಮಾಡತಕ್ಕದ್ದು ಎಂಬುದನ್ನು ಹೊರತುಪಡಿಸಿ, ಮುಟ್ಟುಗೋಲಿಗೆ ಒಳಗಾಗತಕ್ಕದ್ದು ಮತ್ತು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು. ನಿವಾರಣೆಯ ವೆಚ್ಚವು, ಹರಾಜಿನಲ್ಲಿ ಮಾರಾಟ ದರವನ್ನು ಮೀರಿದ ಸಂದರ್ಭದಲ್ಲಿ, ಬಾಕಿಯನ್ನು, (6)ನೇ ಉಪಪ್ರಕರಣದಲ್ಲಿ ಉಪಬಂಧಿಸಲಾದAತೆ, ಸಂಬಂಧಪಟ್ಟ ಮಾಲೀಕನಿಂದ ವಸೂಲಿ ಮಾಡತಕ್ಕದ್ದು.

(6) ಸಕ್ಷಮ ಪ್ರಾಧಿಕಾರವು ಅಂಥ ಉಪದ್ರವವನ್ನು ನಿವಾರಿಸುವಲ್ಲಿ ಅಥವಾ ಕೊನೆಗೊಳಿಸುವಲ್ಲಿ ಭರಿಸಲಾದ ಖರ್ಚುಗಳು ಮತ್ತು ಮೊತ್ತಗಳು ಯಾವುವಾದರೂ ಇದ್ದರೆ, ಅಂಥ ಉಪದ್ರವವನ್ನು ಮಾಡಿದಂಥ ವ್ಯಕ್ತಿಯಿಂದ ಅಥವಾ ಉಪದ್ರವಕ್ಕೆ ಕಾರಣವಾಗಿರುವ ವಸ್ತುವಿನ ಮಾಲೀಕ/ ಅಧಿಭೋಗದಾರನಿಂದ, ಭೂ-ಕಂದಾಯ ಬಾಕಿಯನ್ನು ವಸೂಲು ಮಾಡುವ ರೀತಿಯಲ್ಲಿಯೇ ವಸೂಲು ಮಾಡತಕ್ಕದ್ದು.

(7) ಈ ಅಧಿನಿಯಮದ ಅಡಿಯಲ್ಲಿ ಉಪದ್ರವವಾಗಿರುವ, ಯಾವುದೇ ಸ್ವತ್ತು, ಽಸಾಮಗ್ರಿ ಅಥವಾ ವಸ್ತುವನ್ನು, ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡಬಹುದು ಅಥವಾ ವ್ಯವಹರಿಸಬಹುದು.

(8) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅಧಿನಿಯಮದ ಅಡಿಯಲ್ಲಿ ನೀಡಲಾದ ಯಾವುದೇ ಆದೇಶವನ್ನು ಅಥವಾ ನಿರ್ದೇಶನಗಳನ್ನು ಪಾಲಿಸಲು ವಿಫಲನಾಗುವ ಅಥವಾ ಈ ಅಧಿನಿಯಮದ ಅಡಿಯಲ್ಲಿ ತನ್ನ ಅಧಿಕಾರಗಳನ್ನು ಚಲಾಯಿಸುವುದರಿಂದ ಅಥವಾ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದರಿಂದ ಸಕ್ಷಮ ಪ್ರಾಧಿಕಾರದ ಆದೇಶಗಳು ಅಥವಾ ನಿರ್ದೇಶನಗಳ ಅಡಿಯಲ್ಲಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯನ್ನು ತಡೆಯುವ ಯಾರೇ ಆಗಲಿ ಅಪರಾಧ ನಿರ್ಣಯವಾದ ನಂತರ, ಮೂರು ತಿಂಗಳುಗಳಿಗಿಂತ ಕಡಿಮೆ ಇರದ, ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**25. ಮಾನ್ಯತೆಯನ್ನು ತಪ್ಪಾಗಿ ತೋರಿಸುವುದಕ್ಕಾಗಿ ದಂಡನೆ.-** ಯಾವೊಬ್ಬ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮ್ ಅಥವಾ ಯಾವುದೇ ಇತರ ಸಂಸ್ಥೆಯು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದಂತೆ ಅಥವಾ ಶ್ರೇಣೀಕರಿಸಲಾದಂತೆ, ಯಾವುದೇ ಪ್ರವಾಸೋದ್ಯಮ ವ್ಯಾಪಾರವನ್ನು ತಪ್ಪಾಗಿ ಪ್ರತಿನಿಧಿಸಿದರೆ, ನಿಯಮಿಸಲಾದ ಪ್ರಾಧಿಕಾರವು, ಮೊದಲ ಅಂಥ ಅಪರಾಧಕ್ಕಾಗಿ ಐವತ್ತು ಸಾವಿರ ರೂಪಾಯಿಗಳನ್ನು ಮೀರದ, ಮತ್ತು ಎರಡನೇ ಅಥವಾ ತರುವಾಯದ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಮೀರದ ದಂಡವನ್ನು ವಿಧಿಸತಕ್ಕದ್ದು:

ಪರಂತು, ದಂಡವನ್ನು ವಿಧಿಸಲು ಆದೇಶಿಸುವುದಕ್ಕೆ ಮೊದಲು, ನಿಯಮಿಸಲಾದ ಪ್ರಾಧಿಕಾರವು, ಸಂಬಂಧಪಟ್ಟ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ಸಂಸ್ಥೆಗೆ ಅಹವಾಲು ಹೇಳಿಕೊಳ್ಳುವುದಕ್ಕೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ದಂಡವನ್ನು ವಿಧಿಸಿದ ತರುವಾಯವೂ, ಯಾವೊಬ್ಬ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ಸಂಸ್ಥೆಯು, ತಾನು ಹಾಗೆಂದು ಮಾನ್ಯತೆಯನ್ನು ಪಡೆದಿರುವುದಾಗಿ ಅಥವಾ ನೋಂದಾಯಿತವಾಗಿರುವುದಾಗಿ ಪ್ರದರ್ಶಿಸುವುದನ್ನು ಅಥವಾ ತೋರಿಸುವುದನ್ನು ಮುಂದುವರಿಸಿದಲ್ಲಿ, ಆತನು ಅಪರಾಧ ನಿರ್ಣಯವಾದ ನಂತರ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**26. ಸರ್ಕಾರಿ ಪ್ರವಾಸೋದ್ಯಮ ಮುದ್ರೆಯ ಅನಧಿಕೃತ ಬಳಕೆಗಾಗಿ ದಂಡನೆ**.- (1) ಯಾವೊಬ್ಬ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ಸಂಸ್ಥೆಯು, ಅನುಮತಿಯಿಲ್ಲದೆ ಅಥವಾ ಅಧಿಕಾರವಿಲ್ಲದೆ ಸರ್ಕಾರಿ ಪ್ರವಾಸೋದ್ಯಮ ಸಂಸ್ಥೆಗಳಿಗೆ ಸೇರಿದ ಯಾವುದೇ ಮುದ್ರೆಯನ್ನು ಬಳಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ಸಂಸ್ಥೆಯು, ಮೊದಲ ಅಂಥ ಅಪರಾಧಕ್ಕಾಗಿ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತು ಎರಡನೇ ಅಥವಾ ತರುವಾಯದ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು:

ಪರಂತು, ದಂಡವನ್ನು ವಿಧಿಸಲು ಆದೇಶಿಸುವುದಕ್ಕೆ ಮೊದಲು, ನಿಯಮಿಸಲಾದ ಪ್ರಾಧಿಕಾರವು, ಸಂಬಂಧಪಟ್ಟ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(3) ನಿಯಮಿಸಲಾದ ಪ್ರಾಧಿಕಾರವು, (1)ನೇ ಉಪಪ್ರಕರಣದ ಅನುಪಾಲನೆಯನ್ನು ಪರಿಶೀಲಿಸಲು ತಪಾಸಣೆಯನ್ನು ಕೈಗೊಳ್ಳುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

(4) (1)ನೇ ಉಪಪ್ರಕರಣದ ಅಡಿಯಲ್ಲಿ ದಂಡವನ್ನು ವಿಧಿಸಿದ ತರುವಾಯವೂ, ಯಾವೊಬ್ಬ ವ್ಯಕ್ತಿ, ಕಂಪನಿ, ಸಂಘ ಅಥವಾ ಫರ್ಮು ಅಥವಾ ಯಾವುದೇ ಇತರ ಸಂಸ್ಥೆಯು, ಸರ್ಕಾರಿ ಪ್ರವಾಸೋದ್ಯಮ ಮುದ್ರೆಯನ್ನು ಬಳಸುವುದನ್ನು ಮುಂದುವರಿಸಿದಲ್ಲಿ, ಆತನು ಅಪರಾಧ ನಿರ್ಣಯವಾದ ನಂತರ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**XXX XXX XXX**

**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18)ರ ಉದ್ಧೃತ ಭಾಗ**

**XXX XXX XXX**

**39. ಅಡ್ಡಿಯುಂಟು ಮಾಡಿದ್ದಕ್ಕಾಗಿ ದಂಡ.-** ಯಾವುದೇ ಭೂಮಿ ಅಥವಾ ಕಟ್ಟಡದೊಳಗೆ ಅಥವಾ ಅದನ್ನು ಪ್ರವೇಶಿಸಲು 35ನೇ ಪ್ರಕರಣದ ಅಡಿಯಲ್ಲಿ ಅಧಿಕೃತವಾದ ವ್ಯಕ್ತಿಯ ಪ್ರವೇಶಕ್ಕೆ ಅಡ್ಡಿಪಡಿಸುವ ಅಥವಾ ಅಂಥ ಪ್ರವೇಶದ ನಂತರ ಅಂಥ ವ್ಯಕ್ತಿಗೆ ಉಪದ್ರವ ನೀಡುವ ಅಥವಾ ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಪ್ರದತ್ತವಾದ ಯಾವುದೇ ಅಧಿಕಾರವನ್ನು ಅವನು ಕಾನೂನುಬದ್ಧವಾಗಿ ಚಲಾಯಿಸುವುದಕ್ಕೆ ಅಡ್ಡಿಯುಂಟು ಮಾಡುವ ಯಾರೇ ವ್ಯಕ್ತಿಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರೆಡರಿಂದಲೂ ದಂಡಿಸತಕ್ಕದ್ದು.

**XXX XXX XXX**

**ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ರ ಉದ್ಧೃತ ಭಾಗ**

**XXX XXX XXX**

**281. ಕೆಲವು ಅಧಿಕಾರಿಗಳನ್ನು ಅಕ್ರಮವಾಗಿ ಅಡ್ಡಿಪಡಿಸುವುದು.-** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಕಾರ್ಯದರ್ಶಿ ಅಥವಾ ಅಂಥ ಅದಿಕಾರಿಯು, ಯಾವುದೇ ಸ್ಥಳ, ಕಟ್ಟಡ ಅಥವಾ ಭೂಮಿಯ ಮೇಲೆ ಅಥವಾ ಅದನ್ನು ಪ್ರವೇಶಿಸಲು ಅವನ ಅಧಿಕಾರಗಳನ್ನು ಕಾನೂನುಬದ್ಧವಾಗಿ ಪ್ರತ್ಯಾಯೋಜಿಸಲಾಗಿರುವಂಥ ಯಾವನೇ ವ್ಯಕ್ತಿಯನ್ನು, ಅದರ ಮೇಲೆ ಅಥವಾ ಅದರೊಳಗೆ ಪ್ರವೇಶಿಸುವ ಅವನ ಕಾನೂನುಬದ್ಧ ಅಧಿಕಾರವನ್ನು ಚಲಾಯಿಸುವುದನ್ನು ತಡೆಗಟ್ಟುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**XXX XXX XXX**

**ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ಅಧಿನಿಯಮ, 2012 (2013ರ ಕರ್ನಾಟಕ ಅಧಿನಿಯಮ 9)ರ ಉದ್ಧೃತ ಭಾಗ**

**XXX XXX XXX**

**19. ಉಲ್ಲಂಘನೆಗಳು ಮತ್ತು ದಂಡ.-** ಈ ಅಧಿನಿಯಮದ, ನಿಯಮಗಳ ಯಾವುದೇ ಉಪಬಂಧಗಳನ್ನು ಅಥವಾ ಲೈಸೆನ್ಸಿನ ಅಥವಾ ನೋಂದಣಿಯ ಷರತ್ತುಗಳನ್ನು ಅಥವಾ ಈ ಅಧಿನಿಯಮದ ಅಡಿಯಲ್ಲಿ ಸರ್ಕಾರವು ಪ್ರಾಧಿಕೃತಗೊಳಿಸಬಹುದಾದ ಅಂಥ ಅಧಿಕಾರಿಯು ನೀಡಿದ ನಿರ್ದೇಶನಗಳನ್ನು ಉಲ್ಲಂಘಿಸುವ ಯಾವೊಬ್ಬರೇ ಆಗಲಿ, ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಸಾದಾ ಕಾರಾವಾಸದಿಂದ ಅಥವಾ ಅವೆರೆಡರಿಂದಲೂ ದಂಡಿತನಾಗತಕ್ಕದ್ದು ಹಾಗೂ ಮುಂದುವರಿದ ಉಲ್ಲಂಘನೆಯ ಸಂದರ್ಭದಲ್ಲಿ ಮುಂದುವರಿದ ಅಂಥ ಮೊದಲ ಉಲ್ಲಂಘನೆಯ ತರುವಾಯ ಅಂಥ ಉಲ್ಲಂಘನೆಯು ಮುಂದುವರೆದ ಪ್ರತಿ ದಿವಸಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**ಕರ್ನಾಟಕ ಮುನ್ಸಿಪಾಲಿಟಿಗಳ** ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ ಉದ್ಧೃತ ಭಾಗ

**XXX XXX XXX**

**170. ಹೊಸ ಬಡಾವಣೆಗಳನ್ನು ಅಥವಾ ಲೇಔಟ್ ಗಳನ್ನು ರೂಪಿಸುವುದು ಅಥವಾ ಹೊಸ ಖಾಸಗಿ ಬೀದಿಗಳನ್ನು ನಿರ್ಮಿಸುವುದು**.- **XXX XXX XXX**

(9) ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಬಡಾವಣೆಯನ್ನು ಅಥವಾ ಲೇಔಟ್ ನ್ನು ರೂಪಿಸುವ ಅಥವಾ ರೂಪಿಸಲು ಪ್ರಯತ್ನಿಸುವ ಅಥವಾ ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಆದೇಶಗಳಿಗೆ ಅನುಗುಣವಾಗಲ್ಲದೆ ಅಥವಾ ಅನ್ಯಥಾ ಯಾವುದೇ ಬೀದಿಯನ್ನು ನಿರ್ಮಿಸುವ ಯಾರೇ ವ್ಯಕ್ತಿಯು, ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**184. ಕಟ್ಟಡಗಳ ಚಾವಣಿಗಳನ್ನು ಮತ್ತು ಹೊರಗೋಡೆಗಳನ್ನು ಸುಲಭ ದಹ್ಯ ಸಾಮಗ್ರಿಗಳಿಂದ ಮಾಡಿರತಕ್ಕದ್ದಲ್ಲ.- XXX XXX XXX**

(3) ಯಾರೇ ಆಗಲಿ (1)ನೇ ಉಪ-ಪ್ರಕರಣದಲ್ಲಿ ಅಗತ್ಯಪಡಿಸಿರುವಂಥ ಸಮ್ಮತಿಯಿಲ್ಲದೆಯೇ ಹಿಂದೆ ಹೇಳಿದ ಸಾಮಗ್ರಿಗಳಿಂದ ಯಾವುದೇ ಚಾವಣಿಯನ್ನು ಅಥವಾ ಗೋಡೆಯನ್ನು ಮಾಡಿದರೆ ಅಥವಾ ಮಾಡಿಸಿದರೆ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಕೊಟ್ಟ ನೋಟೀಸಿನ ಅಗತ್ಯತೆಗಳನ್ನು ಉಲ್ಲಂಘಿಸಿ, ಅವು ಉಳಿಯಲು ಅವಕಾಶ ಮಾಡಿಕೊಟ್ಟರೆ, ಅವನು ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲನೆಯ ಅಪರಾಧ ನಿರ್ಣಯದ ದಿನಾಂಕದ ತರುವಾಯ ಅಪರಾಧವು ಮುಂದುವರಿಯುವ ಪ್ರತಿಯೊಂದು ದಿನಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**203. ಮುನ್ಸಿಪಲ್ ಚರಂಡಿಗಳು ಇತ್ಯಾದಿ ಮೇಲೆ ಒತ್ತುವರಿ**.- (1) ಯಾರೇ ಆಗಲಿ, ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಅನುಮತಿಯನ್ನು ಮುಂಚಿತವಾಗಿ ಪಡೆಯದೆ ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗಿರುವ ಯಾವುದೇ ಗ್ರಾಮಸಾರ ಚರಂಡಿಯೊಳಗೆ ಅಥವಾ ಚರಂಡಿಯೊಳಗೆ ಅಥವಾ ಅದರಿಂದ ಹೊರಗೆ ಯಾವುದೇ ಚರಂಡಿಯನ್ನು ಮಾಡಿದರೆ ಅಥವಾ ಮಾಡಿಸಿದರೆ ಅವನು ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು, ಮತ್ತು ಮುನ್ಸಿಪಲ್ ಕೌನ್ಸಿಲ್, ಬರಹದಲ್ಲಿ ನೋಟೀಸಿನ ಮೂಲಕ ಅಂಥ ವ್ಯಕ್ತಿಯನ್ನು ಅಂಥ ಚರಂಡಿಯನ್ನು ನೆಲಸಮ ಮಾಡಲು, ಮಾರ್ಪಾಟು ಮಾಡಲು, ಪುನರ್ ರಚಿಸಲು ಅಥವಾ ಸೂಕ್ತವೆಂದು ತಾನು ಪರ್ಯಾಲೋಚಿಸುವಂತೆ ಅದರ ಬಗ್ಗೆ ಅನ್ಯಥಾ ಸರಿಯಾದ ಕ್ರಮ ಕೈಗೊಳ್ಳುವಂತೆ ಅಗತ್ಯಪಡಿಸಬಹುದು.

**XXX XXX XXX**

**208. ಕೆಲವು ಮುಂಚಾಚುವಿಕೆಗಳಿಗೆ ಅನುಮತಿ ಅಗತ್ಯ**.- **XXX XXX XXX**

(2) ಅಂಥ ಯಾರೇ ಒಡೆಯನು ಅಥವಾ ಅಧಿಭೋಗದಾರನು ಹಿಂದೆ ಹೇಳಿದಂತೆ ಯಾವುದೇ ಅಂಥ ಮುಂಚಾಚುಗಳನ್ನು ಅಂಥ ಅನುಮತಿಯಿಲ್ಲದೆ ಅಥವಾ ಅಂಥ ಆದೇಶಗಳನ್ನು ಉಲ್ಲಂಘಿಸಿ ನಿರ್ಮಿಸಿದ್ದರೆ, ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಯಾವ ಮುಂಚಾಚಿರುವುದಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಅಪರಾಧಿಯೆಂದು ಅವನು ನಿರ್ಣೀತನಾಗಿದ್ದಾನೆಯೋ, ಹಿಂದೆ ಹೇಳಿದಂತಹ ಆ ಯಾವುದೇ ಮುಂಚಾಚಿರುವುದನ್ನು ತೆಗೆದು ಹಾಕಲು ಅಂಥ ಒಡೆಯನು ಅಥವಾ ಅಧಿಭೋಗದಾರನು ತಪ್ಪಿದರೆ, ಅವನು ಹಾಗೆ ತಪ್ಪಿರುವುದು ಅಥವಾ ಉಪೇಕ್ಷೆಯು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ 5 ರೂಪಾಯಿಗಳವರೆಗೆ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**211. ಬೀದಿಗಳಿಗೆ ಹೆಸರಿಡುವುದು ಮತ್ತು ಮನೆಗಳಿಗೆ ಸಂಖ್ಯೆ ಕೊಡುವುದು**.- **XX XX XX**

(3) ಯಾರೇ ವ್ಯಕ್ತಿಯು,

(ಎ) ಒಡೆಯನ ಅಥವಾ ಅಧಿಭೋಗದಾರನ ಸಮ್ಮತಿಯಿಲ್ಲದೆಯೇ ಯಾವುದೇ ಭಿತ್ತಿಪತ್ರವನ್ನು, ಪ್ರಕಟಣೆಯನ್ನು, ಪ್ರಕಟಣಾ ಪತ್ರವನ್ನು ಅಥವಾ ಇತರ ಕಾಗದವನ್ನು ಅಥವಾ ಜಾಹೀರಾತಿನ ಸಾಧನಗಳನ್ನು ಯಾವುದೇ ಕಟ್ಟಡದ, ಗೋಡೆಯ, ಫಲಕದ, ಬೇಲಿಯ ಅಥವಾ ಎಲ್ಲೆಯ, ಸ್ತಂಭದ, ದೀಪದ ಕಂಬದ ಅಥವಾ ಅಂಥವುಗಳ ಇದಿರು ಅಥವಾ ಮೇಲೆ ಅಂಟಿಸಿದರೆ; ಅಥವಾ

(ಬಿ) ಹಿಂದೆ ಹೇಳಿದಂಥ ಸಮ್ಮತಿಯಿಲ್ಲದಯೇ ಯಾವುದೇ ಅಂಥ ಕಟ್ಟಡದ, ಗೋಡೆಯ, ಫಲಕದ, ಬೇಲಿಯ, ಅಥವಾ ಎಲ್ಲೆಯ, ಸ್ತಂಭದ, ದೀಪದ ಕಂಬದ ಅಥವಾ ಅಂಥವುಗಳ ಮೇಲೆ ಸುಣ್ಣದಲ್ಲಿ ಅಥವಾ ಬಣ್ಣದಲ್ಲಿ ಅಥವಾ ಇತರ ಯಾವುದೇ ಆದ ರೀತಿಯಲ್ಲಿ ಬರೆದರೆ, ಕೊಳೆ ಮಾಡಿದರೆ, ವಿರೂಪಗೊಳಿಸಿದರೆ ಅಥವಾ ಗುರುತು ಮಾಡಿದರೆ

\- ಇಪ್ಪತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**215. ನೆಲಗಟ್ಟು ಇತ್ಯಾದಿಗಳನ್ನು ಸ್ಥಳ ತಪ್ಪಿಸುವುದು**.- (1) ಮುನ್ಸಿಪಲ್ ಕೌನ್ಸಿಲ್ ನ ಅಥವಾ ಇತರ ಕಾನೂನುಸಮ್ಮತ ಪ್ರಾಧಿಕಾರಿಯಿಂದ ಬರಹದಲ್ಲಿ ಸಮ್ಮತಿಯಿಲ್ಲದೆ ಯಾವುದೇ ಸಾರ್ವಜನಿಕ ಬೀದಿಯ ನೆಲಗಟ್ಟನ್ನು, ಮೋರಿಯನ್ನು, ಹಾಸುಗಲ್ಲುಗಳನ್ನು ಅಥವಾ ಇತರ ಸಾಮಗ್ರಿಗಳನ್ನು ಅಥವಾ ಅದರ

ಬೇಲಿಗಳನ್ನು, ಗೋಡೆಗಳನ್ನು ಅಥವಾ ಸ್ತಂಭಗಳನ್ನು ಅಥವಾ ಅದರಲ್ಲಿನ ಯಾವುದೇ ಮುನ್ಸಿಪಲ್ ದೀಪವನ್ನು, ದೀಪದ ಕಂಬವನ್ನು, ಬ್ರಾಕೆಟ್‌ನ್ನು, ವಾಟರ್ ಪೋಸ್ಟ್ ನ್ನು, ನೀರ್ಕೊಳವೆಯನ್ನು ಅಥವಾ ಇತರ ಅಂಥ ಮುನ್ಸಿಪಾಲಿಟಿಯ ಸ್ವತ್ತನ್ನು ಸ್ಥಳ ಪಲ್ಲಟ ಮಾಡುವ, ತೆಗೆದುಕೊಳ್ಳುವ ಅಥವಾ ಯಾವುದೇ ಮಾರ್ಪಾಟು ಮಾಡುವ ಯಾರೇ ವ್ಯಕ್ತಿಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವುದೇ ಸಾರ್ವಜನಿಕ ಬೀದಿಯ ಅಂಥ ಯಾವುದೇ ನೆಲಗಟ್ಟನ್ನು, ಮೋರಿಯನ್ನು, ಹಾಸುಗಲ್ಲುಗಳನ್ನು ಅಥವಾ ಇತರ ಸಾಮಗ್ರಿಗಳನ್ನು ಅಥವಾ ಬೇಲಿ ಗೋಡೆಗಳನ್ನು, ಸ್ತಂಭಗಳನ್ನು, ಮುನ್ಸಿಪಲ್ ದೀಪಗಳನ್ನು, ದೀಪಕಂಬಗಳನ್ನು, ಬ್ರಾಕೆಟ್ ಗಳನ್ನು, ವಾಟರ್ ಪೋಸ್ಟ್ ನ್ನು, ನೀರ್ಕೊಳವೆಗಳನ್ನು ಅಥವಾ ಇತರ ಮುನ್ಸಿಪಲ್ ಸ್ವತ್ತನ್ನು ಸ್ಥಳ ಪಲ್ಲಟ ಮಾಡಿದ, ತೆಗೆದುಕೊಂಡ ಅಥವಾ ಮಾರ್ಪಾಟು ಮಾಡಿದ ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್ ಗೆ ಸಮಾಧಾನವಾಗುವಂತೆ ಅದನ್ನು ಪುನಃ ಸ್ಥಾಪಿಸಲು ಅಥವಾ ಪೂರ್ವಸ್ಥಿತಿಗೆ ತರಲು, ನೋಟೀಸನ್ನು ಕೊಟ್ಟ ತರುವಾಯ, ಹಾಗೆ ಮಾಡಲು ತಪ್ಪಿದರೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಯಾವುದೇ ವೆಚ್ಚವನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ವೆಚ್ಚಗಳನ್ನು VII ನೇ ಅಧಿನಿಯಮದ ಮೇರೆಗೆ ವಸೂಲು ಮಾಡಬಹುದಾದ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲು ಮಾಡಲಾಗುವುದೋ ಅದೇ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

**XXX XXX XXX**

**217. ದುರಸ್ತಿ ಇತ್ಯಾದಿಗಳನ್ನು ಮಾಡುವಾಗ ಹಲಗೆ ಬೇಲಿಗಳನ್ನು ಹಾಕತಕ್ಕದ್ದು.- XX XX XX**

(2) ಈ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯದ ದಿನಾಂಕದ ತರುವಾಯ ಮುಂದುವರಿಯುವಂಥ ಉಲ್ಲಂಘನೆಗೆ ಸಂದರ್ಭಾನುಸಾರ ಪ್ರತಿಯೊಂದು ಹಗಲಿಗೆ ಅಥವಾ ರಾತ್ರಿಗೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**219. ಅನುಮತಿಯಿಲ್ಲದೆ ಬೀದಿಯಲ್ಲಿ ಮರಮುಟ್ಟುಗಳನ್ನು ಇಡತಕ್ಕದ್ದಲ್ಲ ಅಥವಾ ರಂಧ್ರ ಮಾಡತಕ್ಕದ್ದಲ್ಲ.- XX XX XX**

(2) ಉಪಪ್ರಕರಣ (1) ರ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಅಂಥ ಉಲ್ಲಂಘನೆ ಮುಂದುವರಿಯುವ ಸಂದರ್ಭಾನುಸಾರ ಪ್ರತಿಯೊಂದು ಹಗಲಿಗೆ ಅಥವಾ ರಾತ್ರಿಗೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**225. ಗ್ರಾಮಸಾರ ಇತ್ಯಾದಿಯನ್ನು ಹೊರಬಿಡುವುದು, ಇತ್ಯಾದಿ.-** ತನ್ನ ನಿಯಂತ್ರಣದಲ್ಲಿರುವ ಯಾವುದೇ ಕಟ್ಟಡದಿಂದ ಅಥವಾ ಖಾಲಿಭೂಮಿಯಿಂದ ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಅನುಮತಿಯಿಲ್ಲದೆ ಯಾವುದೇ ಬಚ್ಚಲುಗುಂಡಿಯ ಅಥವಾ ಗ್ರಾಮಸಾರ ಚರಂಡಿಯ ನೀರನ್ನು ಅಥವಾ ಅಸಹ್ಯಕರವಾಗಿರುವ ಅಥವಾ ಅಸಹ್ಯಕರವಾಗಬಹುದಾದ ಸಂಭವವಿರುವಂಥ ಯಾವುದೇ ಇತರ ದ್ರವವನ್ನು ಅಥವಾ ಇತರ ವಸ್ತುವನ್ನು ಯಾವುದೇ ಬೀದಿಯಲ್ಲಿ ಅಥವಾ ಬಹಿರಂಗ ಜಾಗದಲ್ಲಿ ಹರಿಯುವಂತೆ, ಬಸಿದುಹೋಗುವಂತೆ, ಎಸೆಯುವಂತೆ ಅಥವಾ ಮೇಲೆ ಹಾಕಲು ಅಥವಾ ಯಾವುದೇ ಹೊರಗೋಡೆಯ ಮೂಲಕ ತೊಯ್ದುಹೋಗುವಂತೆ ಅಥವಾ ಯಾವುದೇ ಬೀದಿಯಲ್ಲಿ, ಬೀದಿಯ ಮೇಲೆ ಚರಂಡಿಯೊಳಕ್ಕೆ ಯಾವುದೇ ಗ್ರಾಮಸಾರ ಚರಂಡಿಯಿಂದ ಅಥವಾ ಶೌಚಾಲಯದಿಂದ ಯಾವುದೇ ಅಸಹ್ಯಕರವಾದ ವಸ್ತುವನ್ನು ಹರಿಯುವಂತೆ, ಬಸಿಯುವಂತೆ ಅಥವಾ ಎಸೆಯುವಂತೆ ಮಾಡುವ ಅಥವಾ ಅವಕಾಶ ಕೊಡುವ ಅಥವಾ ಅಂಥ ಅನುಮತಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಷರತ್ತನ್ನು ಪಾಲಿಸಲು ತಪ್ಪುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**226. ಹೊಲಸು ಇತ್ಯಾದಿಯನ್ನು ತೆಗೆದುಹಾಕದೇ ಇರುವುದು.-** ಸಗಣಿಯನ್ನು, ಮೂಳೆಗಳನ್ನು, ಬೂದಿಯನ್ನು, ಮಲವನ್ನು, ಹೊಲಸನ್ನು ಅಥವಾ ಯಾವುದೇ ಹಾನಿಕಾರಕ ಅಥವಾ ಅಸಹ್ಯಕಾರಿ ವಸ್ತುವನ್ನು ಇಪ್ಪತ್ನಾಲ್ಕು ಗಂಟೆಗಳಿಗಿಂತ ಹೆಚ್ಚಾಗಿ ಯಾವುದೇ ಧಾರಕದಲ್ಲಿ ಹೊರತು ಅನ್ಯಥಾ ಕಟ್ಟಡದಲ್ಲಿ ಅಥವಾ

ಖಾಲಿಭೂಮಿ ಯಲ್ಲಿ ಅಥವಾ ಅದರ ಮೇಲೆ ಇಡುವ ಅಥವಾ ಇಟ್ಟುಕೊಳ್ಳಲು ಅವಕಾಶ ಕೊಡುವ ಅಥವಾ ಅಂಥ ಧಾರಕವನ್ನು ಹೊಲಸು ಅಥವಾ ಹಾನಿಕಾರಕ ಸ್ಥಿತಿಯಲ್ಲಿಡಲು ಆಸ್ಪದಕೊಡುವ ಅಥವಾ ಅಂಥ ಧಾರಕದಿಂದ ಹೊಲಸನ್ನು ತೆಗೆದುಹಾಕಲು ಮತ್ತು ಅದನ್ನು ಸ್ವಚ್ಛಗೊಳಿಸಲು ಮತ್ತು ಶುದ್ಧಗೊಳಿಸಲು ಸೂಕ್ತಸಾಧನಗಳನ್ನು ಮತ್ತು ಅದನ್ನು ಸ್ವಚ್ಛಗೊಳಿಸಿ, ಬಳಸಲು ನಿರ್ಲಕ್ಷಿಸುವ ಅಥವಾ ಅಂಥ ಕಟ್ಟಡದಲ್ಲಿ ಅಥವಾ ಖಾಲಿಭೂಮಿಯಲ್ಲಿ ಅಥವಾ ಅದರ ಮೇಲೆ ಉಪದ್ರವವುಂಟು ಮಾಡುವ ರೀತಿಯಲ್ಲಿ ಯಾವುದೇ ಪ್ರಾಣಿಯನ್ನು ಸಾಕಲು ಅಥವಾ ಸಾಕಲು ಅವಕಾಶ ಮಾಡಿಕೊಡುವ ಯಾವುದೇ ಕಟ್ಟಡದ ಅಥವಾ ಖಾಲಿಭೂಮಿಯ ಒಡೆಯನಾಗಿರುವ ಅಥವಾ ಅಧಿಭೋಗದಾರನಾಗಿರುವ ಯಾರೇ ಆಗಲಿ ಅವನು ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಮತ್ತು ಮೊದಲ ಬಾರಿಗೆ ಅಪರಾಧವು ನಿರ್ಣಯವಾದ ದಿನಾಂಕದ ತರುವಾಯ ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೂ ಅಂಥ ಅಪರಾಧಿಯು ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**228. ಹೊಲಸು ಕಟ್ಟಡಗಳು, ಇತ್ಯಾದಿ.-** (1) ಯಾವುದೇ [1][ಕಟ್ಟಡವು ಅಥವಾ ಖಾಲಿಭೂಮಿಯು][1] ವಾಸ ಯೋಗ್ಯವಾದುದಾಗಿರಲಿ ಅಥವಾ ಅನ್ಯಥಾ ಇರಲಿ ಆ ಯಾವುದೇ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಒಡೆಯನು ಅಥವಾ ಅಧಿಭೋಗದಾರನಾಗಿರುವ ಯಾರೇ ಆಗಲಿ ಅದನ್ನು ಹೊಲಸು ಮತ್ತು ಅನಾರೋಗ್ಯ ಸ್ಥಿತಿಯಲ್ಲಿಡಲು ಆಸ್ಪದ ಮಾಡಿಕೊಟ್ಟಿದ್ದರೆ ಅಥವಾ ನೆರೆಹೊರೆಯಲ್ಲಿ ವಾಸಿಸುವ ವ್ಯಕ್ತಿಗಳಿಗೆ ಅದು ಉಪದ್ರವಕಾರಿಯಾಗಿದೆಯೆಂದು ಅಥವಾ ಪಾಪಾಸುಕಳ್ಳಿ ಅಥವಾ ಗಬ್ಬು ನಾತದ ಮತ್ತು ಹಾನಿಕಾರಕ ಸಸ್ಯಗಳು ನಿಬಿಡವಾಗಿ ಬೆಳೆಯಲು ಆಸ್ಪದ ಮಾಡಿಕೊಡಲಾಗಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಮತ್ತು ಅದನ್ನು ಸ್ವಚ್ಛಗೊಳಿಸಲು, ಬರಿದು ಮಾಡಲು ಅಥವಾ ಅನ್ಯಥಾ ಅದನ್ನು ಸರಿಯಾದ ಸ್ಥಿತಿಯಲ್ಲಿ ಇಡಲು ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ನೋಟೀಸ್ ತಲುಪಿದ ತರುವಾಯವೂ ಯುಕ್ತ ಕಾಲದೊಳಗೆ ಅಂಥ ನೋಟೀಸಿನಲ್ಲಿ ಹೇಳಿರುವುದನ್ನು ಪಾಲಿಸದೇ ಇರುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಸದರಿ ನೋಟೀಸನ್ನು ಪಾಲಿಸಲು ತಪ್ಪುವುದು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**241. ಹೊಗೆಯ ಬಳಕೆ.- XX XX XX**

(2) ಅಂಥ ನಿರ್ದೇಶನದ ತರುವಾಯ ಯಾರೇ ವ್ಯಕ್ತಿಯು ಹಾಗೆ ನಿರ್ಮಿಸದ, ಸೇರಿಸದ ಅಥವಾ ಮಾರ್ಪಾಟು ಮಾಡದ ಅಂಥ ಕುಲುಮೆಯನ್ನು ಬಳಸಿದರೆ ಅಥವಾ ಬಳಸಲು ಅವಕಾಶ ಕೊಟ್ಟರೆ ಅಥವಾ ಅದರಿಂದ ಹೊಮ್ಮುವ ಹೊಗೆಯನ್ನು ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಹೀರಿಕೊಳ್ಳದ ಅಥವಾ ಬತ್ತಿಸದ ಅಂಥ ಯಾವುದೇ ಕುಲುಮೆಯನ್ನು ನಿರ್ಲಕ್ಷ್ಯದಿಂದ ಬಳಸಿದರೆ ಅಥವಾ ಬಳಸಲು ಅವಕಾಶ ನೀಡಿದರೆ ಸದರಿ ಕೆಲಸಗಳ ಅಥವಾ ಕಟ್ಟಡಗಳ ಒಡೆಯನಾದ ಅಥವಾ ಅಧಿಭೋಗದಾರನಾದ ಅಥವಾ ಅಂಥ ಒಡೆಯನಿಂದ ಅಥವಾ ಅಧಿಭೋಗದಾರನಿಂದ ಅದರ ನಿರ್ವಹಣೆಗಾಗಿ ನಿಯೋಜಿತನಾದ ಏಜೆಂಟ್‌ನಾದ ಅಥವಾ ಇತರ ವ್ಯಕ್ತಿಯಾಗಿರುವ ಹಾಗೆ ಅಪರಾಧ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಸಂಚಾರದ ಉದ್ದೇಶಕ್ಕಾಗಿ ಯಾವುದೇ ರೈಲ್ವೆ ಅಥವಾ ರಸ್ತೆಗಳ ದುರಸ್ತಿಗಾಗಿ ಬಳಸಿದ ಸ್ವಯಂಚಾಲಿತ ಇಂಜಿನ್‌ಗಳಿಗೆ ಅನ್ವಯವಾಗುವುದೆಂದು ಗ್ರಹಿಸತಕ್ಕದ್ದಲ್ಲ.

**XXX XXX XXX**

**243. ಮಾರುಕಟ್ಟೆಗಳು, ಕಸಾಯಿಖಾನೆಗಳು ಮತ್ತು ಕೆಲವು ವ್ಯವಹಾರಗಳಿಗೆ ಲೈಸೆನ್ಸ್‌ಗಳನ್ನು ಕೊಡುವುದು.- XX XX XX**

(2) ನಿರ್ದೇಶನಕ್ಕೆ ತದ್ವಿರುದ್ಧವಾಗಿ ಅಥವಾ (1)ನೇ ಉಪಪ್ರಕರಣವು ಅಗತ್ಯಪಡಿಸಿದ ಲೈಸೆನ್ಸ್ ನ್ನು ಪಡೆಯದೆ ಅಥವಾ ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸಿ ಅಥವಾ ಅದರ ಅಮಾನತ್ತಿನ ಅವಧಿಯಲ್ಲಿ ಯಾವುದೇ ಸ್ಥಳವನ್ನು ಬಳಸುವ ಅಥವಾ ಬಳಸಲು ಅನುಮತಿಸುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಉಪಪ್ರಕರಣ (2) ರ ಮೇರೆಗೆ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ, ಅಪರಾಧ ನಿರ್ಣಯವು ಚಾಲ್ತಿಯಲ್ಲಿರುವಾಗ, ಮ್ಯಾಜಿಸ್ಟ್ರೇಟ್ ನು ಮುನ್ಸಿಪಲ್ ಕೌನ್ಸಿಲ್‌ಗೆ ಅರ್ಜಿ ಸಲ್ಲಿಸಿದಾಗ, ಆದರೆ ಅನ್ಯಥಾ ಅಲ್ಲದೆ, ಅಂಥ ಸ್ಥಳವನ್ನು ಮುಚ್ಚುವಂತೆ ಆದೇಶಿಸಬಹುದು ಮತ್ತು ಆ ತರುವಾಯ ಅಂಥ ಸ್ಥಳವನ್ನು ಹಾಗೆ ಬಳಸುವುದನ್ನು ತಡೆಯಲು ಜನರನ್ನು ನೇಮಿಸತಕ್ಕದ್ದು ಅಥವಾ ಇತರ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು; ಮತ್ತು ಆ ಸ್ಥಳವನ್ನು ಮುಚ್ಚತಕ್ಕದ್ದೆಂದು ಹಾಗೆ ಆದೇಶಿಸಿದ ತರುವಾಯ ಅದನ್ನು ಹಾಗೆ ಬಳಸುವ ಅಥವಾ ಬಳಸಲು ಅನುಮತಿಸುವ ಪ್ರತಿಯೊಬ್ಬ ವ್ಯಕ್ತಿಯು ಮುಚ್ಚತಕ್ಕದ್ದೆಂದು ಹಾಗೆ ಆದೇಶಿಸಿದ ತರುವಾಯವೂ ಆ ಸ್ಥಳವನ್ನು ಅವನು ಹಾಗೆ ಬಳಸುವುದನ್ನು ಮುಂದುವರಿಸುವ ಅಥವಾ ಅದರ ಬಳಕೆಗೆ ಅನುಮತಿಸುವಂಥ ಅವಧಿಯ ಪ್ರತಿಯೊಂದು ದಿನಕ್ಕೆ ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**256. ಲೈಸೆನ್ಸ್ ಪಡೆಯದೆ ಕೆಲವು ಉದ್ದೇಶಗಳಿಗಾಗಿ ಆವರಣವನ್ನು ಬಳಸತಕ್ಕದ್ದಲ್ಲ**:- **XX XX XX**

(6) ಉಪಪ್ರಕರಣ (1) ರ ಅಥವಾ (2) ರ ಅಥವಾ (3) ರ ಅಥವಾ 324ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ (iv)ನೇ ಉಪಖಂಡದ ಮೇರೆಗೆ ರಚಿಸಿದ ಯಾವುದೇ ಬೈಲಾವನ್ನು ಉಲ್ಲಂಘಿಸಿ ಯಾವುವೇ ಆವರಣಗಳನ್ನು ಉಪಯೋಗಿಸುವ ಯಾರೇ ಆಗಲಿ ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯವೂ ಅಂಥ ಉಲ್ಲಂಘನೆಯು ಮುಂದುವರಿದರೆ ಪ್ರತಿದಿನಕ್ಕೆ ನಲವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**260. ಕೆಲಸಗಾರರನ್ನು ಕರೆಯಲು ಅಥವಾ ಕಳುಹಿಸಲು ಸೈರನ್ ಅಥವಾ ಶಿಳ್ಳೆಯ ಬಳಕೆ:- XX XX XX**

(3) ಹಿಂದೆ ಹೇಳಿದಂತೆ ಯಾವುದೇ ಅಂಥ ಶಿಳ್ಳೆ ಅಥವಾ ತುತ್ತೂರಿಯನ್ನು ಅಂಥ ಲೈಸೆನ್ಸನ್ನು ಪಡೆಯದೆ ಅಥವಾ ಅದರ ಯಾವುದೇ ಷರತ್ತಿನ ಉಲ್ಲಂಘನೆಯಲ್ಲಿ ಅಥವಾ ಅದನ್ನು ಹಿಂತೆಗೆದುಕೊಂಡ ತರುವಾಯ ಉಪಯೋಗಿಸುವ ಅಥವಾ ಪ್ರಯೋಗಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**266. ಅಧಿನಿಯಮದ ಜಾರಿಯನ್ನು ಯಾರೇ ಸ್ವಾಧೀನದಾರನು ವಿರೋಧಿಸಿದರೆ ವ್ಯವಹರಣೆಗಳು.-** ಯಾವುದೇ ಕಟ್ಟಡದ ಅಥವಾ ಖಾಲಿಭೂಮಿಯ ಸ್ವಾಧೀನದಾರನು ಅದರ ಒಡೆಯನನ್ನು ಅಂಥ ಕಟ್ಟಡಕ್ಕೆ ಅಥವಾ ಖಾಲಿಭೂಮಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು, ಅಂಥ ಸ್ವಾಧೀನದಾರನಿಗೆ ಒಡೆಯನು ಆ ಉಪಬಂಧಗಳನ್ನು ಜಾರಿಗೆ ತರುವ ತನ್ನ ಉದ್ದೇಶದ ನೋಟೀಸ್ ನ್ನು ಕೊಟ್ಟ ತರುವಾಯವೂ ಜಾರಿಗೆ ತರುವುದನ್ನು ತಡೆಗಟ್ಟಿದರೆ, ಯಾರೇ ಮ್ಯಾಜಿಸ್ಟ್ರೇಟ್ ನು ಅದು ರುಜುವಾತಾಗಿರುವುದನ್ನು ಕಂಡುಕೊಂಡ ಮೇಲೆ ಮತ್ತು ಒಡೆಯನು ಅರ್ಜಿ ಸಲ್ಲಿಸಿದಾಗ ಅಂಥ ಕಟ್ಟಡ ಅಥವಾ ಖಾಲಿಭೂಮಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಎಲ್ಲ ಕೆಲಸಗಳನ್ನು ಮಾಡಿಸುವ ಸಲುವಾಗಿ ಒಡೆಯನಿಗೆ ಅವಕಾಶ ಮಾಡಿಕೊಡಲು ಅಂಥ ಸ್ವಾಧೀನದಾರರನ್ನು ಅಗತ್ಯಪಡಿಸುವ ಬರಹದಲ್ಲಿನ ಆದೇಶವನ್ನು ಮಾಡಬಹುದು ಮತ್ತು ಸೂಕ್ತವೆಂದು ಅವನು ಭಾವಿಸಿದರೆ ಅಂಥ ಅರ್ಜಿಗೆ ಅಥವಾ ಆದೇಶಕ್ಕೆ ಸಂಬಂಧಿಸಿದ ಖರ್ಚುಗಳನ್ನು ಒಡೆಯನಿಗೆ ಸಂದಾಯ ಮಾಡಲು ಸ್ವಾಧೀನದಾರನಿಗೆ ಆದೇಶ ಮಾಡಬಹುದು ಮತ್ತು ಆದೇಶದ ದಿನಾಂಕದಿಂದ ಎಂಟು ದಿವಸಗಳ ಮುಕ್ತಾಯದ ತರುವಾಯ ಅಂಥ ಆ ಸ್ವಾಧೀನದಾರನು ಅಂಥ ಕೆಲಸವನ್ನು ಮಾಡಿಸಲು ಅಂಥ ಒಡೆಯನಿಗೆ ಅವಕಾಶ ಕೊಡಲು ನಿರಾಕರಿಸುವುದನ್ನು ಮುಂದುವರಿಸಿದರೆ ಅಂಥ ಸ್ವಾಧೀನದಾರನು ಅವನು ಹಾಗೆ ನಿರಾಕರಿಸಲು ಮುಂದುವರಿಸುವಂಥ ಕಾಲದಲ್ಲಿ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಒಡೆಯನು ಅಂಥ ನಿರಾಕರಣೆಯು ಮುಂದುವರಿಯುತ್ತಿರುವ ಅವಧಿಯಲ್ಲಿ ಅಂಥ ಕೆಲಸಗಳನ್ನು ಮಾಡಿಸಲು ಅವನು ತಪ್ಪಿದ್ದರಿಂದಾಗಿ ಅವನು ಅನ್ಯಥಾ ಗುರಿಯಾಗಿರಬಹುದಾಗಿದ್ದಂಥ ಯಾವುದೇ ದಂಡನೆಗಳಿಗೆ ಒಳಗಾಗದಂತೆ ವಿಮುಕ್ತನಾಗತಕ್ಕದ್ದು.

**XXX XXX XXX**

## ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ ಉದ್ಧೃತ ಭಾಗ

**XXX XXX XXX**

**424. ಕೆಲವು ಉಪವಿಧಿಗಳಿಗೆ ಪೂರ್ವಾನ್ವಯ ಪರಿಣಾಮವನ್ನು ಕೊಡಲು ಅಧಿಕಾರ ಮತ್ತು ಉಲ್ಲಂಘನೆಗಾಗಿ ದಂಡನೆಗಳು.- XX XX XX**

(2) 423ನೇ ಪ್ರಕರಣ ಮತ್ತು ಈ ಪ್ರಕರಣದ ಅಡಿಯಲ್ಲಿ ಯಾವುದೇ ಉಪವಿಧಿಯನ್ನು ರಚಿಸುವಾಗ, ನಿಗಮವು, ಅದರ ಉಲ್ಲಂಘನೆಯು.-

(ಎ) ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿಯುತ್ತಿರುವ ಉಲ್ಲಂಘನೆ ಸಂದರ್ಭದಲ್ಲಿ, ಮೊದಲನೆಯ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಉಲ್ಲಂಘನೆ ಮುಂದುವರೆಯುವ ಅವಧಿಯಲ್ಲಿ ಪ್ರತಿದಿನಕ್ಕೆ ಮೂರು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ; ಅಥವಾ

(ಬಿ) ಅಂಥ ಉಲ್ಲಂಘನೆಯನ್ನು ಮುಂದುವರಿಸದಿರಲು ಕಮೀಷನರನಿಂದ ನೋಟೀಸನ್ನು ಸ್ವೀಕರಿಸಿದ ತರುವಾಯ ಉಲ್ಲಂಘನೆಯು ಮುಂದುವರಿಯುವ ಅವಧಿಯಲ್ಲಿ ಪ್ರತಿದಿನಕ್ಕೆ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು.

**XXX XXX XXX**

**431. ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಿಗೆ ಸಂಬಂಧಿಸಿದ ಸಾಮಾನ್ಯ ಉಪಬಂಧ.-**(1) ಯಾರೇ ಆದರೂ,-

(ಎ) XIನೇ ಅನುಸೂಚಿಯ ಮೊದಲನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಈ ಅಧಿನಿಯಮದ ಪ್ರಕರಣಗಳಲ್ಲಿ ಯಾವುದೇ ಪ್ರಕರಣದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದರೆ;

(ಬಿ) ಯಾವುದೇ ನಿಯಮವನ್ನು ಸದರಿ ಪ್ರಕರಣಗಳ ಯಾವುದೇ ಪ್ರಕರಣದ ಅಥವಾ ನಿಯಮಗಳ ಮೇರೆಗೆ ಮಾಡಿದ ಆದೇಶವನ್ನು ಉಲ್ಲಂಘಿಸಿದರೆ; ಅಥವಾ

(ಸಿ) ಸದರಿ ಪ್ರಕರಣಗಳಲ್ಲಿ ಯಾವುದೇ ಪ್ರಕರಣದ ಅಥವಾ ನಿಯಮಗಳ ಉಪಬಂಧಗಳ ಮೇರೆಗೆ ಅಥವಾ ಅವುಗಳ ಅನುಸಾರವಾಗಿ ತನಗೆ ಕಾನೂನುಬದ್ಧವಾಗಿ ನೀಡಿದ ಯಾವುದೇ ನಿರ್ದೇಶನವನ್ನು ಅಥವಾ ತನಗೆ ಕಾನೂನುಬದ್ಧವಾಗಿ ನೀಡಿದ ಯಾವುದೇ ಕಡ್ಡಾಯ ಸೂಚನೆಯನ್ನು ಪಾಲಿಸಲು ತಪ್ಪಿದರೆ

- ಅಪರಾಧ ನಿರ್ಣಯವಾದ ಮೇಲೆ, ಸದರಿ ಅನುಸೂಚಿಯ ಮೂರನೇ ಅಂಕಣದಲ್ಲಿ ಆ ಬಗ್ಗೆ ನಮೂದಿಸಿದ ಮೊಬಲಗಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**ಅನುಸೂಚಿ – XI**

**ಸಾಮಾನ್ಯದಂಡಗಳು**

**[431ನೇಪ್ರಕರಣವನ್ನುನೋಡಿ]**

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 80 | (1) | ಹಿತಾಸಕ್ತಿ ಹೊಂದಿರುವ ಕೌನ್ಸಿಲರ್ ಚರ್ಚೆಯಲ್ಲಿ ಭಾಗವಹಿಸುವುದು ಅಥವಾ ಮತದಾನ ಮಾಡುವುದು | ಎರಡುನೂರು ರೂಪಾಯಿಗಳು |
| 114 | (2) ಮತ್ತು (3) | ಸ್ವಾಮ್ಯದ ವರ್ಗಾವಣೆಯ ಬಗ್ಗೆ ನೋಟೀಸು ಕೊಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 188 | | ನೀರು ಸರಬರಾಜಿಗೆ ಸಂಬಂಧಿಸಿದ ಆವರಣದ ಮೇಲೆ ಅತಿಕ್ರಮ ಪ್ರವೇಶ ಮಾಡುವುದು | ಐವತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 190 | | ಉಪವಿಧಿಗಳಿಗೆ ಅನುಗುಣವಾಗಿ ಗೃಹ ಸಂಪರ್ಕರಗಳನ್ನು ನಿರ್ವಹಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 192 | (2) | ಸಮರ್ಪಕ ನೀರಿನ ಸರಬರಾಜಿಲ್ಲದ ಮನೆಯನ್ನು ಅಧಿಭೋಗಿಸುವುದು ಅಥವಾ ಅಧಿಭೋಗಿಸಲು ಅವಕಾಶ ನೀಡುವುದು. | ಐವತ್ತು ರೂಪಾಯಿಗಳು |
| 192 | (3) | ಗೃಹ ಸಂಪರ್ಕ ಕಲ್ಪಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 194 | | ಗೃಹಬಳಕೆಯ ಉದ್ದೇಶಕ್ಕಾಗಿ ಸರಬರಾಜು ಮಾಡಿದ ನೀರನ್ನು ಗೃಹೇತರ ಉದ್ದೇಶಗಳಿಗೆ ಬಳಸುವುದು | ಒಂದು ನೂರು ರೂಪಾಯಿಗಳು |
| 208 | | ನೀರನ್ನು ಪೋಲು ಮಾಡುವುದು ಅಥವಾ ದುರುಪಯೋಗ ಮಾಡುವುದು | ಐವತ್ತು ರೂಪಾಯಿಗಳು |
| 209 | | ಪ್ರವೇಶಕ್ಕೆ ನಿರಾಕರಿಸುವುದು, ಇತ್ಯಾದಿ | ಒಂದು ನೂರು ರೂಪಾಯಿಗಳು |
| 211 | (1) | ನೀರಿನ ಪೈಪುಗಳಿಗೆ ಹಾನಿಯಾಗುವ ಅಥವಾ ಅವುಗಳಲ್ಲಿನ ನೀರು ಕಲುಷಿತಗೊಳ್ಳುವ ಹಾಗೆ ನೀರಿನ ಪೈಪನ್ನು ಹಾಕುವುದು ಇತ್ಯಾದಿ | ಒಂದು ನೂರು ರೂಪಾಯಿಗಳು |
| 218 | (1) | ಲೈಸೆನ್ಸ್ ಪಡೆದಿರುವ ಕೊಳಾಯಿಗಾರರನ್ನು ಹೊರತುಪಡಿಸಿ ಬೇರೆ ವ್ಯಕ್ತಿಯಿಂದ ಕೆಲಸದ ನಿರ್ವಹಣೆ | ಎರಡುನೂರು ರೂಪಾಯಿಗಳು |
| 218 | (2) | ನಿಯೋಜಿತನಾದ ಲೈಸೆನ್ಸ್ ಪಡೆದ ಕೊಳಾಯಿಗಾರನ ಹೆಸರನ್ನು ತಿಳಿಸುವಂತೆ ಅಗತ್ಯಪಡಿಸಿದಾಗ ತಿಳಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 218 | (6) | ಲೈಸೆನ್ಸ್ ಪಡೆದಿರುವ ಕೊಳಾಯಿಗಾರನು ನಿಯಮಿಸಿದ ಚಾರ್ಜುಗಳಿಗಿಂತ ಹೆಚ್ಚಾಗಿ ತಗಾದೆ ಮಾಡುವುದು. | ಒಂದು ನೂರು ರೂಪಾಯಿಗಳು |
| 218 | (8) | ಲೈಸೆನ್ಸ್ ಪಡೆದ ಕೊಳಾಯಿಗಾರನು ವಿನಿಯಮಗಳನ್ನು ಉಲ್ಲಂಘಿಸುವುದು ಅಥವಾ ಕೆಲಸವನ್ನು ಅಜಾಗರೂಕತೆಯಿಂದ ಅಥವಾ ನಿರ್ಲಕ್ಷ್ಯದಿಂದ ನಿರ್ವಹಿಸುವುದು | ಒಂದು ನೂರು ರೂಪಾಯಿಗಳು |
| 219 | | ನೀರು ಸರಬರಾಜು ಕೊಳವೆ ಮಾರ್ಗಗಳಿಗೆ ಸಂಬಂಧಿಸಿದಂತೆ ನಿಷೇಧಿಸಿರುವ ಕಾರ್ಯಗಳನ್ನು ಬುದ್ಧಿಪೂರ್ವಕವಾಗಿ ಅಥವಾ ನಿರ್ಲಕ್ಷ್ಯತೆಯಿಂದ ಮಾಡುವುದು | ಒಂದು ನೂರು ರೂಪಾಯಿಗಳು |
| 223 | | ನಗರಪಾಲಿಕೆಯ ಒಳಚರಂಡಿಗಳೊಳಕ್ಕೆ ಅಥವಾ ಚರಂಡಿಗಳೊಳಕ್ಕೆ ಅಥವಾ ನಗರಪಾಲಿಕೆಯ ಒಳಚರಂಡಿಗಳೊಂದಿಗೆ ಸಂಪರ್ಕ ಹೊಂದಿರುವ ಒಳಚರಂಡಿಗಳೊಳಕ್ಕೆ ವಸ್ತುಗಳನ್ನು ಹರಿಸುವುದು | ಒಂದು ಸಾವಿರ ರೂಪಾಯಿಗಳು |
| 224 | (2) | ನೋಟೀಸು ನೀಡದೆ ಖಾಸಗಿ ಚರಂಡಿಗಳನ್ನು ನಗರಪಾಲಿಕೆಯ ಒಳಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | ಐವತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 225 | (2) ಮತ್ತು (4) | ಚರಂಡಿ ವ್ಯವಸ್ಥೆಯಿಲ್ಲದ ಆವರಣಗಳಿಗೆ ಚರಂಡಿ ವ್ಯವಸ್ಥೆ ಕಲ್ಪಿಸಲು ನೀಡಿದ ಸೂಚನೆಯನ್ನು ಪಾಲಿಸದಿರುವುದು | ಒಂದು ನೂರು ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಹಾಗೂ ಐದುನೂರು ರೂಪಾಯಿಗಳಿಗೆ ಹೆಚ್ಚಲ್ಲದ ಜುಲ್ಮಾನೆ |
| 226 | | ಚರಂಡಿಗಳಿಲ್ಲದೆ ಹೊಸ ಆವರಣದ ನಿರ್ಮಾಣ | ಒಂದು ಸಾವಿರ ರೂಪಾಯಿಗಳು |
| 227 | | ಆವರಣಗಳ ಯಾವುದೇ ಸಮೂಹಕ್ಕೆ ಅಥವಾ ವಿಭಾಗಕ್ಕೆ ಚರಂಡಿ ವ್ಯವಸ್ಥೆಯ ಕಾಮಗಾರಿಗಳ ನಿರ್ವಹಣೆಗಾಗಿ ನೀಡಿದ ಸೂಚನೆಯನ್ನು ಪಾಲಿಸದಿರುವುದು | ಒಂದು ನೂರು ರೂಪಾಯಿಗಳು |
| 228 | | ಕೆಲವು ಸಂದರ್ಭಗಳಲ್ಲಿ ಖಾಸಗಿ ಚರಂಡಿಗಳನ್ನು ಮುಚ್ಚಲು ಅಥವಾ ಅವುಗಳ ಬಳಕೆಯನ್ನು ಮಿತಿಗೊಳಿಸಲು ನೀಡಿದ ನಿರ್ದೇಶನವನ್ನು ಪಾಲಿಸದಿರುವುದು | ಐವತ್ತು ರೂಪಾಯಿಗಳು |
| 229 | | ಚರಂಡಿಯ ಮಾಲೀಕನನ್ನು ಹೊರತುಪಡಿಸಿ ಬೇರೆ ವ್ಯಕ್ತಿಯು ಅದನ್ನು ಬಳಸುವ ಬಗ್ಗೆ ಆಯುಕ್ತರ ಆದೇಶವನ್ನು ಪಾಲಿಸದಿರುವುದು | ಐವತ್ತು ರೂಪಾಯಿಗಳು |
| 230 | | ಒಳಚರಂಡಿಯನ್ನು ಮತ್ತು ಮಳೆನೀರಿನ ಚರಂಡಿಗಳನ್ನು ಪ್ರತ್ಯೇಕವಾಗಿ ಇಡುವುದಕ್ಕಾಗಿ ನೀಡಿದ ಸೂಚನೆಯನ್ನು ಪಾಲಿಸದಿರುವುದು | ಐವತ್ತು ರೂಪಾಯಿಗಳು |
| 231 | | ಅಂಗಳ ಮುಂತಾದವುಗಳಿಗೆ ನೆಲಗಟ್ಟು ಮಾಡುವುದಕ್ಕಾಗಿ ನೀಡಿದ ಸೂಚನೆಯನ್ನು ಪಾಲಿಸದಿರುವುದು | ಐವತ್ತು ರೂಪಾಯಿಗಳು |
| 233 | | ಲಿಖಿತ ಅನುಮತಿ ಇಲ್ಲದೆ ಒಳಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | ಎರಡುನೂರು ರೂಪಾಯಿಗಳು |
| 236 | (4) | ಪೈಪನ್ನು ಅಥವಾ ಚರಂಡಿಯನ್ನು ಮುಚ್ಚಲು, ತೆಗೆದುಹಾಕಲು ಅಥವಾ ಮಾರ್ಗವನ್ನು ಬದಲಾಯಿಸಲು ನೀಡಿದ ಸೂಚನೆಯನ್ನು ಪಾಲಿಸದಿರುವುದು | ಐವತ್ತು ರೂಪಾಯಿಗಳು |
| 240 | (1) | ಲೈಸೆನ್ಸ್ ಪಡೆದ ಕೊಳಾಯಿಗಾರರನ್ನು | ಎರಡುನೂರು ರೂಪಾಯಿಗಳು |
| 240 (2) | 218 (2)ನೇ ಪ್ರಕರಣದೊಂದಿಗೆ ಓದಿಕೊಂಡಂತೆ | ನಿಯೋಜಿಸಿಕೊಂಡ ಲೈಸೆನ್ಸ್ ಪಡೆದ ಕೊಳಾಯಿಗಾರನ ಹೆಸರನ್ನು ತಿಳಿಸುವಂತೆ ಅಗತ್ಯಪಡಿಸಿದಾಗ ತಿಳಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 240 (2) | 218(6)ನೇ ಪ್ರಕರಣ ದೊಂದಿಗೆ ಓದಿಕೊಂಡಂತೆ | ಲೈಸೆನ್ಸ್ ಪಡೆದ ಕೊಳಾಯಿಗಾರರು ನಿಯಮಿಸಿದ ಚಾರ್ಜಿಗಿಂತ ಹೆಚ್ಚಿಗೆ ತಗಾದೆ ಮಾಡುವುದು | ಒಂದು ನೂರು ರೂಪಾಯಿಗಳು |
| 240 (2) | 218 (8)ನೇ ಪ್ರಕರಣ ದೊಂದಿಗೆ ಓದಿಕೊಂಡಂತೆ | ಲೈಸೆನ್ಸ್‌ಪಡೆದ ಕೊಳಾಯಿಗಾರರು ವಿನಿಯಮಗಳನ್ನು ಉಲ್ಲಂಘಿಸುವುದು ಅಥವಾ ಕಾಮಗಾರಿಯನ್ನು ಅಜಾಗರೂಕತೆಯಿಂದ ಅಥವಾ ನಿರ್ಲಕ್ಷ್ಯತೆಯಿಂದ ಕಾರ್ಯಗತ ಗೊಳಿಸುವುದು ಇತ್ಯಾದಿ | ಒಂದು ನೂರು ರೂಪಾಯಿಗಳು |
| 241 | | ಒಳಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಷೇಧಿಸಿರುವ ಕಾರ್ಯಗಳನ್ನು ಬುದ್ಧಿಪೂರ್ವಕವಾಗಿ ಅಥವಾ ನಿರ್ಲಕ್ಷ್ಯತೆಯಿಂದ ಮಾಡುವುದು | ಒಂದು ನೂರು ರೂಪಾಯಿಗಳು |
| 242 | (3) | ಉಪವಿಧಿಗಳಿಗನುಗುಣವಾಗಿ ಮನೆಯ ಚರಂಡಿಗಳು, ಇತ್ಯಾದಿಗಳನ್ನು ನಿರ್ವಹಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 246 | (2) | ಲೈಸೆನ್ಸ್ ಇಲ್ಲದೆ ಸಾರ್ವಜನಿಕ ಕಕ್ಕಸನ್ನು ನಿರ್ವಹಣೆಮಾಡುವುದು | ಐವತ್ತು ರೂಪಾಯಿಗಳು |
| | (3) | ಸಾರ್ವಜನಿಕ ಕಕ್ಕಸನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 247 | | ಕಕ್ಕಸಿಗೆ ವ್ಯವಸ್ಥೆ ಮಾಡಲು ಅಥವಾ ಬೇರೊಂದು ಸ್ಥಳಕ್ಕೆ ಕಕ್ಕಸನ್ನು ಸ್ಥಳಾಂತರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು ಮತ್ತು ಕಕ್ಕಸುಗಳನ್ನು ಸ್ವಚ್ಛವಾಗಿ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 248 | | ಹೆಚ್ಚಿನ ಸಂಖ್ಯೆಯ ಜನರು ಬಳಸುವ ಆವರಣಗಳಿಗೆ ಕಕ್ಕಸುಗಳನ್ನು ವ್ಯವಸ್ಥೆಮಾಡಲು ಅಥವಾ ಅವುಗಳನ್ನು ಸ್ವಚ್ಛವಾದ ಅಥವಾ ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 249 | | ಮಾರುಕಟ್ಟೆ, ದನಗಳ ಕೊಟ್ಟಿಗೆ ಅಥವಾ ಗಾಡಿಗಳ ನಿಲ್ದಾಣಗಳಲ್ಲಿ ಕಕ್ಕಸುಗಳನ್ನು ವ್ಯವಸ್ಥೆಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು ಅಥವಾ ಅವುಗಳನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 250 | | ಕಕ್ಕಸುಗಳನ್ನು ಬಳಸುವ ವ್ಯಕ್ತಿಗಳು ಬೇರೆಯವರಿಗೆ ಕಾಣಿಸದಂತೆ ಅವುಗಳನ್ನು ನಿರ್ಮಿಸಲು ತಪ್ಪುವುದು | ಇಪ್ಪತ್ತು ರೂಪಾಯಿಗಳು |
| 252 | | ಅನುಮತಿ ಪಡೆಯದೆ ಪ್ರಧಾನ ಮಾರ್ಗಗÀಳೊಂದಿಗೆ ಸಂಪರ್ಕ ಕಲ್ಪಿಸುವುದು | ಎರಡುನೂರು ರೂಪಾಯಿಗಳು |
| 256 | (1) | [1][xxx | |
| 256 | (2) | xxx | |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 257 | (©) | xxx | |
| 263 | (1) | xxx | |
| | (2) | xxx | |
| | (3) | xxx | |
| | (4) | xxx | |
| | (5) | xxx][1] | |
| 1. 2013ರ ಅಧಿನಿಯಮ ಸಂಖ್ಯೆ 55ರ ಮೂಲಕ 20.8.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ. | | | |
| 272 | | ಅನುಮತಿಯಿಲ್ಲದೆ ಬೀದಿ ಪಂಕ್ತೀಕರಣದಲ್ಲಿ ಅಥವಾ ಕಟ್ಟಡದ ಸಾಲಿನಲ್ಲಿ ಕಟ್ಟಡ ನಿರ್ಮಿಸುವುದು | ಒಂದು ಸಾವಿರ ರೂಪಾಯಿಗಳು |
| 273 | (1) | ಕಟ್ಟಡಗಳನ್ನು ಹಿಂದಕ್ಕೆ ಸರಿಹೊಂದಿಸಲು ಮಾಡಿದ ಆದೇಶಗಳನ್ನು ಪಾಲಿಸಲು ತಪ್ಪುವುದು | ಐದು ನೂರು ರೂಪಾಯಿಗಳು |
| 278 | | ಸಾರ್ವಜನಿಕ ಬೀದಿಯ ನೆಲಗಟ್ಟು, ಅಥವಾ ಬೇಲಿಗಳು, ಸ್ತಂಭಗಳು ಹಾಗೂ ಇತರ ಸಾಮಗ್ರಿಗಳನ್ನು ಕಾನೂನುಬಾಹಿರವಾಗಿ ಸ್ಥಳಾಂತರ ಮಾಡುವುದು, ಇತ್ಯಾದಿ | ಐವತ್ತು ರೂಪಾಯಿಗಳು |
| 280 | | ವಿಲೆ ಮಾಡುವುದಕ್ಕೆ ಮುಂಚೆ ಕಟ್ಟಡ ನಿವೇಶನಗಳ ಮೇಲೆ ಬೀದಿಗಳನ್ನು ಅಥವಾ ರಸ್ತೆಗಳನ್ನು ವ್ಯವಸ್ಥೆಮಾಡಲು ತಪ್ಪುವುದು | ಎರಡುನೂರು ರೂಪಾಯಿಗಳು |
| 281 | | ಕಾನೂನುಬಾಹಿರವಾಗಿ ಹೊಸ ಬೀದಿಗಳನ್ನು ರೂಪಿಸುವುದು ಅಥವಾ ರಚಿಸುವುದು | ಐದುನೂರು ರೂಪಾಯಿಗಳು |
| 283 | | ಖಾಸಗಿ ಬೀದಿಗೆ ಜಲ್ಲಿ ಇತ್ಯಾದಿಯನ್ನು ಹಾಕಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 285 | | ಬೀದಿಯ ಅಥವಾ ಯಾವುದೇ ಸಾರ್ವಜನಿಕ ಸ್ಥಳದ ನಿಯಂತ್ರಣವು ನಗರಪಾಲಿಕೆಯಲ್ಲಿ ನಿಹಿತವಾಗಿದೆಯೋ ಆ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಗೋಡೆಯನ್ನು ಕಟ್ಟುವುದು ಅಥವಾ ಬೇಲಿಯನ್ನು ಹಾಕುವುದು, ಇತ್ಯಾದಿ | ಇಪ್ಪತ್ತು ರೂಪಾಯಿಗಳು |
| 286 | | ಲೈಸೆನ್ಸ್ ಇಲ್ಲದೆ ಅಥವಾ ನೋಟೀಸಿಗೆ ತದ್ವಿರುದ್ಧವಾಗಿ ಬಾಗಿಲುಗಳು ನೆಲಅಂತಸ್ತಿನ ಕಿಟಕಿಗಳು ಮೊದಲಾದವುಗಳನ್ನು ಹೊರಮುಖವಾಗಿ ತೆರೆದುಕೊಂಡಿರುವಂತೆ ಮಾಡಿರುವುದು | ಎರಡುನೂರು ರೂಪಾಯಿಗಳು |
| 287 | | ಖಾಯಂ ಒತ್ತುವರಿಯನ್ನು ತೆರವು ಮಾಡಲು ತಪ್ಪುವುದು | ಎರಡುನೂರು ರೂಪಾಯಿಗಳು |
| 288 | | ತಾತ್ಕಾಲಿಕ ಒತ್ತುವರಿಯನ್ನು ತೆರವುಮಾಡಲು ತಪ್ಪುವುದು | ಐವತ್ತು ರೂಪಾಯಿಗಳು |
| 290 | | ಕಾನೂನುಬಾಹಿರವಾಗಿ ಸರಳನ್ನು ತೆಗೆದುಹಾಕುವುದು ಅಥವಾ ಚೌಬೀನೆ ಮರಗಳು, ಇತ್ಯಾದಿಗಳನ್ನು ದಾಸ್ತಾನು | ಐವತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| | | ಮಾಡುವುದು ಅಥವಾ ದೀಪವನ್ನು ತೆಗೆದುಹಾಕುವುದು ಅಥವಾ ಆರಿಸುವುದು | |
| 291 | (1) | ಬೀದಿಯಲ್ಲಿ ಕಾನೂನುಬಾಹಿರವಾಗಿ ಗುಂಡಿ ತೆಗೆಯುವುದು ಅಥವಾ ಅಡೆತಡೆ ಉಂಟುಮಾಡುವುದು | ಐವತ್ತು ರೂಪಾಯಿಗಳು |
| | (3) | ಅಡತಡೆಯನ್ನು ತೆಗೆದುಹಾಕಲು ತಪ್ಪುವುದು | ಐವತ್ತು ರೂಪಾಯಿಗಳು |
| 292 | | ಬೀದಿಗೆ ಅಥವಾ ಕಾಲುದಾರಿಗೆ ಅಡೆತಡೆಯುಂಟಾಗುವ ಸಂಭವವಿರುವಂತೆ ಲೈಸೆನ್ಸ್ ಇಲ್ಲದೆ ಕಟ್ಟಡ ಕಟ್ಟುವುದು, ಇತ್ಯಾದಿ | ಐವತ್ತು ರೂಪಾಯಿಗಳು |
| 292 | | ದುರಸ್ತಿಯಲ್ಲಿರುವಂಥ ಕಟ್ಟಡಕ್ಕೆ ಬೇಲಿ ಇತ್ಯಾದಿಯನ್ನು ಹಾಕಲು ತಪ್ಪುವುದು | ಐವತ್ತು ರೂಪಾಯಿಗಳು |
| 293 | (3) | ಸಾರ್ವಜನಿಕ ಬೀದಿಯ ಸಂಖ್ಯೆಯನ್ನು ಕಾನೂನುಬಾಹಿರವಾಗಿ ನಾಶಪಡಿಸುವುದು. ಇತ್ಯಾದಿ | ಇಪ್ಪತ್ತು ರೂಪಾಯಿಗಳು |
| 294 | (2) | ಕಟ್ಟಡದ ಸಂಖ್ಯೆಯನ್ನು ಕಾನೂನು ಬಾಹಿರವಾಗಿ ನಾಶಪಡಿಸುವುದು ಇತ್ಯಾದಿ | ಇಪ್ಪತ್ತು ರೂಪಾಯಿಗಳು |
| 294 | (3) | ಸಂಖ್ಯೆಯನ್ನು ಬದಲಿಸುವಂತೆ ಅಗತ್ಯಪಡಿಸಿದಾಗ ಹಾಗೆ ಮಾಡಲು ತಪ್ಪುವುದು | ಇಪ್ಪತ್ತು ರೂಪಾಯಿಗಳು |
| 296 | (5) | ನಗರಪಾಲಿಕೆಯು ಹೊರಡಿಸಿದ ಘೋಷಣೆಗೆ ತದ್ವಿರುದ್ಧವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡುವುದು ಅಥವಾ ಮರು ನಿರ್ಮಾಣ ಮಾಡುವುದು | ಎರಡುನೂರು ರೂಪಾಯಿಗಳು |
| 297 | (1) | ಬೀದಿಗಳ ಮೂಲೆಗಳಲ್ಲಿನ ಕಟ್ಟಡಗಳನ್ನು ನೇರ್ಪಡಿಸಲು ಅಥವಾ ಎದ್ದುಕಾಣುವಂತೆ ಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 298 | | ಸುಲಭ ದಹ್ಯ ಸಾಮಗ್ರಿಗಳಿಂದ ಹೊರ ಛಾವಣಿಯ ನಿರ್ಮಾಣ, ಮರುನಿರ್ಮಾಣ ಅಥವಾ ಅಂಥ ಹೊರಛಾವಣಿಯನ್ನು ಉಳಿಸಿಕೊಳ್ಳುವುದು, ಇತ್ಯಾದಿ | ಐವತ್ತು ರೂಪಾಯಿಗಳು |
| 310 | (1) | ಕಟ್ಟಡದ ನಿರ್ಮಾಣ ಅಥವಾ ಮರುನಿರ್ಮಾಣ ಪೂರ್ಣಗೊಂಡ ತರುವಾಯ ಆಯುಕ್ತರಿಗೆ ಲಿಖಿತದಲ್ಲಿ ತಿಳಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 319 | | ಆವರಣಗಳ ಹೊರ ಗೋಡೆಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ತಪ್ಪುವುದು | ಇಪ್ಪತ್ತು ರೂಪಾಯಿಗಳು |
| 322 | | ಅಪಾಯಕಾರಿ ಕಟ್ಟಡವನ್ನು ಕೆಡವಲು, ದುರಸ್ತಿ ಮಾಡಲು ಅಥವಾ ಭದ್ರಪಡಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ನೂರು ರೂಪಾಯಿಗಳು |
| 323 | | ಅಪಾಯಕಾರಿ ಮರಗಳನ್ನು ಭದ್ರಪಡಿಸಲು, ಸವರಲು ಅಥವಾ ಕಡಿದುಹಾಕಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 324 | | ಹಾದುಹೋಗುವವರಿಗೆ ಅಥವಾ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳಿಗೆ ಅಪಾಯಕಾರಿಯಾದ ಕೆರೆಯನ್ನು ಅಥವಾ ಇತರ ಸ್ಥಳವನ್ನು ದುರಸ್ತಿ, ಇತ್ಯಾದಿ ಮಾಡುವ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 325 | | ಬೆಂಕಿ ಆಕಸ್ಮಿಕದ ಬಗ್ಗೆ ಮುನ್ನೆಚ್ಚರಿಕೆಗಳಿಗೆ ಸಂಬಂಧಿಸಿದ ನೋಟೀಸನ್ನು ಪಾಲಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 326 | (1) | ಅನುಮತಿ ಇಲ್ಲದೆ ಬಾವಿ ಇತ್ಯಾದಿಗಳನ್ನು ನಿರ್ಮಿಸುವುದು | ಐವತ್ತು ರೂಪಾಯಿಗಳು |
| | (3) | ಬಾವಿಯನ್ನು ಮುಚ್ಚಿಹಾಕಲು ಅಥವಾ ಕೆಡವಿಹಾಕಲು ಕೊಟ್ಟ ನೋಟೀಸನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 327 | | ಅಪಾಯಕಾರಿ ಕಲ್ಲುಗಣಿ ಕೆಲಸವನ್ನು ನಿಲ್ಲಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 328 | (1) | ಕೆರೆ ಅಥವಾ ಬಾವಿಯನ್ನು ಮುಚ್ಚುವುದು ಇತ್ಯಾದಿ ಬಗ್ಗೆ ಅಥವಾ ಅದರಲ್ಲಿನ ನೀರನ್ನು ಹರಿಸಿ ಬರಿದು ಮಾಡುವುದು ಇತ್ಯಾದಿ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| | (3) | ನಿಷೇಧಗಳಿಗೆ ಅಥವಾ ವಿನಿಯಮಗಳಿಗೆ ತದ್ವಿರುದ್ಧವಾಗಿ ಸಾಗುವಳಿ ಮಾಡುವುದು | ಐದು ನೂರು ರೂಪಾಯಿಗಳು |
| 329 | | ಕುಡಿಯುವುದಕ್ಕೆ, ಸ್ನಾನ ಮಾಡುವುದಕ್ಕೆ ಅಥವಾ ಬಟ್ಟೆ ಒಗೆಯುವುದಕ್ಕೆ ಬಳಸುವ ಕೆರೆಗಳು, ಬಾವಿ ಅಥವಾ ನೀರಿನ ಇತರ ಮೂಲಗಳನ್ನು ಸ್ವಚ್ಛಗೊಳಿಸುವುದು ಅಥವಾ ಮುಚ್ಚುವುದು ಇತ್ಯಾದಿ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 331 | | ಕೆರೆಯ ನೀರನ್ನು ಮಲಿನಗೊಳಿಸುವುದು, ಇತ್ಯಾದಿ | ಐವತ್ತು ರೂಪಾಯಿಗಳು |
| 332 | | ಒಕ್ಕಲಿಲ್ಲದ ಆವರಣಗಳನ್ನು ಸುತ್ತುಗಟ್ಟುಹಾಕಲು, ತೆರವುಗೊಳಿಸಲು ಅಥವಾ ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 333 | | ಹೊಲಸು ಸ್ಥಿತಿಯಲ್ಲಿರುವ ಅಥವಾ ಯಾವುದೇ ದಟ್ಟವಾದ ಅಥವಾ ಹಾನಿಕಾರಕವಾದ ಸಸ್ಯಗಳು ಮಿತಿಮೀರಿ ಬೆಳೆದಿರುವ ಕಟ್ಟಡವನ್ನು ಅಥವಾ ಭೂಮಿಯನ್ನು ಚೊಕ್ಕಟಗೊಳಿಸಲು ಅಥವಾ ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 334 | | ಕಲ್ಲಿದ್ದಲು ಬೂದಿ, ಇತ್ಯಾದಿಯನ್ನು ರಾಶಿ ಹಾಕುವುದು ಮುಂತಾದವುಗಳಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಉಪದ್ರವವನ್ನು ನಿವಾರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 335 | | ಕಟ್ಟಡಕ್ಕೆ ಅಥವಾ ಭೂಮಿಗೆ ಬೇಲಿ ಹಾಕಲು ಅಥವಾ ಬೇಲಿಗಳನ್ನು ಅಥವಾ ಮರಗಳನ್ನು ಕತ್ತರಿಸಿ ಸಮ ಮಾಡಲು, ಸವರಲು ಅಥವಾ ಕತ್ತರಿಸಿಹಾಕಲು ಅಥವಾ ಸುತ್ತುಗಟ್ಟಿರುವ ಗೋಡೆ ಎತ್ತರವನ್ನು ತಗ್ಗಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 336 | | ಕಟ್ಟಡಕ್ಕೆ ಸುಣ್ಣ ಬಳಿಯಲು ಅಥವಾ ಅನ್ಯಥಾ ಅದನ್ನು ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 337 | | ನೈರ್ಮಲ್ಯಕರವಲ್ಲದ ಕಟ್ಟಡಗಳಿಗೆ ಸಂಬಂಧಿಸಿದಂತೆ ಕೆಲಸವನ್ನು ನಿರ್ವಹಿಸಲು ಅಥವಾ ಇತರ ಕ್ರಮವನ್ನು ತೆಗೆದುಕೊಳ್ಳಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಕಲ್ಲು ಕಟ್ಟಡದ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳು ಹಾಗೂ ಗುಡಿಸಲಿನ ಸಂದರ್ಭದಲ್ಲಿ ಐವತ್ತು ರೂಪಾಯಿಗಳು |
| 338 | (2) | ಮನುಷ್ಯರ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳನ್ನು ನಿಷೇಧದ ತರುವಾಯವು ಬಳಸುವುದು ಅಥವಾ ಬಳಸಲು ಅವಕಾಶ ನೀಡುವುದು | ಪ್ರತಿಯೊಂದು ದಿನಕ್ಕೆ ಇಪ್ಪತ್ತು ರೂಪಾಯಿಗಳು |
| | (4) | ಅದನ್ನು ಕೆಡವಿಹಾಕಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ದಿನವೊಂದಕ್ಕೆ ಇಪ್ಪತ್ತು ರೂಪಾಯಿಗಳು |
| 339 | (1) | ಕಟ್ಟಡದಲ್ಲಿ ಜನಸಂದಣಿಯನ್ನು ಕಡಿಮೆಮಾಡಲು ಆದೇಶ ನೀಡಿದ ತರುವಾಯವು ಕಟ್ಟಡದಲ್ಲಿ ಜನಸಂದಣಿಗೆ ಅವಕಾಶ ಮಾಡಿಕೊಡುವುದು | ದಿನವೊಂದಕ್ಕೆ ಇಪ್ಪತ್ತು ರೂಪಾಯಿಗಳು |
| | (4) | ಜನಸಂದಣಿ ಹೆಚ್ಚಿರುವ ಕಟ್ಟಡವನ್ನು ಅಥವಾ ಕೊಠಡಿಯನ್ನು ಖಾಲಿ ಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ದಿನವೊಂದಕ್ಕೆ ಇಪ್ಪತ್ತು ರೂಪಾಯಿಗಳು |
| 343 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ವಸತಿಗೃಹ, ಉಪಾಹಾರಗೃಹ, ಚಹಾ ಅಂಗಡಿ ಮೊದಲಾದವುಗಳನ್ನು ಇಡುವುದು | ಒಂದು ನೂರು ರೂಪಾಯಿಗಳು |
| 344 | (J) | ಕಾನೂನು ಬಾಹಿರವಾಗಿ ಹಂದಿಗಳನ್ನು ಸಾಕುವುದು | ಇಪ್ಪತ್ತು ರೂಪಾಯಿಗಳು |
| | (©) | ಉಪದ್ರವಕಾರಿಯಾಗುವಂತೆ ಅಥವಾ ಅಪಾಯಕಾರಿಯಾಗುವಂತೆ ಪ್ರಾಣಿಗಳನ್ನು ಕಾನೂನುಬಾಹಿರವಾಗಿ ಸಾಕುವುದು | ಇಪ್ಪತ್ತು ರೂಪಾಯಿಗಳು |
| | ([1]) | ಪ್ರಾಣಿಗಳಿಗೆ ಹೊಲಸನ್ನು ತಿನ್ನಿಸುವುದು | ಇಪ್ಪತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 346 | | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಕುದುರೆಲಾಯ, ದನದ ಕೊಟ್ಟಿಗೆ ಮುಂತಾದವಕ್ಕೆ ಸ್ಥಳವನ್ನು ಬಳಸುವುದು | ಐವತ್ತು ರೂಪಾಯಿಗಳು |
| 347 | | ಅಧಿನಿಯಮಕ್ಕೆ ಅಥವಾ ಸಹಾಯಕ ಶಾಸನಕ್ಕೆ ತದ್ವಿರುದ್ಧವಾಗಿ ಕುದುರೆಲಾಯ, ದನದ ಕೊಟ್ಟಿಗೆ ಮುಂತಾದವುಗಳನ್ನು ನಿರ್ಮಿಸುವುದು ಅಥವಾ ನಿರ್ವಹಿಸುವುದು | ಐವತ್ತು ರೂಪಾಯಿಗಳು |
| 349 | | ಸಾರ್ವಜನಿಕ ಸ್ಥಳವನ್ನು ಅಥವಾ ಸಾರ್ವಜನಿಕ ಬೀದಿಯ ಬದಿಗಳನ್ನು ಗಾಡಿ ನಿಲ್ದಾಣ ಇತ್ಯಾದಿಯಾಗಿ ಬಳಸುವುದು, ಇತ್ಯಾದಿ | ಇಪ್ಪತ್ತು ರೂಪಾಯಿಗಳು |
| 351 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಹೊಸ ಖಾಸಗಿ ಗಾಡಿ ನಿಲ್ದಾಣವನ್ನು ಪ್ರಾರಂಭಿಸುವುದು ಅಥವಾ ಇಟ್ಟುಕೊಂಡು ಬರುವುದು | ಎರಡುನೂರು ರೂಪಾಯಿಗಳು |
| 352 | | ಪ್ರಾಣಿಗಳ ಶವಗಳನ್ನು ತೆಗೆದುಹಾಕಲು ತಪ್ಪುವುದು | ಇಪ್ಪತ್ತು ರೂಪಾಯಿಗಳು |
| 353 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಅನುಸೂಚಿ ಘಿರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಕ್ಕಾಗಿ ಸ್ಥಳವನ್ನು ಬಳಸುವುದು | ಎರಡುನೂರು ರೂಪಾಯಿಗಳು |
| 354 | (1), (2) ಮತ್ತು (3) | ಕಾರ್ಖಾನೆಯ ಕಾರ್ಯಾಗಾರ, ಕಾರ್ಯಸ್ಥಳ ಅಥವಾ ಯಂತ್ರಸಾಮಗ್ರಿಯನ್ನು ಕಾನೂನು ಬಾಹಿರವಾಗಿ ಸ್ಥಾಪಿಸುವುದು | ಒಂದು ನೂರು ರೂಪಾಯಿಗಳು |
| | (5) | ಚಿಮಣಿಗಳಿಗೆ ಸಂಬಂಧಿಸಿದ ಆದೇಶವನ್ನು ಉಲ್ಲಂಘಿಸುವುದು | ಐದು ನೂರು ರೂಪಾಯಿಗಳು |
| 355 | (1) | ಉಪದ್ರುವವನ್ನು ನಿವಾರಿಸುವುದಕ್ಕೆ ಸಂಬಂಧಿಸಿದ ಆದೇಶವನ್ನು ಉಲ್ಲಂಘಿಸುವುದು | ಒಂದು ನೂರು ರೂಪಾಯಿಗಳು |
| 355 | (2) | ಕಾರ್ಖಾನೆ ಇತ್ಯಾದಿಗಳ ಕಾರ್ಯನಿರ್ವಹಣೆಯನ್ನು ಅಥವಾ ವಿಶಿಷ್ಟ ಬಗೆಯ ಇಂಧನದ ಬಳಕೆಯನ್ನು ನಿಷೇಧಿಸುವ ಆದೇಶವನ್ನು ಉಲ್ಲಂಘಿಸುವುದು | ಐದು ನೂರು ರೂಪಾಯಿಗಳು |
| 357 | | ಕಾರ್ಖಾನೆ ಇತ್ಯಾದಿಗಳನ್ನು ಸುಸ್ಥಿತಿಯಲ್ಲಿಡುವುದಕ್ಕಾಗಿ, ಅತಿಯಾಗಿ ದಟ್ಟೈಸುವುದು ಇತ್ಯಾದಿಯನ್ನು ಕಡಿಮೆ ಮಾಡುವುದಕ್ಕಾಗಿ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 358 | | ಉಪದ್ರುವ ಅಥವಾ ಪ್ರಾಣಕ್ಕೆ ಅಪಾಯ ಮುಂತಾದವನ್ನು ನಿವಾರಿಸಲು ನೀಡಿದ ಆದೇಶವನ್ನು ಉಲ್ಲಂಘಿಸುವುದು | ಒಂದು ನೂರು ರೂಪಾಯಿಗಳು |
| 363 | (2) | ಅನಧಿಕೃತ ಸ್ಥಳಗಳಲ್ಲಿ ಅಗಸರು ಬಟ್ಟೆಗಳನ್ನು ಒಗೆಯುವುದು | ಇಪ್ಪತ್ತು ರೂಪಾಯಿಗಳು |
| 365 | | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಸ್ಥಳವನ್ನು ಕಸಾಯಿಖಾನೆಯಾಗಿ ಬಳಸುವುದು | ಐವತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 367 | | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಮಾರಾಟಕ್ಕಾಗಿ ಅಥವಾ ಆಹಾರಕ್ಕಾಗಿ ಪ್ರಾಣಿಗಳನ್ನು ವಧೆ ಮಾಡುವುದು ಅಥವಾ ಪ್ರಾಣಿಗಳ ಶವಗಳ ಚರ್ಮ ಸುಲಿಯುವುದು ಅಥವಾ ಕತ್ತರಿಸುವುದು ಅಥವಾ ಉಪದ್ರವ ಉಂಟಾಗುವ ಹಾಗೆ ಚರ್ಮವನ್ನು ಒಣಗಿಸುವುದು | ಪ್ರತಿಯೊಂದು ಪ್ರಾಣಿಯ ಶವಕ್ಕೆ ಅಥವಾ ಚರ್ಮಕ್ಕೆ ಇಪ್ಪತ್ತು ರೂಪಾಯಿಗಳು |
| 370 | | ಅನುಮತಿ ಇಲ್ಲದೆ ಅಥವಾ ಅನುಮತಿಗೆ ತದ್ವಿರುದ್ಧವಾಗಿ ಪ್ರಾಣಿಯನ್ನು ಅಥವಾ ವಸ್ತುವನ್ನು ಸಾರ್ವಜನಿಕ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದು ಅಥವಾ ಮಾರಾಟಕ್ಕೆ ಇಡುವುದು | ಐವತ್ತು ರೂಪಾಯಿಗಳು |
| 371 | (2) | ಲೈಸೆನ್ಸ್ ಪಡೆಯದೆ ಅಥವಾ ಅನುಮತಿಗೆ ತದ್ವಿರುದ್ಧವಾಗಿ ಖಾಸಗಿ ಮಾರುಕಟ್ಟೆಯನ್ನು ಸ್ಥಾಪಿಸುವುದು | ಒಂದು ನೂರು ರೂಪಾಯಿಗಳು |
| 372 | | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಖಾಸಗಿ ಮಾರುಕಟ್ಟೆಯನ್ನು ತೆರೆದಿಡುವುದು | ಒಂದು ನೂರು ರೂಪಾಯಿಗಳು |
| 375 | | ಲೈಸೆನ್ಸ್ ಇಲ್ಲದ ಖಾಸಗಿ ಮಾರುಕಟ್ಟೆಯಲ್ಲಿ ಪ್ರಾಣಿಗಳನ್ನು ಅಥವಾ ವಸ್ತುಗಳನ್ನು ಮಾರಾಟ ಮಾಡುವುದು ಅಥವಾ ಮಾರಾಟಕ್ಕೆ ಇಡುವುದು | ಇಪ್ಪತ್ತು ರೂಪಾಯಿಗಳು |
| 376 | | ಖಾಸಗಿ ಮಾರುಕಟ್ಟೆಗಳಿಗೆ ಸಂಪರ್ಕ ಮಾರ್ಗಗಳು, ಚರಂಡಿಗಳು, ಮುಂತಾದವುಗಳನ್ನು ನಿರ್ಮಿಸಲು ಅಥವಾ ಅವುಗಳಿಗೆ ನೆಲಗಟ್ಟು ಇತ್ಯಾದಿ ಮಾಡಲು ನೀಡಿದ ನಿರ್ದೇಶನವನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 377 | (2) | ಕೆಲಸಗಳನ್ನು ನಿರ್ವಹಿಸಲು ತಪ್ಪಿದ್ದಕ್ಕಾಗಿ ಲೈಸೆನ್ಸನ್ನು ಅಮಾನತ್ತುಗೊಳಿಸಿದ ಅಥವಾ ನಿರಾಕರಿಸಿದ ತರುವಾಯವೂ ಖಾಸಗಿ ಮಾರುಕಟ್ಟೆಯನ್ನು ಪ್ರಾರಂಭಿಸುವುದು ಅಥವಾ ತೆರೆದಿಡುವುದು | ಐವತ್ತು ರೂಪಾಯಿಗಳು |
| 378 | | ಮಾರುಕಟ್ಟೆ ವಿನಿಯಮಗಳನ್ನು ಉಲ್ಲಂಘಿಸುವುದು | ಹತ್ತು ರೂಪಾಯಿಗಳು |
| 379 | | ಕುಷ್ಠರೋಗದಿಂದ ಅಥವಾ ಇತರ ಸೋಂಕು ಅಥವಾ ಅಂಟುರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ಹೊರಹಾಕಲು ಮಾರುಕಟ್ಟೆಗಳ ಪ್ರಭಾರದಲ್ಲಿರುವ ವ್ಯಕ್ತಿಯು ತಪ್ಪುವುದು | ಐವತ್ತು ರೂಪಾಯಿಗಳು |
| 381 | | ಲೈಸೆನ್ಸ್ ಇಲ್ಲದೆ ಕಟುಕನ, ಮಿÃನು ಮಾರುವವನ ಅಥವಾ ಕೋಳಿ ಮಾರುವವನ ಕಸುಬನ್ನು ನಡೆಸುವುದು ಇತ್ಯಾದಿ | ಹತ್ತು ರೂಪಾಯಿಗಳು |
| 382 | | ಸಾರ್ವಜನಿಕ ಬೀದಿಗಳಲ್ಲಿ ಪ್ರಾಣಿಯನ್ನು ಅಥವಾ ವಸ್ತುವನ್ನು ಮಾರಾಟ ಮಾಡುವುದು ಅಥವಾ ಮಾರಾಟಕ್ಕಾಗಿ ಇಡುವುದು | ಇಪ್ಪತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 386 | | ಆಯುಕ್ತರಿಗೆ ಅಥವಾ ಆಯುಕ್ತರಿಂದ ಅಧಿಕೃತನಾದ ಯಾರೇ ವ್ಯಕ್ತಿಗೆ 385ನೇ ಪ್ರಕರಣದ ಮೇರೆಗೆ ಪ್ರವೇಶ, ಇತ್ಯಾದಿ ಅಧಿಕಾರವನ್ನು ಚಲಾಯಿಸಲು ಅಡ್ಡಿಯುಂಟುಮಾಡುವುದು | ಐವತ್ತು ರೂಪಾಯಿಗಳು |
| 388 | | 387ನೇ ಪ್ರಕರಣದ ಮೇರೆಗೆ ಪಡೆದ ಪ್ರಾಣಿಯನ್ನು ಅಥವಾ ವಸ್ತುವನ್ನು ಸಾಗಿಸುವುದು ಅಥವಾ ಅದರೊಡನೆ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡುವುದು | ಐದು ನೂರು ರೂಪಾಯಿಗಳು |
| 392 | (1) | ಲೈಸೆನ್ಸ್ ಇಲ್ಲದೆ ಮೃತರ ವಿಲೆಗಾಗಿ ಸ್ಥಳವನ್ನು ತೆರೆಯುವುದು, ಇತ್ಯಾದಿ | ಒಂದು ನೂರು ರೂಪಾಯಿಗಳು |
| 394 | (4) | ಲೈಸೆನ್ಸ್ ಇಲ್ಲದ ಸ್ಮಶಾನವನ್ನು ಅಥವಾ ಸುಡುಗಾಡನ್ನು ಬಳಸುವುದು ಅಥವಾ ಬಳಸಲು ಅವಕಾಶ ನೀಡುವುದು. ನೋಂದಾಯಿಸಿರದ ಸ್ಮಶಾನವನ್ನು ಅಥವಾ ಸುಡುಗಾಡನ್ನು ಬಳಸುವುದು ಅಥವಾ ಬಳಸಲು ಅವಕಾಶ ನೀಡುವುದು | ಒಂದು ನೂರು ರೂಪಾಯಿಗಳು |
| 395 | | ಸ್ಮಶಾನದಲ್ಲಿ ಅಥವಾ ಸುಡುಗಾಡಿನಲ್ಲಿ ಶವ ಹೂಳುವುದರ ಅಥವಾ ಸುಡುವುದರ ಬಗ್ಗೆ ಮಾಹಿತಿ ಕೊಡಲು ತಪ್ಪುವುದು | ಇಪ್ಪತ್ತು ರೂಪಾಯಿಗಳು |
| 396 | | ಸಾರ್ವಜನಿಕ ಆರಾಧನಾ ಸ್ಥಳದಲ್ಲಿ ಹೆಣವನ್ನು ಹೂಳುವುದಕ್ಕಾಗಿ ಗುಮ್ಮಟವನ್ನು ಅಥವಾ ಗೋರಿಯನ್ನು ಕಟ್ಟುವುದು | ಐದು ನೂರು ರೂಪಾಯಿಗಳು |
| 397 | (3) | ನಿಷೇಧಿಸಿದ ತರುವಾಯವು ಸ್ಥಳದಲ್ಲಿ ಶವವನ್ನು ಹೂಳುವುದು ಅಥವಾ ಸುಡುವುದು | ಇನ್ನೂರು ರೂಪಾಯಿಗಳು |
| 398 | | ಶವಗಳನ್ನು ಹೂಳುವುದು ಅಥವಾ ಸುಡುವುದು, ಇತ್ಯಾದಿ | ಐವತ್ತು ರೂಪಾಯಿಗಳು |
| 400 | | ಲೈಸೆನ್ಸ್ ಇಲ್ಲದೆ ಸಾರ್ವಜನಿಕ ಸ್ಥಳದಲ್ಲಿ ಮೃತರ ವಿಲೆಗಾಗಿ ಗೋರಿ ಗುಂಡಿ ತೋಡುವವನ ಅಥವಾ ಸಹಾಯಕನ ಕೆಲಸವನ್ನು ನಿರ್ವಹಿಸುವುದು | ಇಪ್ಪತ್ತು ರೂಪಾಯಿಗಳು |
| 402 | | ಖಾಸಗಿ ಅಥವಾ ಸಾರ್ವಜನಿಕ ವಾಸದ ಮನೆಯಲ್ಲಿ ಅಪಾಯಕಾರಿ ರೋಗ ಇರುವುದರ ಬಗ್ಗೆ ಮಾಹಿತಿ ಕೊಡಲು ವೈದ್ಯ ವೃತ್ತಿಗರು ಅಥವಾ ಮನೆಯ ಮಾಲೀಕನು ಅಥವಾ ಅಧಿಭೋಗದಾರನು ತಪ್ಪುವುದು | ಐವತ್ತು ರೂಪಾಯಿಗಳು |
| 406 | | ಕಟ್ಟಡವನ್ನು ಅಥವಾ ವಸ್ತುವನ್ನು ಸ್ವಚ್ಛಗೊಳಿಸಲು ಅಥವಾ ಅದರ ಸೋಂಕು ನಿವಾರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 408 | (2) | ಅನಧಿಕೃತ ಸ್ಥಳಗಳಲ್ಲಿ ಸೋಂಕು ತಗುಲಿದ ವಸ್ತುಗಳನ್ನು ತೊಳೆಯುವುದು | ಐವತ್ತು ರೂಪಾಯಿಗಳು |
| 409 | | ಸೋಂಕು ತಗುಲಿದ ವಸ್ತುಗಳನ್ನು ಕೊಡುವುದು, ಎರವಲು ಕೊಡುವುದು, ಇತ್ಯಾದಿ | ಐವತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 410 | | ಸೋಂಕು ತಗುಲಿದ ವ್ಯಕ್ತಿಯು ವೃತ್ತಿಯನ್ನು ನಡೆಸುವುದು | ಐವತ್ತು ರೂಪಾಯಿಗಳು |
| 411 | (1) | ಸೋಂಕು ತಗುಲಿರುವ ವ್ಯಕ್ತಿಯು ಸೋಂಕು ತಗುಲಿರುವ ಸಂಗತಿಯನ್ನು ತಿಳಿಸದೆ ಸಾರ್ವಜನಿಕ ವಾಹನದೊಳಕ್ಕೆ ಪ್ರವೇಶಿಸುವುದು | ಐವತ್ತು ರೂಪಾಯಿಗಳು |
| 412 | (1) | ಸಾರ್ವಜನಿಕ ವಾಹನದ ಸೋಂಕನ್ನು ನಿವಾರಿಸಲು ತಪ್ಪುವುದು, ಇತ್ಯಾದಿ | ಐವತ್ತು ರೂಪಾಯಿಗಳು |
| | (2) | ಸೋಂಕು ತಗುಲಿದ ವ್ಯಕ್ತಿಯು ಪ್ರಯಾಣ ಮಾಡಿದಂಥ ಸಾರ್ವಜನಿಕ ವಾಹನವನ್ನು ಆರೋಗ್ಯಾಧಿಕಾರಿಯಿಂದ ಪ್ರಮಾಣಪತ್ರವನ್ನು ಪಡೆಯುವುದಕ್ಕೆ ಮುಂಚೆ ಬಳಸುವುದು | ಐವತ್ತು ರೂಪಾಯಿಗಳು |
| 413 | | ಆರೋಗ್ಯಾಧಿಕಾರಿಯಿಂದ ಪ್ರಮಾಣಪತ್ರ ಪಡೆಯದೆ ಸೋಂಕು ತಗುಲಿದ ಕಟ್ಟಡವನ್ನು ಬಾಡಿಗೆಗೆ ಅಥವಾ ಒಳಬಾಡಿಗೆಗೆ ಕೊಡುವುದು | ಎರಡುನೂರು ರೂಪಾಯಿಗಳು |
| 414 | | ಸಾರ್ವಜನಿಕ ಮನೋರಂಜನಾ ಸ್ಥಳವನ್ನು ಮುಚ್ಚಲು ತಪ್ಪುವುದು | ಎರಡುನೂರು ರೂಪಾಯಿಗಳು |
| 415 | | ಸೋಂಕು ತಗುಲಿದ ಮಗುವನ್ನು ಶಾಲೆಗೆ ಕಳುಹಿಸುವುದು | ಐವತ್ತು ರೂಪಾಯಿಗಳು |
| 416 | | ಸೋಂಕು ತಗುಲಿದ ವ್ಯಕ್ತಿಯು ಸಾರ್ವಜನಿಕ ಅಥವಾ ಪರಿಚಲನ ಗ್ರಂಥಾಲಯದಿಂದ ಪುಸ್ತಕವನ್ನು ಬಳಸುವುದು ಅಥವಾ ಬಳಸುವುದಕ್ಕೆ ಅನುಮತಿ ನೀಡುವುದು | ಐವತ್ತು ರೂಪಾಯಿಗಳು |
| 417 | | ನಿಷೇಧಿಸಿದ ತರುವಾಯವೂ ನೀರನ್ನು ಬಳಸುವುದು | ಐವತ್ತು ರೂಪಾಯಿಗಳು |
| 419 | | ಸಿಡುಬು ರೋಗದ ಬಗ್ಗೆ ಮಾಹಿತಿಯನ್ನು ಕೊಡಲು ತಪ್ಪುವುದು | ಐವತ್ತು ರೂಪಾಯಿಗಳು |
| 420 | | ಸಿಡುಬು ರೋಗಕ್ಕೆ ರೋಗನಿರೋಧಕ ಚುಚ್ಚುಮದ್ದನ್ನು ಹಾಕಿಸಿಕೊಂಡ ನಲವತ್ತು ದಿವಸಗಳು ಮುಗಿಯುವುದಕ್ಕೆ ಮುಂಚೆ ಪ್ರಮಾಣಪತ್ರ ಇಲ್ಲದೆ ನಗರವನ್ನು ಪ್ರವೇಶಿಸುವುದು | ಒಂದು ನೂರು ರೂಪಾಯಿಗಳು |
| 430 | (3) | ಸಾರ್ವಜನಿಕವಾಗಿ ಪ್ರದರ್ಶಿಸಿದ ನಿಯಮಗಳ ಹಾಗೂ ಉಪವಿಧಿಗಳ ಪ್ರತಿಗಳನ್ನು ಪರಿಶೀಲಿಸುವುದಕ್ಕೆ ಅಡ್ಡಿಯುಂಟುಮಾಡುವುದು | ಐವತ್ತು ರೂಪಾಯಿಗಳು |
| | (4) | ಉಪವಿಧಿಗಳ ಮತ್ತು ನಿಯಮಗಳ ಮುದ್ರಿತ ಪ್ರತಿಗಳನ್ನು ಪ್ರದರ್ಶಿಸುವ ಫಲಕವನ್ನು ನಾಶ ಪಡಿಸುವುದು, ಇತ್ಯಾದಿ | ಐವತ್ತು ರೂಪಾಯಿಗಳು |
| 443 | (7) | ಕೇಳಿದ ಮೇಲೆ ಲೈಸೆನ್ಸನ್ನು ಹಾಜರ್ಪಡಿಸಲು ತಪ್ಪುವುದು | ಹತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 447 | | ಹಾಜರಾಗಲು, ದಸ್ತಾವೇಜನ್ನು ಹಾಜರುಪಡಿಸಲು ಅಥವಾ ಸಾಕ್ಷ್ಯವನ್ನು ನೀಡಲು ಕೊಟ್ಟ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 457 | (1) | ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ಮಾಲೀಕನಿಗೆ ಅನುಮತಿಸಲು ನೀಡಿದ ಸೂಚನೆಯನ್ನು ಪಾಲಿಸಲು ಅಧಿಭೋಗದಾರನು ತಪ್ಪುವುದು | ಪ್ರತಿ ದಿನಕ್ಕೆ ಐವತ್ತು ರೂಪಾಯಿಗಳು |
| 459 | | ಆಯುಕ್ತರಿಗೆ ಅಥವಾ ಅವರಿಂದ ಅಧಿಕೃತನಾದ ಯಾರೇ ವ್ಯಕ್ತಿಗೆ ಪ್ರವೇಶ ಇತ್ಯಾದಿ ಅಧಿಕಾರಗಳನ್ನು ಚಲಾಯಿಸಲು ಅಡ್ಡಿ ಉಂಟುಮಾಡುವುದು | ಐವತ್ತು ರೂಪಾಯಿಗಳು |
| 494 | | ನಗರಪಾಲಿಕೆ, ಸ್ಥಾಯೀ ಸಮಿತಿ, ಮೇಯರ್ ಮೊದಲಾದವರಿಗೆ ಅಡ್ಡಿ ಉಂಟುಮಾಡುವುದು ಅಥವಾ ಅವರನ್ನು ಪೀಡಿಸುವುದು, ಇತ್ಯಾದಿ | ಎರಡುನೂರು ರೂಪಾಯಿಗಳು |
| 495 | | ಮಟ್ಟ ಇತ್ಯಾದಿಯನ್ನು ತೋರಿಸುವುದಕ್ಕಾಗಿ ನಿಲ್ಲಿಸಿರುವ ಗುರುತನ್ನು ತೆಗೆದುಹಾಕುವುದು | ಎರಡುನೂರು ರೂಪಾಯಿಗಳು |
| 496 | | ನಗರಪಾಲಿಕೆಯು ಅಥವಾ ಆಯುಕ್ತರು ಪ್ರದರ್ಶಿಸಿರುವ ಅಥವಾ ಅವರ ಆದೇಶದ ಮೇರೆಗೆ ಪ್ರದರ್ಶಿಸಿರುವ ನೋಟೀಸನ್ನು ತೆಗೆದುಹಾಕುವುದು, ಇತ್ಯಾದಿ | ಐವತ್ತು ರೂಪಾಯಿಗಳು |
| 497 | | ನಗರಪಾಲಿಕೆಯಲ್ಲಿ ನಿಹಿತವಾಗಿರುವ ಭೂಮಿಯಿಂದ ಮಣ್ಣು, ಮರಳು ಅಥವಾ ಇತರ ಸಾಮಗ್ರಿಯನ್ನು ಕಾನೂನುಬಾಹಿರವಾಗಿ ತೆಗೆಯುವುದು ಅಥವಾ ಜಲಮಾರ್ಗಗಳಲ್ಲಿ ಅಥವಾ ಅವುಗಳ ಮೇಲೆ ವಸ್ತುವನ್ನು ಶೇಖರಿಸುವುದು ಅಥವಾ ಅವುಗಳನ್ನು ಒತ್ತುವರಿ ಮಾಡುವುದು | ಐವತ್ತು ರೂಪಾಯಿಗಳು |

**ಅನುಸೂಚಿ – XII**
**[431ನೇಪ್ರಕರಣವನ್ನುನೋಡಿ]**
**ಮುಂದುವರಿಯುತ್ತಿರುವಉಲ್ಲಂಘನೆಗಳಿಗೆದಂಡಗಳು**

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 190 | | ಉಪವಿಧಿಗಳಿಗೆ ಅನುಗುಣವಾಗಿ ಗೃಹ ಸಂಪರ್ಕಗಳನ್ನು ನಿರ್ವಹಿಸಲು ತಪ್ಪುವುದು | ಐದು ರೂಪಾಯಿಗಳು |
| 192 | (1) ಮತ್ತು (3) | ಗೃಹಸಂಪರ್ಕ ಕಲ್ಪಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐದು ರೂಪಾಯಿಗಳು |
| 194 | | ಗೃಹಬಳಕೆಯ ಉದ್ದೇಶಕ್ಕಾಗಿ ಸರಬರಾಜು ಮಾಡಿದ ನೀರನ್ನು ಗೃಹೇತರ ಉದ್ದೇಶಗಳಿಗೆ ಬಳಸುವುದು | ಐದು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 211 | (1) | ನೀರಿನ ಪೈಪುಗಳಿಗೆ ಹಾನಿಯಾಗುವಂತೆ ಅಥವಾ ಅವುಗಳಲ್ಲಿನ ನೀರು ಕಲುಷಿತಗೊಳ್ಳುವ ಹಾಗೆ ನೀರಿನ ಪೈಪುಗಳನ್ನು ಹಾಕುವುದು ಇತ್ಯಾದಿ | ಐದು ರೂಪಾಯಿಗಳು |
| | (2) | ನೀರಿನ ಪೈಪುಗಳಿಗೆ ಹಾನಿಯಾಗಬಹುದಾದ ಅಥವಾ ಅವುಗಳಲ್ಲಿನ ನೀರು ಕಲುಷಿತಗೊಳ್ಳಬಹುದಾದ ಸ್ಥಳದಲ್ಲಿ ಕಕ್ಕಸು, ಮುಂತಾದವುಗಳನ್ನು ನಿರ್ಮಾಣ ಮಾಡುವುದು | ಒಂದು ನೂರು ರೂಪಾಯಿಗಳು |
| 223 | | ನಗರಪಾಲಿಕೆಯ ಒಳಚರಂಡಿಗಳ ಅಥವಾ ಚರಂಡಿಗಳ ಅಥವಾ ನಗರಪಾಲಿಕೆಯ ಒಳಚರಂಡಿಗಳಿಗೆ ಸಂಪರ್ಕ ಕಲ್ಪಿಸುವ ಒಳಚರಂಡಿಗಳಲ್ಲಿನ ವಸ್ತುಗಳು ಸಲೀಸಾಗಿ ಹರಿದುಹೋಗುವುದಕ್ಕೆ ಹಾನಿಯುಂಟುಮಾಡುವುದು ಅಥವಾ ಅಡ್ಡಿ ಅಡಚಣೆ ಉಂಟುಮಾಡುವುದು | ಐವತ್ತು ರೂಪಾಯಿಗಳು |
| 224 | (2) | ನೋಟೀಸು ನೀಡದೆ ಖಾಸಗಿ ಚರಂಡಿಗಳನ್ನು ನಗರಪಾಲಿಕೆಯ ಒಳಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | ಐದು ರೂಪಾಯಿಗಳು |
| 225 | | ಚರಂಡಿ ವ್ಯವಸ್ಥೆಯಿಲ್ಲದ ಆವರಣಗಳಿಗೆ ಚರಂಡಿ ವ್ಯವಸ್ಥೆ ಕಲ್ಪಿಸಲು ನೀಡಿದ ಸೂಚನೆಯನ್ನು ಪಾಲಿಸದಿರುವುದು | ಇಪ್ಪತ್ತೈದು ರೂಪಾಯಿಗಳು |
| 233 | | ಲಿಖಿತ ಅನುಮತಿ ಇಲ್ಲದೆ ಒಳಚರಂಡಿಗಳೊಂದಿಗೆ ಸಂಪರ್ಕ ಕಲ್ಪಿಸುವುದು | ಐವತ್ತು ರೂಪಾಯಿಗಳು |
| 236 | (4) | ಪೈಪನ್ನು ಅಥವಾ ಚರಂಡಿಯನ್ನು ಮುಚ್ಚಲು ಅಥವಾ ತೆಗೆದುಹಾಕಲು ಅಥವಾ ಅದರ ಮಾರ್ಗವನ್ನು ಬದಲಾಯಿಸಲು ನೀಡಿದ ಸೂಚನೆಯನ್ನು ಪಾಲಿಸದಿರುವುದು | ಐದು ರೂಪಾಯಿಗಳು |
| 242 | (3) | ಉಪವಿಧಿಗಳಿಗನುಗುಣವಾಗಿ ಮನೆಯ ಚರಂಡಿಗಳು ಇತ್ಯಾದಿಗಳನ್ನು ನಿರ್ವಹಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 246 | (2) | ಲೈಸೆನ್ಸ್ ಇಲ್ಲದೆ ಸಾರ್ವಜನಿಕ ಕಕ್ಕಸ್ಸನ್ನು ನಿರ್ವಹಣೆ ಮಾಡುವುದು | ಹತ್ತು ರೂಪಾಯಿಗಳು |
| 246 | (3) | ಸಾರ್ವಜನಿಕ ಕಕ್ಕಸ್ಸನ್ನು ಸ್ವಚ್ಛವಲ್ಲದ ಸ್ಥಿತಿಯಲ್ಲಿ ಮತ್ತು ಸರಿಯಲ್ಲದ ರೀತಿಯಲ್ಲಿ ಇಟ್ಟಿರುವುದು | ಹತ್ತು ರೂಪಾಯಿಗಳು |
| 247 | | ಕಕ್ಕಸಿಗೆ ವ್ಯವಸ್ಥೆ ಮಾಡುವಂತೆ ಅಥವಾ ಬೇರೊಂದು ಸ್ಥಳಕ್ಕೆ ಕಕ್ಕಸನ್ನು ಸ್ಥಳಾಂತರಿಸುವಂತೆ ನೀಡಿದ ಸೂಚನೆಯನ್ನ ಪಾಲಿಸಲು ತಪ್ಪುವುದು ಮತ್ತು ಕಕ್ಕಸುಗಳನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 248 | | ಹೆಚ್ಚಿನ ಸಂಖ್ಯೆಯ ಜನರು ಬಳಸುವ ಆವರಣಗಳಿಗೆ ಕಕ್ಕಸುಗಳನ್ನು ವ್ಯವಸ್ಥೆಮಾಡಲು ಅಥವಾ ಅವುಗಳನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಇಪ್ಪತ್ತು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 249 | | ಮಾರುಕಟ್ಟೆ, ದನಗಳ ಕೊಟ್ಟಿಗೆ ಅಥವಾ ಗಾಡಿಗಳ ನಿಲ್ದಾಣಗಳಲ್ಲಿ ಕಕ್ಕಸುಗಳನ್ನು ವ್ಯವಸ್ಥೆಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು ಅಥವಾ ಅವುಗಳನ್ನು ಸ್ವಚ್ಛವಾದ ಮತ್ತು ಸರಿಯಾದ ರೀತಿಯಲ್ಲಿ ನಿರ್ವಹಿಸಲು ತಪ್ಪುವುದು | ಇಪ್ಪತ್ತು ರೂಪಾಯಿಗಳು |
| 263 | (1) ಮತ್ತು (4) | ಇಪ್ಪತ್ತನಾಲ್ಕು ಗಂಟೆಗಳಿಗಿಂತ ಹೆಚ್ಚಿಗೆ ಆವರಣಗಳಲ್ಲಿ ಕಸಕಡ್ಡಿ ಅಥವಾ ಹೊಲಸು ರಾಶಿ ಬೀಳಲು ಅವಕಾಶ ಮಾಡಿಕೊಡುವುದು | ಹತ್ತು ರೂಪಾಯಿಗಳು |
| 272 | | ಅನುಮತಿ ಇಲ್ಲದೇ ಬೀದಿ ಪಂಕ್ತೀಕರಣದಲ್ಲಿ ಅಥವಾ ಕಟ್ಟಡದ ಸಾಲಿನಲ್ಲಿ ಕಟ್ಟಡವನ್ನು ನಿರ್ಮಿಸುವುದು | ಒಂದು ನೂರು ರೂಪಾಯಿಗಳು |
| 287 | | ಶಾಶ್ವತ ಒತ್ತುವರಿಯನ್ನು ತೆರವುಮಾಡಲು ತಪ್ಪುವುದು | ಹತ್ತು ರೂಪಾಯಿಗಳು |
| 288 | | ತಾತ್ಕಾಲಿಕ ಒತ್ತುವರಿಯನ್ನು ತೆರವುಮಾಡಲು ತಪ್ಪುವುದು | ಐದು ರೂಪಾಯಿಗಳು |
| 291 | (1) | ಬೀದಿಯಲ್ಲಿ ಕಾನೂನುಬಾಹಿರವಾಗಿ ಗುಂಡಿ ತೋಡುವುದು ಅಥವಾ ಅಡೆತಡೆ ಉಂಟುಮಾಡುವುದು | ಹತ್ತು ರೂಪಾಯಿಗಳು |
| 292 | | ಬೀದಿಗೆ ಅಥವಾ ಕಾಲುದಾರಿಗೆ ಅಡೆತಡೆ ಉಂಟಾಗುವ ಸಂಭವವಿರುವಂತೆ, ಲೈಸೆನ್ಸ್ ಇಲ್ಲದೆ ಕಟ್ಟಡ ಕಟ್ಟುವುದು, ಇತ್ಯಾದಿ | ಹತ್ತು ರೂಪಾಯಿಗಳು |
| 297 | (1) | ಬೀದಿಗಳ ಮೂಲೆಗಳಲ್ಲಿನ ಕಟ್ಟಡಗಳನ್ನು ನೇರ್ಪಡಿಸಲು ಅಥವಾ ಎದ್ದುಕಾಣುವಂತೆ ಮಾಡಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಐವತ್ತು ರೂಪಾಯಿಗಳು |
| 298 | | ಸುಲಭ ದಹ್ಯ ಸಾಮಗ್ರಿಗಳಿಂದ ಹೊರ ಛಾವಣಿಯ ನಿರ್ಮಾಣ, ಮರುನಿರ್ಮಾಣ ಅಥವಾ ಅಂಥ ಹೊರ ಛಾವಣಿಯನ್ನು ಉಳಿಸಿಕೊಳ್ಳುವುದು, ಇತ್ಯಾದಿ | ಹತ್ತು ರೂಪಾಯಿಗಳು |
| 319 | | ಆವರಣಗಳ ಹೊರ ಗೋಡೆಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ತಪ್ಪುವುದು | ಹತ್ತು ರೂಪಾಯಿಗಳು |
| 324 | | ಹಾದುಹೋಗುವವರಿಗೆ ಅಥವಾ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳಿಗೆ ಅಪಾಯಕಾರಿಯಾದ ಕೆರೆಯನ್ನು ಅಥವಾ ಇತರ ಸ್ಥಳವನ್ನು ದುರಸ್ತಿ, ಇತ್ಯಾದಿ ಮಾಡುವ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 325 | | ಬೆಂಕಿ ಆಕಸ್ಮಿಕದ ಬಗ್ಗೆ ಮುನ್ನೆಚ್ಚರಿಕೆಗಳಿಗೆ ಸಂಬಂಧಿಸಿದ ನೋಟೀಸನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 327 | | ಅಪಾಯಕಾರಿ ಕಲ್ಲುಗಣಿ ಕೆಲಸವನ್ನು ನಿಲ್ಲಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 328 | | ಕೆರೆ ಅಥವಾ ಬಾವಿಯನ್ನು ಮುಚ್ಚುವುದು, ಇತ್ಯಾದಿ ಬಗ್ಗೆ ಅಥವಾ ಅದರಲ್ಲಿನ ನೀರನ್ನು ಹೊರಹರಿಸಿ | ಹತ್ತು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| | | ಬರಿದು ಮಾಡುವುದು, ಇತ್ಯಾದಿ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ರೂಪಾಯಿಗಳು |
| 329 | | ಕುಡಿಯುವುದಕ್ಕೆ, ಸ್ನಾನ ಮಾಡುವುದಕ್ಕೆ ಅಥವಾ ಬಟ್ಟೆ ಒಗೆಯುವುದಕ್ಕೆ ಬಳಸುವ ಕೆರೆಗಳು, ಬಾವಿ, ಇತ್ಯಾದಿಗಳನ್ನು ಅಥವಾ ನೀರಿನ ಇತರ ಮೂಲಗಳನ್ನು ಸ್ವಚ್ಛಗೊಳಿಸುವುದು, ಮುಚ್ಚುವುದು, ಇತ್ಯಾದಿ ಬಗ್ಗೆ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 332 | | ಒಕ್ಕಲಿಲ್ಲದ ಆವರಣಗಳನ್ನು ಸುತ್ತುಗಟ್ಟುಹಾಕಲು, ತೆರವುಗೊಳಿಸಲು ಅಥವಾ ಸ್ವಚ್ಛಗೊಳಿಸಲು, ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 333 | | ಹೊಲಸು ಸ್ಥಿತಿಯಲ್ಲಿರುವ ಅಥವಾ ಯಾವುದೇ ದಟ್ಟವಾದ ಅಥವಾ ಹಾನಿಕಾರಕವಾದ ಸಸ್ಯಗಳು ಮಿತಿಮೀರಿ ಬೆಳೆದಿರುವ ಕಟ್ಟಡವನ್ನು ಅಥವಾ ಭೂಮಿಯನ್ನು ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 334 | | ಕಲ್ಲಿದ್ದಲು ಬೂದಿ, ಇತ್ಯಾದಿಗಳನ್ನು ರಾಶಿ ಹಾಕುವುದು ಮುಂತಾದವುಗಳಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಉಪದ್ರವವನ್ನು ನಿವಾರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಇಪ್ಪತ್ತು ರೂಪಾಯಿಗಳು |
| 335 | | ಕಟ್ಟಡಕ್ಕೆ ಅಥವಾ ಭೂಮಿಗೆ ಬೇಲಿ ಹಾಕಲು ಅಥವಾ ಬೇಲಿಗಳನ್ನು ಅಥವಾ ಮರಗಳನ್ನು ಕತ್ತರಿಸಿ ಸಮಮಾಡಲು, ಸವರಲು ಅಥವಾ ಕತ್ತರಿಸಿಹಾಕಲು ಅಥವಾ ಸುತ್ತುಗಟ್ಟಿರುವ ಗೋಡೆ ಎತ್ತರವನ್ನು ತಗ್ಗಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 336 | | ಕಟ್ಟಡಕ್ಕೆ ಸುಣ್ಣ ಬಳಿಯಲು ಅಥವಾ ಅನ್ಯಥಾ ಅದನ್ನು ಸ್ವಚ್ಛಗೊಳಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 338 | | ನೈರ್ಮಲ್ಯಕರವಲ್ಲದ ಕಟ್ಟಡಗಳಿಗೆ ಸಂಬಂಧಿಸಿದಂತೆ ಕೆಲಸವನ್ನು ನಿರ್ವಹಿಸಲು ಅಥವಾ ಇತರ ಕ್ರಮಗಳನ್ನು ತೆಗೆದುಕೊಳ್ಳಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಕಲ್ಲು ಕಟ್ಟಡದ ಸಂದರ್ಭದಲ್ಲಿ ಹತ್ತು ರೂಪಾಯಿಗಳು ಮತ್ತು ಗುಡಿಸಲುಗಳ ಸಂದರ್ಭದಲ್ಲಿ ಐದು ರೂಪಾಯಿಗಳು |
| 343 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ವಸತಿಗೃಹ, ಉಪಾಹಾರಗೃಹ, ಚಹಾ ಅಂಗಡಿ ಮೊದಲಾದವುಗಳನ್ನು ಇಡುವುದು | ಒಂದು ನೂರು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 344 | (J) | ಕಾನೂನುಬಾಹಿರವಾಗಿ ಹಂದಿಗಳನ್ನು ಸಾಕುವುದು | ಐದು ರೂಪಾಯಿಗಳು |
| | (©) | ಉಪದ್ರವಕಾರಿಯಾಗುವಂತೆ ಅಥವಾ ಅಪಾಯಕಾರಿ ಯಾಗುವಂತೆ ಪ್ರಾಣಿಗಳನ್ನು ಕಾನೂನುಬಾಹಿರವಾಗಿ ಸಾಕುವುದು | ಐದು ರೂಪಾಯಿಗಳು |
| 346 | | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಕುದುರೆ ಲಾಯ, ದನದ ಕೊಟ್ಟಿಗೆ ಮುಂತಾದುವಕ್ಕೆ ಸ್ಥಳವನ್ನು ಬಳಸುವುದು | ಹತ್ತು ರೂಪಾಯಿಗಳು |
| 347 | | ಅಧಿನಿಯಮಕ್ಕೆ ಅಥವಾ ಸಹಾಯಕ ಶಾಸನಕ್ಕೆ ತದ್ವಿರುದ್ಧವಾಗಿ ಕುದುರೆ ಲಾಯ, ದನದ ಕೊಟ್ಟಿಗೆ ಮುಂತಾದವುಗಳನ್ನು ನಿರ್ಮಿಸುವುದು ಅಥವಾ ನಿರ್ವಹಿಸುವುದು | ಹತ್ತು ರೂಪಾಯಿಗಳು |
| 349 | | ಸಾರ್ವಜನಿಕ ಸ್ಥಳವನ್ನು ಅಥವಾ ಸಾರ್ವಜನಿಕ ಬೀದಿಯ ಬದಿಗಳನ್ನು ಗಾಡಿ ನಿಲ್ದಾಣ ಇತ್ಯಾದಿಯಾಗಿ ಬಳಸುವುದು, ಇತ್ಯಾದಿ | ಇಪ್ಪತ್ತು ರೂಪಾಯಿಗಳು |
| 351 | | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಹೊಸ ಖಾಸಗಿ ಗಾಡಿ ನಿಲ್ದಾಣವನ್ನು ಪ್ರಾರಂಭಿಸುವುದು ಅಥವಾ ಇಟ್ಟುಕೊಂಡು ಬರುವುದು | ಇಪ್ಪತ್ತು ರೂಪಾಯಿಗಳು |
| 352 | | ಪ್ರಾಣಿಗಳ ಶವಗಳನ್ನು ತೆಗೆದುಹಾಕಲು ತಪ್ಪುವುದು | ಐದು ರೂಪಾಯಿಗಳು |
| 353 | (1) | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್ಸ್‌ಗೆ ತದ್ವಿರುದ್ಧವಾಗಿ ಅನುಸೂಚಿ-ಫಿರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಕ್ಕಾಗಿ ಸ್ಥಳವನ್ನು ಬಳಸುವುದು | ಐವತ್ತು ರೂಪಾಯಿಗಳು |
| 354 | (1), (2) ಮತ್ತು(3) | ಕಾರ್ಖಾನೆಯ ಕಾರ್ಯಾಗಾರ, ಕಾರ್ಯಸ್ಥಳ ಅಥವಾ ಯಂತ್ರಸಾಮಗ್ರಿಯನ್ನು ಕಾನೂನುಬಾಹಿರವಾಗಿ ಸ್ಥಾಪಿಸುವುದು | ಒಂದು ನೂರು ರೂಪಾಯಿಗಳು |
| | (5) | ಚಿಮಣಿಗಳಿಗೆ ಸಂಬಂಧಿಸಿದ ಆದೇಶವನ್ನು ಉಲ್ಲಂಘಿಸುವುದು | ಐವತ್ತು ರೂಪಾಯಿಗಳು |
| 355 | (1) | ಉಪದ್ರವವನ್ನು ನಿವಾರಿಸುವುದಕ್ಕೆ ಸಂಬಂಧಿಸಿದ ಆದೇಶವನ್ನು ಉಲ್ಲಂಘಿಸುವುದು | ಒಂದು ನೂರು ರೂಪಾಯಿಗಳು |
| 355 | (2) | ಕಾರ್ಖಾನೆ, ಇತ್ಯಾದಿಗಳ ಕಾರ್ಯನಿರ್ವಹಣೆಯನ್ನು ಅಥವಾ ವಿಶಿಷ್ಟ ಬಗೆಯ ಇಂಧನದ ಬಳಕೆಯನ್ನು ನಿಷೇಧಿಸುವ ಆದೇಶವನ್ನು ಉಲ್ಲಂಘಿಸುವುದು | ಎರಡು ನೂರು ರೂಪಾಯಿಗಳು |
| 357 | | ಕಾರ್ಖಾನೆ, ಇತ್ಯಾದಿಗಳನ್ನು ಸುಸ್ಥಿತಿಯಲ್ಲಿಡುವುದಕ್ಕಾಗಿ, ಅತಿಯಾಗಿ ದಟ್ಟೈಸುವುದು, ಇತ್ಯಾದಿಯನ್ನು ಕಡಿಮೆ ಮಾಡುವುದಕ್ಕಾಗಿ ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಒಂದು ನೂರು ರೂಪಾಯಿಗಳು |

| ಪ್ರಕರಣ ಅಥವಾ ನಿಯಮ | ಉಪ-ಪ್ರಕರಣ ಅಥವಾ ಖಂಡ | ವಿಷಯ | ವಿಧಿಸಬಹುದಾದ ಜುಲ್ಮಾನೆ |
|---|---|---|---|
| (1) | | (2) | (3) |
| 358 | | ಉಪದ್ರವ ಅಥವಾ ಪ್ರಾಣಕ್ಕೆ ಅಪಾಯ ಮುಂತಾದವನ್ನು ನಿವಾರಿಸಲು ನೀಡಿದ ಆದೇಶವನ್ನು ಉಲ್ಲಂಘಿಸುವುದು | ಒಂದು ನೂರು ರೂಪಾಯಿಗಳು |
| 365 | | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್‌ಸ್‌ಗೆ ತದ್ವಿರುದ್ಧವಾಗಿ ಸ್ಥಳವನ್ನು ಕಸಾಯಿಖಾನೆಯಾಗಿ ಬಳಸುವುದು | ಐವತ್ತು ರೂಪಾಯಿಗಳು |
| 371 | | ಲೈಸೆನ್ಸ್ ಪಡೆಯದೆ ಅಥವಾ ಅನುಮತಿಗೆ ತದ್ವಿರುದ್ಧವಾಗಿ ಖಾಸಗಿ ಮಾರುಕಟ್ಟೆಯನ್ನು ಸ್ಥಾಪಿಸುವುದು | ಒಂದು ನೂರು ರೂಪಾಯಿಗಳು |
| 372 | | ಲೈಸೆನ್ಸ್ ಪಡೆಯದೆ ಅಥವಾ ಲೈಸೆನ್‌ಸ್‌ಗೆ ತದ್ವಿರುದ್ಧವಾಗಿ ಖಾಸಗಿ ಮಾರುಕಟ್ಟೆಯನ್ನು ತೆರೆದಿಡುವುದು | ಒಂದು ನೂರು ರೂಪಾಯಿಗಳು |
| 378 | | ಮಾರುಕಟ್ಟೆ ವಿನಿಯಮಗಳನ್ನು ಉಲ್ಲಂಘಿಸುವುದು | ಹತ್ತು ರೂಪಾಯಿಗಳು |
| 379 | | ಕುಷ್ಠರೋಗದಿಂದ ಅಥವಾ ಇತರ ಸೋಂಕು ಅಥವಾ ಅಂಟುರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ಹೊರಹಾಕಲು ಮಾರುಕಟ್ಟೆಗಳ ಪ್ರಭಾರದಲ್ಲಿರುವ ವ್ಯಕ್ತಿಗಳು ತಪ್ಪುವುದು | ಐವತ್ತು ರೂಪಾಯಿಗಳು |
| 381 | | ಲೈಸೆನ್ಸ್ ಇಲ್ಲದೆ ಕಟುಕನ, ಮಿÁನು ಮಾರುವವನ ಅಥವಾ ಕೋಳಿ ಮಾರುವವನ ಕಸುಬನ್ನು ನಡೆಸುವುದು, ಇತ್ಯಾದಿ | ಹತ್ತು ರೂಪಾಯಿಗಳು |
| 392 | | ಲೈಸೆನ್ಸ್ ಇಲ್ಲದೆ ಮೃತರ ವಿಲೆಗಾಗಿ ಸ್ಥಳವನ್ನು ತೆರೆಯುವುದು, ಇತ್ಯಾದಿ | ಒಂದು ನೂರು ರೂಪಾಯಿಗಳು |
| 406 | | ಕಟ್ಟಡವನ್ನು ಅಥವಾ ವಸ್ತುವನ್ನು ಸ್ವಚ್ಛಗೊಳಿಸಲು ಅಥವಾ ಅದರ ಸೋಂಕು ನಿವಾರಿಸಲು ನೀಡಿದ ಸೂಚನೆಯನ್ನು ಪಾಲಿಸಲು ತಪ್ಪುವುದು | ಹತ್ತು ರೂಪಾಯಿಗಳು |
| 410 | | ಸೋಂಕು ತಗುಲಿದ ವ್ಯಕ್ತಿಯು ವೃತ್ತಿಯನ್ನು ನಡೆಸುವುದು | ಐವತ್ತು ರೂಪಾಯಿಗಳು |
| 414 | | ಸಾರ್ವಜನಿಕ ಮನೋರಂಜನಾ ಸ್ಥಳವನ್ನು ಮುಚ್ಚಲು ತಪ್ಪುವುದು | ಒಂದು ನೂರು ರೂಪಾಯಿಗಳು |
| 417 | | ನಿಷೇಧಿಸಿದ ತರುವಾಯವು ನೀರನ್ನು ಬಳಸುವುದು | ಐವತ್ತು ರೂಪಾಯಿಗಳು |

**XXX XXX XXX**

**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉದ್ಧೃತ ಭಾಗ**

**XXX XXX XXX**

**73. ಅಪರಾಧಗಳು ಮತ್ತು ದಂಡನೆಗಳು:- XXX XXX XXX**

- ಅವನು ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಆ ನ್ಯಾಯಾಲಯವು, ಅಪರಾಧ ನಿರ್ಣಯದ ಅಂಥ

ಆದೇಶದಲ್ಲಿ, ಅಂಥ ಉಲ್ಲಂಘನೆಯು ಅಪರಾಧ ನಿರ್ಣಯದ ಆದೇಶದ ದಿನಾಂಕದ ತರುವಾಯ ಮುಂದುವರೆದರೆ, ಆ ಉಲ್ಲಂಘನೆಯು ಯಾವ ಅವಧಿಯಿಂದ ಮುಂದುವರಿಯಿತೋ ಆ ಅವಧಿಗೆ ಪ್ರತಿ ದಿವಸಕ್ಕೆ ಇನ್ನೂರ ಐವತ್ತು ರೂಪಾಯಿಗಳನ್ನು ಮೀರದ ಜುಲ್ಮಾನೆಯನ್ನು ಹಾಗೆ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯಿಂದ ವಸೂಲು ಮಾಡತಕ್ಕದ್ದೆಂದು ನಿರ್ದೇಶಿತಕ್ಕದ್ದು:

**XXX XXX XXX**

**76ಡಿ. ಕಂಟ್ರಾಕ್ಟರನಿಗೆ ಅಡ್ಡಿಪಡಿಸುವುದಕ್ಕಾಗಿ ಅಥವಾ ಗುರುತನ್ನು ತೆಗೆದುಹಾಕುವುದಕ್ಕಾಗಿ ದಂಡನೆ:-** ಯಾರೇ ವ್ಯಕ್ತಿಯು,-

(ಎ) ಮಂಡಲಿಯು ಅಥವಾ ಯಾವುದೇ ಯೋಜನಾ ಪ್ರಾಧಿಕಾರಿಯು ತೊಡಗಿಸಿದ ಅಥವಾ ನಿಯೋಜಿಸಿದ ಯಾರೇ ವ್ಯಕ್ತಿಯನ್ನು ಅಥವಾ ವ್ಯಕ್ತಿಯೊಂದಿಗೆ ಮಂಡಲಿಯು ಅಥವಾ ಯೋಜನಾ ಪ್ರಾಧಿಕಾರವು ಕರಾರನ್ನು ಮಾಡಿಕೊಂಡಿರುವುದೋ ಆ ಯಾರೇ ವ್ಯಕ್ತಿಯನ್ನು ಅವನ ಕರ್ತವ್ಯವನ್ನು ಅಥವಾ ಈ ಅಧಿನಿಯಮದ ಮೇರೆಗೆ ಯಾವ ಕಾರ್ಯವನ್ನು ಮಾಡಲು ಅವನನ್ನು ಶಕ್ತಗೊಳಿಸಲಾಗಿದೆಯೋ ಅಥವಾ ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಕಾರ್ಯವನ್ನು ಅಂಥ ವ್ಯಕ್ತಿಯು ನೆರವೇರಿಸುವಲ್ಲಿ ಅಥವಾ ನಿರ್ವಹಿಸುವಲ್ಲಿ, ಅಡ್ಡಿಪಡಿಸಿದರೆ ಅಥವಾ ಅವನಿಗೆ ಉಪದ್ರವಕೊಟ್ಟರೆ; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಿದ ಕಾಮಗಾರಿಗಳ ನಿರ್ವಹಣೆಗೆ ಅವಶ್ಯವಾದ ಯಾವುದೇ ಮಟ್ಟವನ್ನು ಅಥವಾ ದಿಕ್ಕನ್ನು ಸೂಚಿಸುವ ಉದ್ದೇಶಕ್ಕಾಗಿ ನಿಲ್ಲಿಸಿರುವ ಯಾವುದೇ ಗುರುತನ್ನು ತೆಗೆದುಹಾಕಿದರೆ,

-ಅವನು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಎರಡು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**XXX XXX XXX**

**ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 45)ರ ಉದ್ಧೃತ ಭಾಗ**

**XXX XXX XXX**

**19. ದಂಡ.- XXX XXX XXX**

(2) ಯಾವುದೇ ಉತ್ಪಾದನಾ ಕೈಗಾರಿಕೆ ಅಥವಾ ಉದ್ಯಮವು ಸ್ವೀಕೃತಿ ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸುವಾಗ ನೋಡಲ್ ಏಜೆನ್ಸಿಗೆ ನೀಡಿದ ಮುಚ್ಚಳಿಕೆ ಅಥವಾ ಸ್ವಯಂ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪಾಲಿಸುವಲ್ಲಿ ವಿಫಲವಾದರೆ ಅಥವಾ ಕೈಗಾರಿಕಾ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅನ್ವಯಿಸಬಹುದಾದ ಅಧಿನಿಯಮ ಅಥವಾ ನಿಯಮದಲ್ಲಿನ ಯಾವುದೇ ಖಂಡವನ್ನು ಉಲ್ಲಂಘಿಸಿದರೆ, ಅಪರಾಧ ನಿರ್ಣೀತವಾದ ಮೇಲೆ ಮೊದಲ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ಎರಡನೇ ಹಾಗೂ ಮುಂದುವರಿದ ಅಪರಾಧಕ್ಕಾಗಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತವಾಗತಕ್ಕದ್ದು ಇದರ ಜೊತೆಗೆ, ಸಂಬಂಧಿತ ಇಲಾಖೆಗಳು ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ದಂಡನಾಕ್ರಮವನ್ನು ಪ್ರಾರಂಭಿಸತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 250, 16ನೇ ಆಗಸ್ಟ್ 2025